MOTHER'S LIGHT

Compiled from the writings of the Mother

ಆಶೀರ್ವಾದಗಳು

" ಶ್ರೀ ಅರವಿಂದರ ಗ್ರಂಥಗಳ ಅನುವಾದಕ್ಕೆ ನಿಮ್ಮಶೈಲಿ ಹವಣಾಗಿದೆ. ಪ್ರೌಢಿ, ಔಚಿತ್ಯ, ಅರ್ಥಪರಿಸ್ಫುಟತೆ- ಒತ್ತಟ್ಟಿಗೆ ತರುವುದು ಕಷ್ಟ; ಅದರಲ್ಲೂ ಶ್ರೀ ಅರವಿಂದರ ವಿಚಾರಧಾರೆಗೆ ಆತಂಕ ಒಡ್ಡದೆ! ಅನುವಾದವು ಸಾರಗರ್ಭಿತವಾಗಿದೆ; ಜ್ಞಾನಪಿಪಾಸುಗಳಿಗೂ ವಿಚಾರಪ್ರಿಯರಿಗೂ ಉತ್ತಮ ಅನ್ನಪಾನ ಒದಗಿಸುತ್ತಿದೆ."

—ಪ್ರೊ. ದ. ರಾ. ಬೇಂದ್ರೆ

" ಶ್ರೀ ಅರವಿಂದರ ಹೊತ್ತಿಗೆಯನ್ನು ನೀವು ಕನ್ನಡಿಸುವ ವಿಷಯವನ್ನು ಪ್ರೊ. ಶಾಸ್ತ್ರಿಯವರು ನನಗೆ ಹೇಳಿದರು. ಈಗ ಒಂದು ಫಾರ್ಮು ನನ್ನ ಕೈಸೇರಿದೆ. ಈ ಕಾರ್ಯ ನೀವು ಕೈಕೊಂಡದ್ದು ಒಳ್ಳೆಯದು. ಭಾಷಾಪ್ರವೀಣ, ವಿಶಿಷ್ಟವಿಷಯ ಪ್ರವೀಣರಿಬ್ಬರೂ ಸೇರಿದ್ದು ಇನ್ನೂ ಒಳ್ಳೆಯದು. ಶ್ರೀ ಅರವಿಂದರ ಆಂಗ್ಲ ಬರೆಹಗಳನ್ನು ಕನ್ನಡಕ್ಕೆ ತರುವದು ಸುಲಭವಾದ ಮಾತಲ್ಲವೆಂದು ನಾನು ಕಂಡುಕೊಂಡಿದ್ದೇನೆ. ಮೂಲದಲ್ಲಿಯ ಸುದೀರ್ಘ ವಾಕ್ಯಗಳು, ಜಟಿಲವಾದ ರಚನೆ, ನಿರ್ದಿಷ್ಟ ಅರ್ಥದ ಅಪೂರ್ವ ಪದಗಳು- ಇತ್ಯಾದಿ ತೊಡಕುಗಳನ್ನು ನಾವು ಎದುರಿಸಬೇಕಾಗುತ್ತದೆ......... ರಚನೆಯ ಸ್ವಾಭಾವಿಕತೆ, ಸುಲಲಿತ ಹಾಗು ಸುಪರಿಚಿತ ಪದಗಳ ಹೊಂದಿಕೆ ಈ ವಿಷಯದಲ್ಲಿ ನಾವು ಹೆಚ್ಚಾಗಿ ಜಾಗರೂಕರಾಗಿರಬೇಕಾಗುತ್ತದೆ. ಅಲ್ಲದೆ ಒಬ್ಬೊಬ್ಬರ ಮನೋಧರ್ಮ ಒಂದು ವಿಧವೆಂಬ ಮಾತು ಅನಿವಾರ್ಯ."

—ಪ್ರೊ. ಸ. ಸ. ಮಾಳವಾಡ

~~For favour of a kind review~~

~~To the Editor~~

~~"Nāgarika"~~

~~with best compliments~~

~~from~~

B. H. Sundharan

25/

B. H. Sundhara

ಹವಣಾ
ವುದು
ಒಡ್ಡದೆ
ಗಳಿಗೂ

ವಿಷ
ಫಾರ್ಮು
ಯ
ಇ
ಡ
ಡಿ
ನಿ
ನ
ಲ

ಭಾರತೀಯ ರಾಜ್ಯಧರ್ಮದ ಸತ್ವ ಮತ್ತು ಸ್ವರೂಪ

ಶ್ರೀ ಅರವಿಂದರು

ಅನುವಾದಕರು:

ಪ್ರೊ. ಎನ್. ರಾಜಗೋಪಾಲರಾವ್, ಎಂ. ಎ.

ಮತ್ತು

ಪ್ರೊ. ಬಿ. ಎಚ್. ಶ್ರೀಧರ, ಎಂ. ಎ.

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ

ಪ್ರಥಮ ಆವೃತ್ತಿ
೧೫ ಮಾರ್ಚ್, ೧೯೫೫


ಬೆಲೆ: ಒಂದು ರೂಪಾಯಿ.

ಪ್ರಕಾಶಕರು: ಸುಲಭ ಸಾಹಿತ್ಯ ಪ್ರಕಾಶನ, ಕುಮುಟಾ.

ಮುದ್ರಕರು: ಶ್ರೀ ರಮಣ ಮುದ್ರಣಾಲಯ, ಕುಮುಟಾ.

ಅನುಕ್ರಮಣಿಕೆ.

ನಾಲ್ಕನೆಯ ಅಧ್ಯಾಯ:



ಶ್ರೀ ಅರವಿಂದರು

ಎರಡು ಮಾತು

ಶ್ರೀ ಅರವಿಂದರ ಬಹುಮುಖ ಪ್ರತಿಭೆಯು ಜಗತ್ಪ್ರಸಿದ್ಧ. ಅವರ ದಾರ್ಶನಿಕ ಪ್ರತಿಭಾಶಕ್ತಿಗೆ ಕಾಣದ ವಾಸ್ತವಿಕ ಅಂತಃಸತ್ಯವಿಲ್ಲ. ಭಾರತೀಯ ಇತಿಹಾಸ, ನಾಗರಿಕತೆ, ಕಲೆ, ಸಂಸ್ಕೃತಿ, ತತ್ವಜ್ಞಾನಗಳ ಬಗ್ಗೆ ನಾವು ಪಾಶ್ಚಾತ್ಯ ವಿದ್ವಾಂಸರು ಬರೆದ ಅನೇಕ ಪುಸ್ತಕಗಳನ್ನು ಓದಿದ್ದೇವೆ. ಅವರು ಭಾರತೇತಿಹಾಸವನ್ನು ಬರೆಯುವಾಗ "Primitive" ಎಂಬ ಪದವನ್ನು ಅನೇಕಸಲ ಬಳಸುವುದನ್ನೂ ನಮ್ಮ ಪ್ರಾಚೀನ ಹಾಗೂ ಮಧ್ಯಯುಗೀನ ನಾಗರಿಕತೆಯಲ್ಲಿ 'Pessimism' ಕಾಣಬರುವುದೆಂಬುದನ್ನೂ ಕಂಡಿದ್ದೇವೆ. ಈಗ ಎಚ್ಚೆತ್ತ ಸ್ವತಂತ್ರ ಭಾರತ ತನ್ನ ಚೊಕ್ಕ ಕಣ್ಣಿಂದಲೇ ಗತೇತಿಹಾಸವನ್ನು ಅವಲೋಕಿಸಲಾರಂಭಿಸಿದೆ. ಈ ಸ್ವತಂತ್ರಾವಲೋಕನದ ಒಂದು ಅತ್ಯುತ್ತಮ ಮಾದರಿಯೆಂದರೆ ಶ್ರೀ ಅರವಿಂದರ ಬರೆಹ.

'ಭಾರತೀಯ ರಾಜ್ಯಧರ್ಮದ ಸತ್ವ ಮತ್ತು ಸ್ವರೂಪ' ಎಂಬುದು ಶ್ರೀ ಅರವಿಂದರ "The Foundations of Indian Culture" ಎಂಬ ಹೆಬ್ಬೊತ್ತಗೆಯ ಒಂದು ಭಾಗ. ರಾಜಕೀಯ ದೃಷ್ಟಿ ಇಂದಿನ ಭಾರತದಲ್ಲಿ ಮಿಕ್ಕೆಲ್ಲ ಜೀವನ ಕ್ಷೇತ್ರಗಳನ್ನೂ ಆವರಿಸಿ ಕಾರ್ಯವೆಸಗುತ್ತಿರುವುದರಿಂದ ಆಧುನಿಕ ವಿದ್ಯಾವಂತರು ಭಾರತದ ಹಿಂದಿನ ರಾಜಕೀಯ- ಸಾಮಾಜಿಕ ಜೀವನದ ಅಂಶಗಳನ್ನು ಶ್ರೀ ಅರವಿಂದರು ಹೇಗೆ ಪ್ರತಿಬಿಂಬಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದು ಲಾಭಕರವಾದೀತೆಂದು ನಾವು ಈ ಅರವಿಂದ ವಿಚಾರ ಕುಸುಮದ ಮಕರಂದವನ್ನು ಕನ್ನಡಿಸಲು ಕೈಹಾಕಿದೆವು. ಆಂಗ್ಲ ಗದ್ಯಕ್ಕೂ ಕನ್ನಡ ಗದ್ಯಕ್ಕೂ ಬೆಳವಣಿಗೆಯಲ್ಲಿ ಭೂಮ್ಯಾಕಾಶದಷ್ಟು ಅಂತರವಿರುವುದು ಸರ್ವರಿಗೂ ವಿದಿತ. ಅದರಲ್ಲೂ ಹಿಂದಿನ ಕಾಲದಿಂದಲೂ ಶಾಸ್ತ್ರಜ್ಞಾನಕ್ಕೆ ಸಂಸ್ಕೃತವನ್ನೇ ಕಲಿಯುತ್ತಿದ್ದ ಕನ್ನಡವಿದ್ವಾಂಸರು ಕನ್ನಡ ಶಾಸ್ತ್ರವಾಙ್ಮಯಕ್ಕೆ ಸಲ್ಲಿಸಿದ ಸೇವೆ ಗಣ್ಯವಾಗಿಲ್ಲ. ಆದುದರಿಂದ ಇಂದಿನ ನಮ್ಮ ಪತ್ರಿಕೋದ್ಯೋಗಿಗಳಿಗೆ ನಿತ್ಯವೂ ಬರುತ್ತಿರುವ ಅನುಭವದಂತೆ ನಮಗಾದರೂ ಮೂಲದ ಆಂಗ್ಲಭಾಷೆಯ ಪದಪದ್ಧತಿಯ ಸೌಂದರ್ಯ, ಮಾಧುರ್ಯ, ವೈವಿಧ್ಯ, ಪಾರಿಭಾಷಿಕ ಪ್ರೌಢಿಮೆಗಳನ್ನು ಕನ್ನಡಕ್ಕೆ ತರುವಲ್ಲಿ ಸಾಕಷ್ಟು ಶ್ರಮ ಉಂಟಾಯಿತು. ಶ್ರೀ ಅರವಿಂದರ ಶೈಲಿಯ ಸೊಬಗಿಗೂ ವಸ್ತುವಿನ ಗಾಂಭೀರ್ಯಕ್ಕೂ

ವಾಕ್ಯರಚನೆಯ ಉದ್ದಕ್ಕೂ ಭಂಗ ಬರದಂತೆ ಯಥಾವತ್ತಾಗಿ ಭಾಷಾಂತರಿಸ ಹೊರಟು ಶಕ್ಯವಿದ್ದಷ್ಟುಮಟ್ಟಿಗೆ ಕನ್ನಡ ವ್ಯಾಕರಣ, ಪಡೆನುಡಿ, ಮೇಳನುಡಿ, ಪದಬಂಧಗಳ ನೀತಿಯನ್ನು ಕಾಯ್ದುಕೊಂಡು ಮೂಲವನ್ನೋದಿದಷ್ಟೇ ಪ್ರಯೋಜನ ಓದುಗನಿಗೆ ಪದ-ಅರ್ಥಗಳ ದೃಷ್ಟಿಯಿಂದ ಲಭಿಸುವಂತೆ ಯತ್ನಿಸಿದ್ದೇವೆ. ಆದುದರಿಂದ ಓದುಗನು ಭಾಷಾಂತರದಲ್ಲಿ ದೀರ್ಘವಾಕ್ಯಗಳನ್ನೂ ಸಂಸ್ಕೃತ ಪಾರಿಭಾಷಿಕ ಪದಗಳನ್ನೂ ಎದುರಿಸುವಾಗ ದಯಿಯಿಟ್ಟು ನಮ್ಮ ಉಕ್ತ ಉದ್ದೇಶವನ್ನು ನೆನೆದು ಸಹಾನುಭೂತಿಯಿಂದ ನಿಧಾನವಾಗಿ ಓದಬೇಕೆಂದು ಪ್ರಾರ್ಥನೆ. ಜೊತೆಗೆ ಶ್ರೀ ಅರವಿಂದರ ಗದ್ಯದ ಪದಪುಷ್ಪಮಾಲೆ ಪ್ರಸಿದ್ಧ ಕವಿಯ ಕಾವ್ಯಾಲಂಕಾರಹಾರದಂತಿದೆ. ಅವರ ದೀರ್ಘವಾಕ್ಯಗಳನ್ನು ತುಂಡರಿಸಿ ಅನಲಂಕೃತ ಶೈಲಿಗಿಳಿಸಿದರೆ ಮೂಲ ಸರಸ್ವತಿಯ ರಸವಂತಿಕೆಗೆ ಭಂಗ ತಂದಂತಾಗುತ್ತದೆ; ವಾಕ್ಯಗತಿಯ ಓಜಸ್ಸು, ಲಯ, ತೂಕಗಳನ್ನು ಕಳೆದೊಗೆದಂತಾಗುತ್ತದೆ; ಅವರ ವಾಕ್ಪ್ರೌಢಿಯನ್ನು ಮರೆಗಿಟ್ಟಂತಾಗುತ್ತದೆ. ಅಲ್ಲದೆ ನಾವು ಹಿಡಿದ ಈ ಮಾರ್ಗವನ್ನುಳಿದು ಬರಿ ಸಾರಾಂಶವನ್ನು ತಿಳಿಗನ್ನಡದಲ್ಲಿ ಕೊಟ್ಟರೆ ವಿದ್ವಾಂಸರು ಅರವಿಂದರ ಅಭಿಪ್ರಾಯವನ್ನು ಒಮ್ಮೆ ಉದ್ಧರಿಸಬೇಕೆಂದು ಹೊರಟರೆ ಆಂಗ್ಲಮೂಲವನ್ನೇ ಅರಸುವ ಪ್ರಸಂಗವುಂಟಾಗುತ್ತದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಈ ಅನುವಾದವನ್ನೇ ಆಧಾರವಾಗಿ ತೆಗೆದುಕೊಂಬ ಸೌಕರ್ಯವನ್ನು ಒದಗಿಸಹೊರಟು ಈ ಭಾಷಾಂತರವನ್ನು ಶ್ರೀ ಮಾತೆಯ ಕೃಪೆಯಿಂದ ಓದುಗರ ಮುಂದಿಡಲು ಶಕ್ತರಾಗಿದ್ದೇವೆ. ರಾಜನೀತಿಶಾಸ್ತ್ರದ ಮೇಲೆ ಕನ್ನಡದಲ್ಲಿ ಈ ಪ್ರಥಮಾವಸ್ಥೆಯಲ್ಲಿ ಬರೆದ ಹೊಸ ಪ್ರಯತ್ನವೆಂದು ಮಾನಿಸಿ ಕನ್ನಡಿಗರು ಈ ಕಿಹ್ಬೊತ್ತಿಗೆಯನ್ನು ಬರಮಾಡಿಕೊಂಡು ಈ ಕಾರ್ಯದಲ್ಲಿ ಮುಂಬರಿಯಲು ನಮಗೆ ಪ್ರೋತ್ಸಾಹ ನೀಡುವರೆಂದು ಹೃತ್ಪೂರ್ವಕವಾಗಿ ನಂಬಿದ್ದೇವೆ.

ಪಾರಿಭಾಷಿಕ ಹಾಗೂ ಇತರ ಕಠಿನವೆನಿಸಬಹುದಾದ ಪದಗಳ ಅರ್ಥಕೋಶವನ್ನು ಪುಸ್ತಕದ ಕೊನೆಗೆ ಅನುಬಂಧಿಸಲಾಗಿದೆ. ಮೂಲದಲ್ಲಿ ಅಧ್ಯಾಯವಲ್ಲದೆ ಉಪಶೀರ್ಷಿಕೆಗಳಿಲ್ಲ. ಓದುಗರ ಅನುಕೂಲಕ್ಕಾಗಿ ಅವನ್ನು ನಾವು ಸಿದ್ಧಗೊಳಿಸಿದೆವು.

ಕೆನರಾ ಕಾಲೇಜು, ಕುಮಟೆ — ಅನುವಾದಕರು

ಮಾರ್ಚ ೧೫, ೧೯೫೫. — ಪಿ. ಎಚ್. ಶ್ರೀ

ಭಾರತೀಯ ರಾಜ್ಯಧರ್ಮದ ಸತ್ವ ಮತ್ತು ಸ್ವರೂಪ

ಮೊದಲನೆಯ ಅಧ್ಯಾಯ

ಭಾರತೀಯ ರಾಜ್ಯಧರ್ಮದ ಮೇಲಿನ ಅಸಮರ್ಥತೆಯ ಆರೋಪ:

ಮಾನವ ಸಂಸ್ಕೃತಿಯ ದೃಷ್ಟಿಯಿಂದ ಮುಖ್ಯವೆನಿಸುವ ವಿಷಯಗಳ ಬಗ್ಗೆ, ಅಂದರೆ ಯಾವ ಚಟುವಟಿಕೆಗಳು ಮಾನವನ ಮಾನಸಿಕ, ಆಧ್ಯಾತ್ಮಿಕ, ಧಾರ್ಮಿಕ, ಬೌದ್ಧಿಕ, ನೈತಿಕ, ರಸಾತ್ಮಕ ಅಸ್ತಿತ್ವದಲ್ಲಿ ಅವನನ್ನು ತನ್ನ ಅತ್ಯುಪಾತ್ತ ಅಂತಃಶಕ್ತಿಗೆ ತಕ್ಕಂತೆ ಮೇಲ್ಮಟ್ಟಕ್ಕೊಯ್ಯುವವೋ ಆ ಸಂಗತಿಗಳ ಮೂಲಕ ಭಾರತೀಯ ನಾಗರಿಕತೆಯ ಮಹತ್ವವನ್ನು ಈ ವರೆಗೂ ಹೇಳಿದೆ. ಈ ಎಲ್ಲ ವಿಷಯಗಳಲ್ಲಿ ಪೂರ್ಣವಾಗಿ ಅಥವಾ ಬಿಡಿಬಿಡಿಯಾಗಿ ಈ ಸಂಸ್ಕೃತಿಯ ಸತ್ವ ಮತ್ತು ಉದ್ದೇಶಗಳ ದೃಷ್ಟಿಯಿಂದ ನೋಡಿದಾಗ ಕಂಡು ಬರುವ ವಿಶಾಲತೆ, ಗಹನತೆ ಮತ್ತು ಉನ್ನತಿಗಳ ಹಾಗೂ ವಾಸ್ತವಿಕವಾಗಿ ಸಾಧಿಸಿದ ಅಂಶಗಳ ಸೂಕ್ಷ್ಮಾವಲೋಕದ ಎದುರಿಗೆ ಎಂತಹ ಕುತ್ಸಿತ ವಿಮರ್ಶೆಯಾದರೂ ನುಚ್ಚುನೂರಾಗುತ್ತದೆ. ಅದರಿಂದ ಭಾರತೀಯ ನಾಗರಿಕತೆಯೆಂಬುದು ಒಂದು ಮಹಾನಾಗರಿಕತೆ ಅಷ್ಟೇ ಅಲ್ಲ, ನಮಗೆ ಉಪಲಬ್ಧವಿರುವ ಐತಿಹಾಸಿಕ ದಾಖಲೆಗಳಲ್ಲಿ ಕಾಣುವ ಆರು ನಾಗರಿಕತೆಗಳಲ್ಲಿ ಒಂದು ಎಂಬುದು ಸ್ಪಷ್ಟವಾಗುತ್ತದೆ. ಆದರೆ ಅನೇಕ ಜನರು ಮನಸ್ಸು ಮತ್ತು ಆತ್ಮಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಭಾರತವು ಸಾಧಿಸಿದ ಸಿದ್ಧಿಯ ಮಹತ್ವವನ್ನು ಒಪ್ಪಿದರೂ ಅದು ಜೀವನದಲ್ಲಿ ಅಯಶಸ್ವಿಯಾಗಿದೆ. ಯುರೋಪು ತೋರಿಸುವಂತೆ ಅದರ ಸಂಸ್ಕೃತಿ ಬಲಿಷ್ಠವೂ, ಯಶಸ್ವಿಯೂ ಅಥವಾ ಪ್ರಗತಿಪರವೂ ಆದ ಸಂಘಟಿತ ಜೀವನದಲ್ಲಿ ಪರಿಣಮಿಸಲಿಲ್ಲ; ಅಂತ್ಯದಲ್ಲಿ ಅದರ ಚೈತನ್ಯದ ಅತ್ಯುತ್ತಮಾಂಶವು ಇಹಜೀವನದಿಂದ ವಿಮುಖವಾಗಿ ತಾಪಸ ವೃತ್ತಿಯ ಕಡೆಗೆ ತಿರುಗಿತು, ಮತ್ತು ವ್ಯಕ್ತಿಯು ತನ್ನ ಮೋಕ್ಷಕ್ಕಾಗಿ ಒಂದು ವಿಧವಾದ ನಿಷ್ಕ್ರಿಯವೂ ಅಪ್ರಾಪಂಚಿಕವೂ ಆದ

ವೃತ್ತಿಯ ಕಡೆಗೆ ಹೊರಳಿತು ಎಂದು ಬೊಟ್ಟುಮಾಡಿತೋರಿಸುತ್ತಾರೆ. ಅಷ್ಟಲ್ಲವಾದರೂ ಹೆಚ್ಚೆಂದರೆ ಭಾರತವು ತನ್ನ ಪ್ರಗತಿಯಲ್ಲಿ ಒಂದು ವಿಶಿಷ್ಟ ಮಟ್ಟವನ್ನು ಮುಟ್ಟಿದ ಬಳಿಕ ಅಲ್ಲಿಗೇ ನಿಂತು ಕ್ಷಯವಾಗತೊಡಗಿತು ಎಂದು ಹೇಳುತ್ತಾರೆ.

ಈ ಆರೋಪವು ಇಂದು ಮೌಲ್ಯದ ತ್ರಾಸಿನಲ್ಲಿ ವಿಶೇಷ ಭಾರವನ್ನು ತೋರಿಸುತ್ತದೆ. ಏಕೆಂದರೆ ಆಧುನಿಕ ಮನುಷ್ಯನು – ಆಧುನಿಕ ಸುಸಂಸ್ಕೃತ ಮನುಷ್ಯ ಕೂಡ–ಹಿಂದೆ ಎಂದೂ ಇಲ್ಲದಷ್ಟು ಮಟ್ಟಿಗೆ ರಾಜ–ಕೀಯ, ಆರ್ಥಿಕ ಮತ್ತು ಸಾಮಾಜಿಕ ಜೀವಿಯಾಗಿ ಬಾಹ್ಯಜೀವನದ ಉತ್ಕೃಷ್ಟತೆಯನ್ನು ಮತ್ತು ಯಾಂತ್ರಿಕ ಪ್ರಗತಿಗೆ ಸಹಾಯಕವೆಂದು ಮಾತ್ರ ಮಾನಸಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಅಂಗೀಕರಿಸುತ್ತಾನೆ. ಪೂರ್ವಜರ ಮಹೋನ್ನತ ದೃಷ್ಟಿಯಾಗಲಿ, ಮಾನಸಿಕ ಮತ್ತು ಆಧ್ಯಾತ್ಮಿಕ ಸಿದ್ಧಿಗಳನ್ನು ಮೌನವಾಗಿ ಮೆಚ್ಚುವುದು ಅಥವಾ ಅವನ್ನು ಭಯ ಭಕ್ತಿಗಳಿಂದ ನೋಡುವುದೇ ಸಿದ್ಧಿ ಎಂದು ತಿಳಿದುಕೊಳ್ಳುವದು ಸಂಸ್ಕೃತಿ ಮತ್ತು ಪ್ರಗತಿಗಳಿಗೆ ಮನುಷ್ಯನು ಕೊಡಬಲ್ಲ ಅತಿದೊಡ್ಡ ಕೊಡುಗೆ ಎಂಬ ಭಾವನೆಯಾಗಲಿ ಇಂದಿನ ಮಾನವನಲ್ಲಿ ಇಲ್ಲ.

ಈ ಆಧುನಿಕ ಪ್ರವೃತ್ತಿ ಅತಿಶಯೋಕ್ತಿಘಟಿತವೂ ಅಸುಂದರವೂ ತನ್ನ ಆ ಅತಿಶಯದಲ್ಲಿ ಅಧಃಪಾತಕವೂ ಮಾನವಕುಲದ ಆತ್ಮವಿಕಾಸಕ್ಕೆ ಹಗೆಯೂ ಎನಿಸಿದ್ದರೂ ಅದರಲ್ಲಿ ಈ ಮಟ್ಟಿನ ತಥ್ಯಾಂಶವಿದೆ; ಆಂತರಿಕ ಮಾನವನ, ಅವನ ಮನದ, ಆತ್ಮದ, ಸತ್ವದ ಉನ್ನತಿ–ವಿಸ್ತಾರಗಳನ್ನು ಸಾಧಿಸುವ ಶಕ್ತಿ ಸಂಸ್ಕೃತಿಯ ಪ್ರಥಮ ಮೂಲ್ಯವಾದರೂ ಆತನ ಬಾಹ್ಯ ಜೀವನವನ್ನು ರೂಪಿಸಿ ಮಹೋನ್ನತ ಧ್ಯೇಯಗಳತ್ತ ಏರುವ ಮುನ್ನಡೆಯ ಲಯವನ್ನಾಗಿ ಮಾಡುವವರೆಗೂ ಅದರ ಸಮರ್ಪಕತೆ ಸಂಪೂರ್ಣವೆಂದೆನಿಸದು ಎಂಬುದೇ ಆ ಸತ್ಯಾಂಶ. ಇದೇ ಪ್ರಗತಿಯ ನಿಶ್ಚಿತಾರ್ಥ. ಮತ್ತು ಅದರ ಅಂಗವಾಗಿ ಒಂದು ಸಮರ್ಪಕವಾದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಜೀವನವಿರಬೇಕು; ಬದುಕಿ ಉಳಿಯಲು ಹಾಗೂ ಒಂದು ಸಾಮೂಹಿಕ ಪೂರ್ಣತೆಯತ್ತ ಸುರಕ್ಷಿತವಾಗಿ ಅಭಿವೃದ್ಧಿಹೊಂದುತ್ತಾ

ಹೋಗಲು ಅನುಗೊಳಿಸುವ ಒಂದು ಶಕ್ತಿಯೂ ಕಾರ್ಯದಕ್ಷತೆಯೂ ಇರಬೇಕು; ಅಲ್ಲದೆ ಮನ–ಆತ್ಮಗಳ ಬಾಹ್ಯ ಅಭಿವ್ಯಕ್ತಿಯಲ್ಲಿ ಸತತವಾಗಿ ಮುಂಬರಿಯುವ ಅವಕಾಶವನ್ನೊದಗಿಸುವ ಅತಿ ಮುಖ್ಯವಾದ ಸ್ಥಿತಿಸ್ಥಾಪಕತೆ ಹಾಗೂ ಪ್ರೇರ್ಯತೆ ಇರಬೇಕು. ಒಂದು ಸಂಸ್ಕೃತಿ ಈ ಗುರಿಗಳ ಸಾಧನೆಗೆ ನೆರವಾಗದೆ ಹೋದರೆ ಸಂಪೂರ್ಣ ಹಾಗೂ ಸರ್ವಾಂಗ ಸಮನ್ವಿತ ಮೂಲ್ಯವೊಂದು ತನ್ನಲ್ಲಿದೆ ಎಂಬ ಅದರ ಹೇಳಿಕೆಯಿಂದ ಅದನ್ನು ಗಂಭೀರವಾಗಿ ದೂರ ಇಡುವ ಒಂದು ದೋಷ ಅದರ ಮೂಲಭೂತ ಕಲ್ಪನೆಗಳ, ಅದರ ಸಮಗ್ರತೆಯ ಅಥವಾ ಅದರ ಪ್ರಯೋಗದ ಯಾವುದಾದರೊಂದು ಎಡೆಯಲ್ಲಿ ಅಡಗಿದೆ ಎಂಬುದು ಸುಸ್ಪಷ್ಟ. ಭಾರತೀಯ ಸಮಾಜದ ಸತ್ವ ಮತ್ತು ಸ್ವರೂಪಗಳನ್ನು ನಿಯಂತ್ರಿಸಿದ ಧ್ಯೇಯಗಳು ಅತ್ಯುನ್ನತ ಬಗೆಯವಾಗಿದ್ದವು. ಅದರ ಸಾಮಾಜಿಕ ವ್ಯವಸ್ಥೆಯು ಅಳಿಸಲಶಕ್ಯವಾದ ಮೌಲಿಕ ಸ್ತಿಮಿತತೆಯನ್ನು ಸಾಧಿಸಿತು. ಅದರಲ್ಲಿ ಕಾರ್ಯಗತವಾಗಿದ್ದ ಶ್ರೇಷ್ಠ ಜೀವಸತ್ವವು ಅಸಾಧಾರಣ ಶಕ್ತಿಯನ್ನು ನಿರ್ಮಿಸುವಂಥದಾಗಿತ್ತು, ಅನುಪಮ ಸಂಪನ್ನತೆಯನ್ನೂ ಸದಾಸಕ್ತಿಯನ್ನೂ ಹುಟ್ಟಿಸುವಂಥಾಗಿತ್ತು. ಅದು ಸಂಘಟಿಸಿದ ಜೀವನವು ಐಶ್ವರ್ಯದಲ್ಲೂ ಐಕ್ಯಗತ ವೈವಿಧ್ಯದಲ್ಲೂ, ಅಂದದಲ್ಲೂ, ಉತ್ಪಾದಕತೆಯಲ್ಲೂ ಚಟುವಟಿಕೆಯಲ್ಲೂ ಗಣ್ಯವಾಗಿತ್ತು. ಭಾರತೀಯ ಇತಿಹಾಸದ, ಕಲೆಯ ಹಾಗೂ ಸಾಹಿತ್ಯದ ಎಲ್ಲ ದಾಖಲೆಗಳೂ ಈ ಬಗೆಯ ಸಾಂಸ್ಕೃತಿಕ ಜೀವನಕ್ಕೆ ಸಾಕ್ಷಿಯಾಗಿವೆ. ಅವನತಿಯಲ್ಲೂ ಕ್ಷೀಣದಶೆಯಲ್ಲೂ ಎಷ್ಟೇ ಅಸ್ಪಷ್ಟವಾಗಿಯಾಗಲಿ ನಮಗೆ ಪ್ರಾಚೀನ ವೈಭವವನ್ನು ನೆನಪಿಗೆ ತಂದು ಕೊಡಲು ಅದರ ಕೆಲ ಕುರುಹುಗಳೂ ಉಳಿದಿವೆ. ಹಾಗಿದ್ದರೆ ಜೀವಸತ್ವದ ನಾಯಕ ಶಕ್ತಿಯಾಗಿ ನಿಂತ ಭಾರತೀಯ ಸಂಸ್ಕೃತಿಯ ವಿರುದ್ಧ ಎತ್ತಿದ ಆರೋಪಕ್ಕೆ ಏನು ಅರ್ಥ? ಮತ್ತು ಅದರ ಸಮರ್ಥನೆಯೆಂತು? ಅತಿ ರಂಜಿತ ರೂಪದಲ್ಲಿ ಆ ಆರೋಪವು ಅವನತಿಯಗೈದುತ್ತಿರುವ, ಛಿದ್ರವಾಗುತ್ತಿರುವ ಸಂಸ್ಕೃತಿಯ ಲಕ್ಷಣಗಳನ್ನು ಆಧರಿಸಿ ನಿಂತಿದೆ. ದುಃಸ್ಥಿತಿಯ ಲಕ್ಷಣಗಳನ್ನು ಸುಸ್ಥಿತಿಯ ಕಾಲಕ್ಕೆ ಅನ್ವಯಿಸಲಾಗಿದೆ. ಅದರ ಅರ್ಥ ಇಷ್ಟೇ:— ಭಾರತವು ಎಂದಿನಿಂದಲೂ ಸ್ವತಂತ್ರವೂ ಭದ್ರವೂ ಅದ

ರಾಜಕೀಯ ಸಂಘಟನೆಗೆ ಅನರ್ಹತೆಯನ್ನು ತಾಳಿತ್ತು; ಮತ್ತು ಅದು ಯಾವಾಗಲೂ ಛಿನ-ಛಿನ್ನವೂ ಬಹಳಮಟ್ಟಿಗೆ ಇತಿಹಾಸದುದ್ದಕ್ಕೂ ಪರಾಧೀನ ರಾಷ್ಟ್ರವೂ ಆಗಿತ್ತು; ಅದರ ಅರ್ಥಪದ್ಧತಿಯು—ಗತಕಾಲದ ಗುಣಗಳೆನಿತಿದ್ದರೂ—ಸುಧಾರಣೆ ಹೊಂದದ ಯಥಾಸ್ಥಿತಿಯಲ್ಲೇ ಉಳಿಯಿತು. ಅದರಿಂದ ನೂತನ ವಾತಾವರಣದಲ್ಲಿ ದಾರಿದ್ರ್ಯ ಮತ್ತು ಸೋಲುಗಳಿಗೆ ಎಡೆಯುಂಟಾಯಿತು; ಮತ್ತು ಭಾರತೀಯ ಸಮಾಜದಲ್ಲಿ ಅಪ್ರಗತಿಪರ ನೀಚೋಚ್ಚಭಾವನೆ, ಜಾತೀಯತೆ ಹಾಗೂ ಅನಾಗರಿಕ ನಡೆವಳಿಕೆಗಳೂ ಸಂಭವಿಸಿದವು. ಭಾರತೀಯ ಸಂಸ್ಕೃತಿಯ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳು ಹಳೆಯ ಹಾಳಿನೊಡನೆ ಎಸೆಯಲು ಯೋಗ್ಯ; ಅವುಗಳ ಸ್ಥಾನದಲ್ಲಿ ಯುರೋಪಿಯನ್ನರ ಸಾಮಾಜಿಕ ವ್ಯವಸ್ಥೆಯ ಅನಿರ್ಬಂಧ, ಭದ್ರತೆ ಮತ್ತು ಪೂರ್ಣತೆ ಅಥವಾ ಕೊನೆಯಪಕ್ಷ ಪ್ರಗತಿಪರ ಪೂರ್ಣತೆ ಇವನ್ನು ಸ್ಥಾಪಿಸಬೇಕು. ವಸ್ತುಸ್ಥಿತಿಯನ್ನೂ ಅದರ ಅರ್ಥವನ್ನೂ ಮತ್ತೆ ದೃಢಪಡಿಸುವುದು ಅವಶ್ಯಕ; ಅನಂತರ ಪೂರ್ವೋಕ್ತ ಅಂಶಗಳ ಯೋಗ್ಯತೆಯನ್ನಳೆಯುವುದು ಯುಕ್ತವಾದೀತು.

ಭಾರತೀಯರ ರಾಜಕೀಯ ಅಸಮರ್ಥತೆಯ ಅಜ್ಞಿಕತೆ ಹುಟ್ಟಿದ್ದು ಐತಿಹಾಸಿಕ ಸಂಗತಿಗಳ ಅಸತ್ಯ ಅವಲೋಕನದಿಂದ, ದೇಶದ ಗತೇತಿಹಾಸದ ಅಪರಿಪೂರ್ಣ ಜ್ಞಾನದಿಂದ. ಭಾರತವು ಆದ್ಯ ಆರ್ಯ ಅಥವಾ ವೇದ ಕಾಲದ ಸಾಮಾಜಿಕ ಮತ್ತು ರಾಜಕೀಯ ಸಂಘಟನೆಯ ಸ್ವತಂತ್ರತರ ರೀತಿನೀತಿಗಳಿಂದ ಒಮ್ಮೆಲೇ ಬ್ರಾಹ್ಮಪ್ರಭುತ್ವಕ್ಕೂ ರಾಜಕೀಯವಾಗಿ ಪೌರಸ್ತ್ಯರ— ಅಂದರೆ ಪಶ್ಚಿಮ ಏಷ್ಯದ ಮಾದರಿಯ— ನಿರಂಕುಶ ಪ್ರಭುತ್ವಕ್ಕೂ ತಿರುಗಿತು. ಮತ್ತು ಅಂದಿನಿಂದಲೂ ಈ ಎರಡರ ನಡುವೆ ಸಿಕ್ಕಿಕೊಂಡೇ ಇದೆ ಎಂದು ಇತ್ತೀಚೆಗೆ ಬಹುವಾಗಿ ನಂಬಲಾಗಿದೆ. ಆದರೆ ಸೂಕ್ಷ್ಮವೂ ಪ್ರೌಢವೂ ಆದ ಪಾಂಡಿತ್ಯವು ಭಾರತೇತಿಹಾಸದ ಇಂತಹ ಸ್ಥೂಲಾವಲೋಕನವನ್ನು ತಪ್ಪೆಂದು ಮತ್ತು ವಸ್ತುಸ್ಥಿತಿ ಇದಕ್ಕೆ ವಿರುದ್ಧವಾಗಿದೆ ಎಂದು ತೋರಿಸಿಕೊಟ್ಟಿದೆ. ಭಾರತವು ಲೋಭಗ್ರಸ್ತವೂ ಮರ್ಥರವೂ

ಆದ ಉದ್ಯಮವಾದವನ್ನಾಗಲಿ, ಸ್ವಾತಂತ್ರ್ಯದ ಪಾರ್ಲಿಮೆಂಟರಿ ಸಂಘಟನೆಯನ್ನಾಗಲಿ ಯುರೋಪಿಯನ್ನರ ಪ್ರಗತಿಯ ಬೂರ್ಜ್ವ ಅಥವಾ ವೈಶ್ಯಯುಗದ ಲಕ್ಷಣವುಳ್ಳ ಸ್ವಯಂಕೃತ ನಾಮಧೇಯವುಳ್ಳ ಪ್ರಜಾಪ್ರಭುತ್ವವನ್ನಾಗಲಿ ಎಂದೂ ವಿಕಾಸಗೊಳಿಸಿಕೊಳ್ಳಲಿಲ್ಲ ಎಂಬುದು ನಿಜ. ಇವೆಲ್ಲ ಆದರ್ಶ ಸ್ಥಿತಿ ಮತ್ತು ರಾಜಕೀಯ ಸಾಮಾಜಿಕ ಪ್ರಗತಿಯ ಕೊನೆಯ ಸಿದ್ಧಾಂತ ಎಂಬ ವಿಚಾರಹೀನ ಪ್ರಶಂಸೆಯ ಕಾಲ ಕಳೆದು ಹೋಗುತ್ತಲಿದೆ, ಮತ್ತು ಅವುಗಳ ನ್ಯೂನತೆಗಳು ಗೋಚರಕ್ಕೆ ಬರುತ್ತಲಿವೆ. ಪೌರಸ್ತ್ಯ ಸಂಸ್ಕೃತಿಯ ಹಿರಿಮೆಯನ್ನು ಪಾಶ್ಚಾತ್ಯರ ಅಭಿವೃದ್ಧಿಯ ಮಾನದಂಡದಿಂದ ಅಳೆಯ ಬೇಕಾದ ಕಾರಣವಿಲ್ಲ. ಭಾರತೀಯ ಪೂರ್ವೇತಿಹಾಸದಲ್ಲಿ ಸ್ವದೇಶೀಯ ವಿದ್ವಾಂಸರು ಆಧುನಿಕ ಕಲ್ಪನೆಗಳನ್ನೂ ಪ್ರಜಾಪ್ರಭುತ್ವದ ಪ್ರಭೇದಗಳನ್ನೂ ಅಷ್ಟೇ ಏಕೆ, ಪಾರ್ಲಿಮೆಂಟರಿ ಪದ್ಧತಿಯನ್ನೂ ಕಾಣಹೋಗಿದ್ದಾರೆ. ಆದರೆ ಇದು ಅವಿವೇಕದ ಪ್ರಯತ್ನವೆಂದು ತೋರುತ್ತದೆ. ಭಾರತೀಯ ರಾಜ್ಯಧರ್ಮದಲ್ಲಿ, ಪಾಶ್ಚಾತ್ಯ ಪರಿಭಾಷೆಯಲ್ಲಿ ಹೇಳಬೇಕಾದರೆ, ಒಂದು ಬಲಿಷ್ಠ ಪ್ರಜಾಸತ್ತಾತ್ಮಕ ಅಂಶವೂ ಅಲ್ಲದೆ ಪಾರ್ಲಿಮೆಂಟರಿ ಸ್ವರೂಪವನ್ನು ಕೆಲಮಟ್ಟಿಗೆ ಹೋಲುವ ಸಂಸ್ಥೆಗಳೂ ಇದ್ದವು; ಆದರೆ ವಾಸ್ತವಿಕವಾಗಿ ಈ ಲಕ್ಷಣಗಳೆಲ್ಲ ಭಾರತದವೇ ಆಗಿದ್ದವಲ್ಲದೆ ಇಂದಿನ ಪ್ರಜಾಪ್ರಭುತ್ವವೇ ಆಗಲಿ ಅಥವಾ ಪಾರ್ಲಿಮೆಂಟುಗಳೇ ಆಗಲಿ ಆಗಿರಲಿಲ್ಲ. ಹೀಗೆ ಗಣಿಸಿದರೆ ರಾಷ್ಟ್ರದ ಸಾಮಾಜಿಕ ಸತ್ವ ಮತ್ತು ಸ್ವರೂಪಗಳ ಸಮಷ್ಟಿಗೆ ಹೊಂದಿಕೊಳ್ಳುವುದರಲ್ಲಿ ಭಾರತೀಯರು ತೋರಿದ ರಾಜಕೀಯ ದಕ್ಷತೆಗೆ ಅವು ಇನ್ನೂ ಶ್ಲಾಘ್ಯ ಸಾಕ್ಷಿಯಾದಾವು. ಹಾಗಲ್ಲದೆ ಪಾಶ್ಚಾತ್ಯ ಸಮಾಜದ ಮತ್ತು ಅದರ ಸಾಂಸ್ಕೃತಿಕ ಅವೃತ್ತಿಯ ಅವಶ್ಯಕತೆಗಳ ತೀರ ಭಿನ್ನವಾದ ಮಾನದಂಡದಿಂದ ಅಳೆದರೆ ಅಷ್ಟು ಸರಿಯಾಗಲಾರದು.

ಭಾರತೀಯ ರಾಜ್ಯಪದ್ಧತಿಯ ಆರಂಭದಶೆ:

ಆರ್ಯ ಜನಾಂಗಗಳ ಪ್ರಾಚೀನ ಇತಿಹಾಸಕ್ಕೆ ಸಂಬಂಧಿಸಿದ್ದೆಂದು ಸಾಮಾನ್ಯವಾಗಿ ತಿಳಿಯಲಾಗುವ ಮಾದರಿಯ ಒಂದು ಪ್ರಭೇದದಲ್ಲಿ ಭಾರತೀಯ ಪದ್ಧತಿಯು ಪ್ರಾರಂಭವಾಯಿತು. ಆದರೆ ಕೆಲವು ಲಕ್ಷಣಗಳು

ಹೆಚ್ಚು ಸಾಧಾರಣಾಂಶಗಳುಳ್ಳವಾಗಿವೆ ಮತ್ತು ಮಾನವಕುಲದ ಸಾಮಾಜಿಕ ಬೆಳವಣಿಗೆಯು ಇನ್ನೂ ಹಿಂದಿನ ಅವಸ್ಥೆಗೆ ಸೇರಿದಂಥವುಗಳೆನಿಸುತ್ತವೆ. ಅದು ಒಂದು ವಂಶ ಅಥವಾ ಗೋತ್ರದ ಎಲ್ಲ ಸ್ವತಂತ್ರ ಜನರ ಸಮಾನತೆಯನ್ನು ಆಧರಿಸಿದ 'ಕುಲ'ವಾಗಿತ್ತು; ಇದು ಪ್ರಥಮದಲ್ಲಿ ಪ್ರಾದೇಶಿಕ ತಳಹದಿಯ ಮೇಲೆ ರೂಢಮೂಲವಾಗಿ ನಿಂತಿರಲಿಲ್ಲ; ವಲಸೆ ಹೋಗುವ ಪ್ರವೃತ್ತಿಯು ಇನ್ನೂ ರೂಢಿಯಲ್ಲಿತ್ತು ಅಥವಾ ಒತ್ತಾಯದ ಸನ್ನಿವೇಶದಲ್ಲಿ ಪದೇ ಪದೇ ತಲೆದೋರುತ್ತಿತ್ತು ಎನ್ನಬಹುದು ಮತ್ತು ಆ ಪ್ರದೇಶಕ್ಕೆ ಅದನ್ನು ಆಕ್ರಮಿಸಿದವರ ಹೆಸರೇ ಇರುತ್ತಿತ್ತು:– ಕುರುದೇಶ ಅಥವಾ ಬರಿದೆ ಕುರುಗಳು, ಮಾಳವದೇಶ ಅಥವಾ ಮಾಳವರು ಎಂಬಂತೆ. ನಿಶ್ಚಿತವಾದ ಗಡಿಗಳಲ್ಲಿ ಸ್ಥಿರವಾಗಿ ನೆಲೆಸುವುದು ರೂಢಿಗೆ ಬಂದನಂತರವೂ ವಂಶ ಅಥವಾ ಗೋತ್ರದ ಪದ್ಧತಿಯು ಮುಂಬರಿಯಿತು. ಆದರೆ ಅದು ಸ್ಥಿರಗ್ರಾಮ ಸಮುದಾಯದ ಒಂದು ವೈಶಾಲಿಕ ಅಂಶವಾಯಿತು. ಸಾಮುದಾಯಿಕ ವಿಚಾರ ವಿನಿಮಯಕ್ಕೆ, ಯಜ್ಞಕ್ಕೆ, ಪೂಜೆ ಪುರಸ್ಕಾರಗಳಿಗೆ ಅಥವಾ ಯುದ್ಧದ ಆಹ್ವಾನಕ್ಕೆಂದು ಸಭೆ ಸೇರುವ 'ವಿಶ'ರು ಬಹಳ ಕಾಲದವರೆಗೆ ಸಾಮಾನ್ಯ ಜನತೆಯ ಅಧಿಕಾರದ ಸಂಕೇತವೂ, ದೊರೆ ಉಚ್ಚಾಧಿಕಾರಿಯೂ ಪ್ರತಿನಿಧಿಯೂ ಆಗಿ ಉಳ್ಳ ಸಾಮಾನ್ಯ ವ್ಯಾವಹಾರಿಕ ಜೀವನದ ನಾಯಕಶಕ್ತಿಯೂ ಆಗಿದ್ದರು; ಆದರೆ ದೊರೆತನವು ಆನುವಂಶಿಕವೆನಿಸಿದಮೇಲೂ ಬಹುಕಾಲ ಔಪಚಾರಿಕ ಚುನಾವಣೆ ಅಥವಾ ಒಪ್ಪಿಗೆಗಾಗಿ ಜನಸಮ್ಮತಿಯನ್ನವಲಂಬಿಸಿತ್ತು. ಯಜ್ಞದ ಧಾರ್ಮಿಕ ಸಂಸ್ಥೆಯು ಅದೇ ಹೊತ್ತಿಗೆ ಉದಯಿಸಿ ಋತ್ವಿಜರ ಮತ್ತು ಋಷಿಗಳ ಒಂದು ವರ್ಗವನ್ನೇ ನಿರ್ಮಿಸಿತು. ಅವರು ಧರ್ಮ ಕರ್ಮ ನಿಪುಣರು ಅಥವಾ ಯಜ್ಞಯಾಗಾದಿಗಳ ಸಂಕೇತಗಳಲ್ಲಿಯ ರಹಸ್ಯ ಜ್ಞಾನವನ್ನರಿತವರು ಎನಿಸಿದ್ದರು. ಅವರೇ ಮಹಾಬ್ರಾಹ್ಮಣ ಸಂಸ್ಥೆಯ ಬೀಜವೆನಿಸಿದರು. ಇವರ ಸ್ಥಾನವು ಪ್ರಥಮದಲ್ಲಿ ಆನುವಂಶಿಕವಾಗಿರಲಿಲ್ಲ, ಅಲ್ಲದೆ ಇವರು ಇನ್ನಿತರ ಉದ್ಯೋಗಗಳನ್ನೂ ಮಾಡುತ್ತಿದ್ದರು. ಮತ್ತು ಇವರು ನಿತ್ಯ ಜೀವನದಲ್ಲಿ ಸಾಮಾನ್ಯ ಜನತೆಯಲ್ಲಿ ಒಂದಾಗಿದ್ದರು. ಈ ಸ್ವತಂತ್ರವೂ, ಸರಳವೂ, ಸ್ವಾಭಾವಿಕವೂ ಆದ ಸಮಾಜ ರಚನೆಯು ಮೊಟ್ಟಮೊದಲು ಇಡಿ ಆರ್ಯ ಭಾರತದಲ್ಲಿ ಸಾರ್ವತ್ರಿಕವಾಗಿತ್ತೆಂದು ತೋರುತ್ತದೆ.

ಆನುವಂಶಿಕ ದೊರೆತನದ ಉದಯ:

ಈ ಸಂಘಟನೆಯ ಸ್ವರೂಪದ ಅನಂತರದ ಬೆಳವಣಿಗೆಯು ಮಿಕ್ಕ ಜನಾಂಗಗಳ ವಿಕಾಸದ ರೀತಿಯನ್ನೇ ಅನುಸರಿಸಿದರೂ ತನ್ನದೇ ಆದ ಕೆಲ ಗುಣವಿಶೇಷಗಳನ್ನು ಹೊರಚೆಲ್ಲಿತು. ಆರ್ಯ ಕುಲದ ಅಸಾಧಾರಣ ಮನೋಭೂಮಿಕೆಗೆ ಅನುಗುಣವಾಗಿ ಈ ವಿಶೇಷ ಗುಣಗಳು ಭದ್ರವಾಗಿ ನೆಲೆ ನಿಂತು ಭಾರತೀಯ ನಾಗರಿಕತೆಯ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳಿಗೆ ಒಂದು ಭಿನ್ನ ಸ್ವರೂಪವನ್ನೇ ಕೊಟ್ಟವು. ಆನುವಂಶಿಕ ತತ್ವವು ಅತಿ ಮೊದಲಿನ ಅವಸ್ಥೆಯಲ್ಲೇ ಉದಯಿಸಿ ಸತತವಾಗಿ ಸಮಾಜದ ಮೇಲೆ ತನ್ನ ಅಧಿಕಾರ ಹಿಡಿತಗಳನ್ನು ಬೆಳೆಸಿಕೊಂಡು ಎಲ್ಲೆಲ್ಲೂ ಅದರ ಚಟುವಟಿಕೆಗಳ ಇಡೀ ಸಂಘಟನೆಯ ತಳಹದಿಯೆನಿಸಿತು. ಆನುವಂಶಿಕ ಅರಸೊತ್ತಿಗೆಯೂ ದೃಢಪಟ್ಟಿತು; ಬಲಿಷ್ಠವಾದ ಕ್ಷಾತ್ರವರ್ಗವು ಉದಯಿಸಿತು; ಮಿಕ್ಕೆಲ್ಲರೂ ಒಕ್ಕಲಿಗರು, ವ್ಯಾಪಾರಸ್ಥರು ಮತ್ತು ಕಸುಬುದಾರರು ಎಂಬುದಾಗಿ ಪರಿಗಣಿಸಲ್ಪಟ್ಟರು; ಕಾಲಾನಂತರದಲ್ಲಿ ಆರ್ಯರ ವಿಜಯದ ಫಲವಾಗಿಯೋ ಹೆಚ್ಚು ಸಂಭವವಾಗಿ ಅಥವಾ ಸಾಮಾನ್ಯವಾಗಿ ಆರ್ಥಿಕ ಆವಶ್ಯಕತೆಗಳಿಂದಲೋ ಸೇವಕರ ಹಾಗೂ ಕೂಲಿಕಾರರ ಶೂದ್ರ ವರ್ಗವೊಂದು ಅವಕ್ಕೆ ಸೇರಿಸಲ್ಪಟ್ಟಿತು. ಪುರಾತನ ಕಾಲದಿಂದಲೂ ಭಾರತೀಯರಲ್ಲಿ ಸ್ವಾಭಾವಿಕವಾಗಿ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಪ್ರವೃತ್ತಿಗಳು ಪ್ರಧಾನವಾಗಿದ್ದುದರ ಫಲವಾಗಿ ಭಾರತೀಯ ಸಮಾಜದ ಮೇಲಿನ ಹಂತದಲ್ಲಿ ಋತ್ವಿಜರ, ಪಂಡಿತರ, ಧರ್ಮಶಾಸ್ತ್ರಜ್ಞರ, ಶ್ರೋತ್ರಿಯರ ಒಂದು ಬ್ರಹ್ಮವರ್ಗವು ಬೆಳೆದು ನಿಂತಿತು. ಈ ರೀತಿಯ ಬೆಳವಣಿಗೆಯು ಮಿಕ್ಕೆಡೆಗಳಲ್ಲಿ ಕಾಣ ಬರುವದಾದರೂ ಈ ನಾಡು ಇದಕ್ಕೆ ಅಸದೃಶ ಸಾತತ್ಯ, ಸ್ಥಿರತೆ ಮತ್ತು ಶ್ರೇಷ್ಠತೆಗಳನ್ನು ಕಲ್ಪಿಸಿಕೊಟ್ಟಿತು. ಇಷ್ಟು ಜಟಿಲ ಮನೋಧರ್ಮವಿಲ್ಲದ ಬೇರೆಯ ದೇಶಗಳಲ್ಲಿ ಈ ಪ್ರಾಧಾನ್ಯವು ಮತೀಯ ಪ್ರಭುತ್ವಕ್ಕೆ ಎಡೆಗೊಡುತ್ತಿತ್ತು; ಆದರೆ ಭಾರತದಲ್ಲಿ ತಮ್ಮ ಅಧಿಕಾರವು ನಿತ್ಯವೂ ವೃದ್ಧಿಹೊಂದಿ ಕೊನೆಯಲ್ಲಿ ಗಣ್ಯವಾಗಿ ನಿಂತರೂ ಬ್ರಾಹ್ಮಣರ ರಾಜ್ಯಾಧಿಕಾರವನ್ನು ವಶಪಡಿಸಿಕೊಳ್ಳಲಿಲ್ಲ, ವಶಪಡಿಸಿಕೊಳ್ಳುವಂತೆಯೂ ಇರಲಿಲ್ಲ. ರಾಜನ ಮತ್ತು ಜನರ ಆಧ್ಯಾತ್ಮಿಕ ಗುರುಗಳಾಗಿಯೂ, ಧರ್ಮಾಧಿಕಾರಿಗಳಾಗಿಯೂ, ಪುರೋಹಿತರಾಗಿಯೂ

ಅವರು ಬಹು ಪ್ರಭಾವವನ್ನು ಬೀರುತ್ತಿದ್ದರು. ಆದರೆ ವ್ಯವಹಾರದಲ್ಲಿ ನಿಜವಾದ ರಾಜ್ಯಶಕ್ತಿಯು ರಾಜನಲ್ಲಿಯೂ, ಕ್ಷತ್ರಿಯ ಮನೆತನದಲ್ಲೂ ಮತ್ತು ಮಹಾಜನಗಳಲ್ಲಿಯೂ ನೆಲಸಿದ್ದಿತು.

ಕೆಲವು ಕಾಲದ ವರೆಗೆ ಋಷಿಯು ಒಂದು ವಿಶಿಷ್ಟ ವ್ಯಕ್ತಿತ್ವವು ಎದ್ದು ಕಾಣುತ್ತಿತ್ತು. ಅವನು ಹೆಚ್ಚಿನ ಆಧ್ಯಾತ್ಮಿಕ ಅನುಭವ ಮತ್ತು ಜ್ಞಾನಗಳನ್ನು ಹೊಂದಿದವನಾಗಿದ್ದನು; ಯಾವುದೇ ವರ್ಣದಲ್ಲಿ ಹುಟ್ಟಿದ್ದರೂ ಎಲ್ಲರ ಮೇಲೂ ತನ್ನ ತೇಜಸ್ಸಿನಿಂದ ಪ್ರಭಾವಿಯಾಗಿದ್ದನು. ಮತ್ತು ಎಲ್ಲ ವಿಷಯ ಗಳಲ್ಲೂ ರಾಜನು ಅವನ ಸಲಹೆಗಳನ್ನು ತೆಗೆದುಕೊಳ್ಳುತ್ತಿದ್ದನು. ಕೆಲವೆಡೆ ಆತ ರಾಜಗುರುವೂ ಆಗಿರುತ್ತಿದ್ದನು; ಅಲ್ಲದೆ ಅಂದಿನ ಸಾಮಾಜಿಕ ವಿಕಾಸದ ಶಿಥಿಲ ಅವಸ್ಥೆಯಲ್ಲಿ ಹೊಸ ಮೂಲ ಕಲ್ಪನೆಗಳನ್ನು ಕಲ್ಪಿಸುವುದರಲ್ಲಿಯೂ ಜನತೆಯ ಧಾರ್ಮಿಕ-ಸಾಮಾಜಿಕ ಭಾವನೆ ಮತ್ತು ರೂಢಿಗಳಲ್ಲಿ ನೇರವಾದ ಹಾಗೂ ಶೀಘ್ರ ಬದಲಾವಣೆಗಳನ್ನು ತರುವುದರಲ್ಲಿಯೂ ಅವನೊಬ್ಬನೇ ಮುಖ್ಯ ಪಾತ್ರವನ್ನು ವಹಿಸಬಲ್ಲವನಾಗಿದ್ದನು. ಪ್ರತಿ ವಿಷಯಕ್ಕೂ ಆಧ್ಯಾತ್ಮಿಕಾರ್ಥವನ್ನೂ ಶಾಸ್ತ್ರಾಧಾರವನ್ನೂ ನಿರೂಪಿಸುವದು ಭಾರತೀಯ ಮನೋಧರ್ಮದ ಮುಖ್ಯ ಲಕ್ಷಣವಾಗಿದ್ದಿತು. ಪ್ರತಿವರ್ಣಕ್ಕೂ, ಪ್ರತಿ ಕರ್ಮಕ್ಕೂ ಹಕ್ಕು-ಬಾಧ್ಯತೆಗಳಿಗೂ ಒಂದು ಧ್ಯೇಯವನ್ನೂ, ಕಾರ್ಯನಿಯಮ ವನ್ನೂ, ಆದರ್ಶ ಮಾರ್ಗವನ್ನೂ ಮನೋಭಾವ-ವಿಶಿಷ್ಟಗುಣ-ಕಾರ್ಯಗತ ತತ್ವಗಳನ್ನೂ ಅರ್ಥಾತ್ ಆಧ್ಯಾತ್ಮಿಕ ಪ್ರಾಧಾನ್ಯವುಳ್ಳ ಒಂದು ಧರ್ಮವನ್ನೂ ಹೇಳುವುದೇ ಆ ಲಕ್ಷಣ. ರಾಷ್ಟ್ರೀಯ ಚಿತ್ತಭಿತ್ತಿಯ ಮೇಲೆ ಚಿರಸ್ಥಾಯಿಯಾಗಿ ಇವನ್ನು ಮುದ್ರಿಸುವುದು, ಅವನ್ನು ಬೆಳೆಸಿ ಅಜರಾಮರಗೊಳಿಸುವುದು, ಆದರ್ಶ ಧರ್ಮವನ್ನು ಕಂಡು ಅದರ ವ್ಯಾವಹಾರಿಕಾರ್ಥವನ್ನು ಹೇಳುವುದು, ಜನತೆಯ ಜೀವನವನ್ನು ಆಧ್ಯಾತ್ಮಿಕ ಹಾಗೂ ಧಾರ್ಮಿಕ ಭಾವನೆಗಳ ಮೇಲೆ ನಿಂತ ನಾಗರಿಕತೆಯ ರೂಪಸಮೃದ್ಧವಾದ ಆದರ್ಶಗಳಲ್ಲಿ ಮತ್ತು ಅರ್ಥವತ್ತಾದ ಆಕೃತಿಗಳಲ್ಲಿ ಎರಕಹೊಯ್ಯುವುದು ಋಷಿಯ ಕೆಲಸವಾಗಿದ್ದಿತು. ಅನಂತರದ ಕಾಲಾವಧಿಗಳಲ್ಲಿ ಆಯಾ ಕಾಲದ ಆಚಾರ ನಿಯಮಗಳ ಸ್ವರೂಪ ದವಾಗಿದ್ದ ತಮ್ಮ ಧರ್ಮಸೂತ್ರಗಳನ್ನು ಬ್ರಾಹ್ಮಣ ಧರ್ಮಶಾಸ್ತ್ರಕಾರರು

ಪ್ರಾಚೀನ ಋಷಿಗಳ ಕೃತಿಗಳಿಂದು ಹೇಳಲಾರಂಭಿಸಿದರು. ಅರ್ವಾಚೀನ ಕಾಲದಲ್ಲಿ ಭಾರತೀಯ ಸಾಮಾಜಿಕ ರಾಜಕೀಯ ನಿಕಾಯದ ಬೆಳವಣಿಗೆ ಹೇಗೇ ಆದರೂ-ಕಟ್ಟಕಡೆಗೆ ಎಲ್ಲವೂ ಪರಂಪರಾನಿಷ್ಠವೂ ಸಾಮಯಿಕವೂ ಆಗುವ ಪ್ರವೃತ್ತಿಯನ್ನು ತಳೆದು ಅನಿರ್ಬದ್ಧವೂ ಜೀವಂತವೂ ಆದ ವ್ಯವಹಾರದಲ್ಲಿ ಸತತವೂ ಕ್ರಮವಾಗಿ ಮುಂಬರಿಯುವ ಪ್ರವೃತ್ತಿಯನ್ನು ಕಳೆದುಕೊಂಡಾಗ ಕೂಡ-ಈ ಮೂಲಭೂತ ಲಕ್ಷಣವು ತನ್ನ ಪ್ರಭಾವವನ್ನು ಬೀರುತ್ತಲಿತ್ತು.

ಆರ್ಯ ಯುಗದ ವಿವಿಧ ಪ್ರಭುತ್ವಗಳು:

ಈ ಆರ್ಯಯುಗದ ಪದ್ಧತಿಯ ರಾಜಕೀಯ ವಿಕಾಸವು ಭಾರತದ ಬೇರೆ ಬೇರೆ ಭಾಗಗಳಲ್ಲಿ ಭಿನ್ನರೂಪದಲ್ಲಾಯಿತು. ಸಾಮಾನ್ಯ ಬೆಳವಣಿಗೆಯಲ್ಲಿ ಬಹುದೇಶಗಳಲ್ಲಾದಂತೆ ಶಾಸನಾಧಿಕಾರಕ್ಕೆ ರಾಜನೇ ಕೇಂದ್ರವಾಗುವತ್ತ ಪ್ರಾಧಾನ್ಯ ಹೆಚ್ಚಿತು; ಅವನೇ ರಾಜ್ಯನೇತೃವೂ ಶಾಸನ-ಪ್ರಶಾಸನಗಳ ಹೆಚ್ಚು ಜಟಿಲವಾದ ಪದ್ಧತಿಯ ಏಕೀಕರಣಶಕ್ತಿಯೂ ಆಗುತ್ತ ಬಂದನು. ಕ್ರಮೇಣ ಇದೇ ನೆಲೆನಿಂತು ಸಾರ್ವತ್ರಿಕ ಮಾದರಿಯೆನಿಸಿತು. ಆದರೆ ಬಹಳ ಕಾಲದವರೆಗೆ ತದ್ವಿರುದ್ಧ ಪ್ರವೃತ್ತಿಯು ಇದರೊಡನೆ ಹೋರಾಡಿ ಇದನ್ನು ತಡೆಹಿಡಿದುದರ ಫಲವಾಗಿ ಪೌರ ಅಥವಾ ಜಾನಪದ ಇಲ್ಲವೆ ಸಂಯುಕ್ತ, ಸಾಂಘಿಕ ಗಣರಾಜ್ಯಗಳು ಉದಯಿಸಿ ಬಲಿಷ್ಠವಾಗಿ ಚಿರಸ್ಥಾಯಿಯಾದ ಶಕ್ತಿಸಂಪನ್ನತೆಯಿಂದ ಶಾಸನ ಗೈದವು. ರಾಜನು ಗಣರಾಜ್ಯದ ಆನುವಂಶಿಕ ಅಥವಾ ನಿರ್ವಾಚಿತ ಕಾರ್ಯಪಾಲಿಕಾಮುಖ್ಯಸ್ಥ ಅಥವಾ ನಿಯತವಾದ ಅಲ್ಪ ಕಾಲದ ವರೆಗೆ ಆಡಳಿತ ನಡೆಸುವ ಅಧ್ಯಕ್ಷ ಎನಿಸಿದ್ದ; ಅದೂ ಇಲ್ಲದಲ್ಲಿ ಅವನ ಅಸ್ತಿತ್ವವೇ ರಾಜ್ಯಧರ್ಮದ ಕ್ಷೇತ್ರದಲ್ಲಿ ಇಲ್ಲವಾಯಿತು. ಅನೇಕ ಕಡೆಗಳಲ್ಲಿ ಈ ಸ್ವರೂಪ ಬರಲು ಸಭೆಗಳ ಶಕ್ತಿಯ ಸ್ವಾಭಾವಿಕ ವಿಕಾಸವೇ ಕಾರಣವಾಗಿರಬಹುದು; ಆದರೆ ಉಳಿದ ಕಡೆಗಳಲ್ಲಿ ಹೀಗಾಗಲು ಒಂದಲ್ಲ ಒಂದು ತರದ ಕ್ರಾಂತಿಯೆದ್ದಿರಬೇಕು-ಅದರಿಂದಲೇ ಅಂಥ ಕಡೆಗಳಲ್ಲಿ ರಾಜಪ್ರಭುತ್ವ ಮತ್ತು ಗಣಪ್ರಭುತ್ವಗಳು ಒಂದಾದ ಮೇಲೊಂದರಂತೆ ಬಂದು ಹೋಗಿ ಅಸ್ಪಷ್ಟಪರಿವರ್ತನಗಳಾದದ್ದು ಕಂಡುಬರುತ್ತದೆ. ಭಾರತೀಯ

ಜನಗಳಲ್ಲಿಯು ಕೆಲವರಲ್ಲಿ ಗಣಪ್ರಭುತ್ವವು ಕೊನೆಯದಾಗಿ ತನ್ನ ಹಿಡಿತವನ್ನು ನೆಲೆಗೊಳಿಸಿ ಬಲಿಷ್ಠವೂ ಸುಸ್ಥಿರವೂ ಆದ ಸಂಘಟನೆಯನ್ನು ಮಾಡಬಲ್ಲೆನೆಂದೂ ಅನೇಕ ಶತಮಾನಗಳ ವರೆಗೆ ಬದುಕಬಲ್ಲೆನೆಂದೂ ತೋರಿಸಿಕೊಟ್ಟಿತು. ಕೆಲ ಪ್ರದೇಶಗಳಲ್ಲಿಯು ಗಣರಾಜ್ಯಗಳ ಶಾಸನವನ್ನು ಪ್ರಜಾಸತ್ತಾತ್ಮಕ ಸಭೆ ನಡೆಸುತ್ತಿದ್ದರೆ ಮತ್ತೆ ಕೆಲವೆಡೆ ಕೆಲ ವಿಶಿಷ್ಟರ ಸಿನೇಟು ನಡೆಸುತ್ತಿತ್ತು. ಈ ಭಾರತೀಯ ಗಣರಾಜ್ಯಗಳ ಸಂವಿಧಾನದ ವಿವರಗಳಾಗಲಿ ಆಂತರಿಕ ಇತಿಹಾಸದ ಒಂದೇ ಒಂದು ಅಂಶವಾಗಲಿ ನಮಗೆ ತಿಳಿಯದಂತಾಗಿರುವುದು ನಮ್ಮ ದುರ್ದೈವವೇ ಸರಿ. ಆದರೆ ತಮ್ಮ ವ್ಯಾವಹಾರಿಕ ಶಾಸನದ ಸುವ್ಯವಸ್ಥೆಯು ಹಾಗೂ ಸೈನಿಕ ಸಂಘಟನೆಯ ಪ್ರಬಲ ದಕ್ಷತೆಯ ಬಗ್ಗೆ ಅವು ಭಾರತದ ಆದ್ಯಂತವಾಗಿ ಕೀರ್ತಿ ಪಡೆದುದಕ್ಕೆ ಸ್ಫುಟವಾದ ಸಾಕ್ಷಿಗಳಿವೆ. ಗಣರಾಜ್ಯದ ಸಂಸ್ಥೆಗಳು ತಮ್ಮ ಶುದ್ಧತೆಯನ್ನೂ ಸಾಮರ್ಥ್ಯವನ್ನೂ ಉಳಿಸಿಕೊಂಡಿರುವ ವರೆಗೆ ಎಷ್ಟು ಚಿಕ್ಕ ಗಣರಾಜ್ಯವಿದ್ದರೂ ಅದನ್ನು ಪ್ರಬಲವೂ ಮಹತ್ವಾಕಾಂಕ್ಷೆಯುಳ್ಳದ್ದೂ ಆದ ಮಾಗಧ ರಾಜಪ್ರಭುತ್ವವು ಬಲಪ್ರಯೋಗದಿಂದ ಸೋಲಿಸಲಾರದು ಎಂಬ ಕುತೂಹಲಜನಕವಾದ ಒಂದು ಬುದ್ಧಸೂಕ್ತಿಯಿದೆ. ಈ ಅಭಿಪ್ರಾಯವನ್ನು ರಾಜಕೀಯ ಬರೆಹಗಾರರು ದೃಢಪಡಿಸಿದ್ದಾರೆ. ಅವರ ಪ್ರಕಾರ ಗಣರಾಜ್ಯಗಳ ಮೈತ್ರಿಯು ರಾಜನಿಗಿರಬಲ್ಲ ಅತ್ಯಂತ ಸುಭದ್ರವೂ ಅಮೂಲ್ಯವೂ ಆದ ರಾಜಕೀಯ ಹಾಗೂ ಸೈನಿಕ ಬೆಂಬಲ; ಅವನ್ನು ರಾಜನು ಬಲಪ್ರಯೋಗದಿಂದ ಹಣಿಯಬಾರದು, ಹಾಗೆ ಮಾಡಹೋದರೆ ಜಯ ಸಂಶಯಾಸ್ಪದ; ಮ್ಯಾಸಿಡೋನಿನ ಫಿಲಿಪ್ಪನಂತೆ ಅವುಗಳ ಆಂತರಿಕ ಐಕ್ಯವನ್ನೂ ಸಂವಿಧಾನದ ಕಾರ್ಯದಕ್ಷತೆಯನ್ನೂ ಭಂಗಗೊಳಿಸುವ ಉದ್ದೇಶವುಳ್ಳ ಮೊಕೆವಿಲಿತಂತ್ರವನ್ನು ಬಳಸಿಯೇ ಹಣಿಯಬೇಕು ಎಂಬುದು ರಾಜನಿಗೆ ಅವರ ಉಪದೇಶ.

ಗಣರಾಜ್ಯಗಳು:

ಈ ಗಣರಾಜ್ಯಗಳು ಕ್ರಿ. ಶ. ಆರನೆಯ ಶತಮಾನದ ಹೊತ್ತಿಗೆ ಆಗಲೇ ಸುದೀರ್ಘಕಾಲ ಬಾಳಿ ಬದುಕಿ ಸುಪ್ರತಿಷ್ಠಿತವಾಗಿದ್ದವು, ಅಂದರೆ ಪ್ರಭಾವಶಾಲಿಗಳಾದರೂ ಅಲ್ಪಾಯುಗಳಾದ ಗ್ರೀಕ್ 'ಸಿಟಿ ಕಾಮನ್‌ವೆಲ್ತ್' ಅಥವಾ

ನಗರರಾಜ್ಯಗಳಿಗೆ ಸಮಕಾಲೀನವಾಗಿದ್ದವು. ಆದರೆ ಭಾರತದಲ್ಲಿ ಈ ರೂಪದ ರಾಜಕೀಯ ಸ್ವಾತಂತ್ರ್ಯವು ಗ್ರೀಕ್ ಗಣರಾಜ್ಯಸ್ವಾತಂತ್ರ್ಯಕ್ಕಿಂತ ಹೆಚ್ಚು ಕಾಲ ಬದುಕಿತು. ರಾಜಕೀಯ ನವನಿರ್ಮಾಣಪ್ರತಿಭೆಯಲ್ಲಿ ಕಡಿಮೆ ಫಲವತ್ತಿಯಿಲ್ಲದ ಪ್ರಾಚೀನ ಭಾರತೀಯ ಬಗೆಯು ಸುದೃಢ ಸಂಘಟನೆ ಹಾಗೂ ಸುಸ್ಥಿರ ಸಾಂವಿಧಾನಿಕ ವ್ಯವಸ್ಥೆಗಳನ್ನು ತರುವುದರಲ್ಲಿ ಪಾರದಬುದ್ಧಿಯ ಚಂಚಲ ಭಾವದ ಭೂಮಧ್ಯ ಸಮುದ್ರ ಪ್ರದೇಶದ ಜನತೆಯ ಬಗೆಗಿಂತ ಹೆಚ್ಚಿನದೆನ್ನಬೇಕು. ಈ ಗಣರಾಜ್ಯಗಳಲ್ಲಿ ಕೆಲವು ಗಣರಾಜ್ಯದಶೆಯ ರೋಮಿಗಿಂತ ಹೆಚ್ಚುಕಾಲಾವಧಿಯ ಹಾಗೂ ಸುದೃಢಸ್ಥಿತಿಯ ಪ್ರಭಾವಿಯಾದ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದವು. ಹೇಗೆಂದರೆ ಅವು ಚಂದ್ರಗುಪ್ತ ಮತ್ತು ಅಶೋಕರ ಬಲಿಷ್ಠ ಸಾಮ್ರಾಜ್ಯಗಳನ್ನು ಎದುರಿಸಿ ಕ್ರಿಸ್ತಶಕದ ಮೊದಲ ಶತಮಾನಗಳವರೆಗೂ ಉಳಿದುಕೊಂಡಿದ್ದವು. ಆದರೆ ಅವುಗಳಲ್ಲೊಂದೂ ರೋಮಿನ ಗಣರಾಜ್ಯದ ಆಕ್ರಾಮಕ ಭಾವನೆಯನ್ನಾಗಲಿ ದಿಗ್ವಿಜಯ ಹಾಗೂ ವಿಶಾಲ ಸಂಘಟನೆಯ ಶಕ್ತಿಯನ್ನಾಗಲಿ ಬೆಳೆಸಿಕೊಳ್ಳಲಿಲ್ಲ; ತಮ್ಮ ಸ್ವತಂತ್ರ ಆತಂರಿಕ ಜೀವನವನ್ನೂ ರಾಜಕೀಯ ಸ್ವಾಧೀನತೆಯನ್ನೂ ಉಳಿಸಿಕೊಂಬುದರಲ್ಲೇ ಅವು ತೃಪ್ತವಾಗಿದ್ದವು. ಅಲೆಕ್ಸಾಂಡರನ ದಾಳಿಯ ಬಳಿಕ ವಿಶೇಷತಃ ಭಾರತವು ಏಕೀಕರಣದ ಚಳವಳಿಯ ಅಗತ್ಯವನ್ನು ಅರಿಯಿತು; ಆದರೆ ಗಣರಾಜ್ಯಗಳು ಅನೈಕ್ಯಕ್ಕೆ ಕಾರಣಗಳಾಗಿದ್ದವು. ಅವೇನೋ ಸ್ವತಃ ಬಲಿಷ್ಠವೇ ಆಗಿದ್ದರೂ ಈ ಪರ್ಯಾಯದ್ವೀಪದ ಸಂಘಟನೆಗೆ ಏನೂ ಮಾಡಲಾರದಾದವು; ಈ ದ್ವೀಪಕಲ್ಪವು ಚಿಕ್ಕ ರಾಜ್ಯಗಳ ಯಾವ ವಿಧದ ಸಂಘಟನೆಗೂ ಮೀರುವ ವೈಶಾಲ್ಯವುಳ್ಳದ್ದಾಗಿದೆ; ಮತ್ತು ಪ್ರಾಚೀನ ಪ್ರಪಂಚದಲ್ಲಿ ಅಂಥ ಪ್ರಯತ್ನ ಎಲ್ಲಿಯೂ ಜಯಪ್ರದವಾಗಲಿಲ್ಲ; ಯಾವಾಗಲೂ ಕೆಲ ಸಂಕುಚಿತ ಗಡಿಮಿತಿಗಳನ್ನು ಮೀರುವ ಪ್ರಯತ್ನದಲ್ಲೇ ಅಂಥ ಆರಂಭ ಭಗ್ನವಾಗುತ್ತಿತ್ತು; ಅಲ್ಲದೆ ಹೆಚ್ಚು ಕೇಂದ್ರೀಕೃತ ಸರಕಾರದ ರಚನೆಯತ್ತ ಸಾಗುವ ಚಳವಳಿಯ ವಿರುದ್ಧವಾಗಿ ಅದು ನಿಲ್ಲಲಾರದಾಯಿತು. ಇತರ ಕಡೆಗಳಂತೆಯೇ ಭಾರತದಲ್ಲಾದರೂ ಮಿಕ್ಕೆಲ್ಲ ರಾಜಕೀಯ ಸಂಘಟನೆಗಳನ್ನುರುಳಿಸಿ ಬೆಳೆದು ಕೊನೆಯದಾಗಿ ನಿಂತದ್ದು ರಾಜಪ್ರಭುತ್ವವೇ. ಗಣರಾಜ್ಯ ಸಂಘಟನೆಯು ಅದರ ಇತಿಹಾಸದಲ್ಲಿ ಅಳಿಸಿಹೋಗಿ ಕೇವಲ ನಾಣ್ಯಗಳ, ಮತ್ತು ಅಲ್ಲಿ ಇಲ್ಲಿ ಚೆಲ್ಲಿದ ದಾಖಲೆ, ಗ್ರೀಕ್

ವರದಿ ಹಾಗೂ ಭಾರತದಾದ್ಯಂತ ರಾಜಪ್ರಭುತ್ವವನ್ನು ಬೆಂಬಲಿಸಿ ನೆಲೆಗೊಳಿಸಲು ಸಹಾಯ ಮಾಡಿದ ಸಮಕಾಲೀನ ರಾಜಕೀಯ ಲೇಖಕರ ಮತ್ತು ಶಾಸ್ತ್ರಕಾರರ ಬರೆಹಗಳಿಂದ ಗೊತ್ತಾಗುತ್ತದೆ.

ರಾಜಪ್ರಭುತ್ವದ ವಿಶಿಷ್ಟ ಲಕ್ಷಣಗಳು:

ಆದರೆ ಭಾರತೀಯ ರಾಜಪ್ರಭುತ್ವಕ್ಕೆ ಒಂದು ವಿಧದ ಪವಿತ್ರ ಆಧಾರವೂ ಮಹಾಧಿಕಾರವೂ ಅನಂತರ ದೊರಕಿದರೂ ರಾಜನ ವ್ಯಕ್ತಿತ್ವಕ್ಕೆ ಧರ್ಮರಕ್ಷಕತ್ವದ ಹಾಗೂ ದಿವ್ಯಶಕ್ತಿಯ ಪ್ರಾತಿನಿಧ್ಯ ಸಿಕ್ಕಿದರೂ ಆ ಪ್ರಭುತ್ವವು ಮಹಮ್ಮದೀಯರ ದಾಳಿಯ ಪೂರ್ವದಲ್ಲಿ ರಾಜನ ವೈಯಕ್ತಿಕ ಸ್ವಯಂಪ್ರಭುತ್ವದ ಅಥವಾ ಸರ್ವಾಧಿಕಾರದ ಸ್ವರೂಪದ್ದಾಗಿರಲಿಲ್ಲ: ಪ್ರಾಚೀನ ಪಾರಸೀಕ ಅಥವಾ ಪಶ್ಚಿಮ ಮತ್ತು ಮಧ್ಯ ಏಷ್ಯಗಳ ಇಲ್ಲವೆ ಅನಂತರದ ಯುರೋಪಿಯನ್ ನಿರಂಕುಶ ಪ್ರಭುತ್ವಗಳನ್ನು ಹೋಲುತ್ತಿದ್ದಿಲ್ಲ: ಪಠಾನ ಹಾಗೂ ಮೊಗಲ ಸಾಮ್ರಾಜ್ಯಗಳ ಪದ್ಧತಿಯಿಂದಲೂ ಅದು ತೀರ ಬೇರೆಯ ಮಾದರಿಯದಾಗಿತ್ತು. ಭಾರತೀಯ ದೊರೆಗೆ ಆಡಳಿತ-ನ್ಯಾಯದಾನಗಳಲ್ಲಿ ಅತಿ ಹೆಚ್ಚಿನ ಅಧಿಕಾರವಿತ್ತಲ್ಲದೆ, ರಾಜ್ಯದ ಎಲ್ಲ ಸೈನ್ಯಬಲದ ಒಡೆಯತನವುಳ್ಳ ಮಂತ್ರಿಮಂಡಲ ಸಹಿತನಾದ ಅವನೇ ಯುದ್ಧ-ಶಾಂತಿಗಳಿಗೆ ಹೊಣೆಗಾರನೂ ಸಮಷ್ಟಿ ಜೀವನದ ಸುವ್ಯವಸ್ಥೆ ಯೋಗಕ್ಷೇಮಗಳ ಸಾಮಾನ್ಯ ಮೇಲ್ವಿಚಾರಣೆ ಹಾಗೂ ನಿಯಂತ್ರಣಗಳ ಅಧಿಕಾರಿಯೂ ಆಗಿದ್ದನು. ಆದರೆ ಈ ಅಧಿಕಾರವು ವೈಯಕ್ತಿಕವಾಗಿರಲಿಲ್ಲ; ಅಲ್ಲದೆ ಅದರ ದುರುಪಯೋಗವನ್ನು ಅವನು ಮಾಡದಂತೆ ಪ್ರಜೆಗಳ ಸ್ವಾತಂತ್ರ್ಯವನ್ನು ಅವನು ಅಪಹರಿಸದಂತೆ ತಕ್ಕ ರಕ್ಷಣೆಗಳಿದ್ದವು; ಮತ್ತು ಸಾರ್ವಭೌಮಾಧಿಕಾರದ ಪ್ರಯೋಗದಲ್ಲೂ ಪ್ರಶಾಸನಿಕ ವಿಧಾನ ಹಾಗೂ ನಿಯಂತ್ರಣಗಳಲ್ಲೂ ಅವನ ಎರಡನೆಯ ಪಾಲುಗಾರರಂತಿದ್ದ ಸಾರ್ವಜನಿಕ ಪ್ರಾಧಿಕಾರನಿಕಾಯಗಳೂ ಹಿತಸಂಬಂಧಗಳೂ ತಮ್ಮ ಹಕ್ಕು ಹಾಗೂ ಅಧಿಕಾರಗಳಿಂದ ಅವನ ಅಧಿಕಾರವನ್ನು ಪರಿಮಿತಗೊಳಿಸಿದ್ದವು. ವಸ್ತುತಃ ಆತನು ಪರಿಮಿತ ಅಥವಾ ಸಾಂವಿಧಾನಿಕ ರಾಜನಾಗಿದ್ದನು. ಆದರೆ ಸಂವಿಧಾನವನ್ನು ಆಧರಿಸಿದ ಯಂತ್ರ ಮತ್ತು ಅದು ಹಾಕಿದ್ದ ಅಧಿಕಾರನಿರ್ಬಂಧ ಇವು ಯುರೋಪಿಯನ್ ಇತಿಹಾಸದಲ್ಲಿ ನಮಗೆ

ಪರಿಚಿತವಾದಂಥವುಗಳಿಂದ ಭಿನ್ನವಾಗಿದ್ದವು; ಮಧ್ಯಯುಗದ ಯುರೋಪಿಯನ್ ದೊರೆಗಳಿಗಿಂತ ಹೆಚ್ಚಾಗಿ ಆತನ ಶಾಸನಾಧಿಕಾರ ಮುಂಬರಿಯುವುದು ಜನತೆಯ ಇಚ್ಛೆ ಹಾಗೂ ಒಪ್ಪಿಗೆಯ ಮುಂಬರಿತವನ್ನೇ ಅವಲಂಬಿಸಿತ್ತು. ಧರ್ಮ ರಾಜನಿಗಿಂತಲೂ ಹೆಚ್ಚಿನ ಸಾರ್ವಭೌಮ ಸ್ಥಾನದಲ್ಲಿತ್ತು. ಜನರ ಜೀವನವನ್ನು ಸಂಘಟಿತವಾಗಿ ಪ್ರಶಾಸಿಸುತ್ತಿದ್ದ ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ನೈಯಾಯಿಕ ಮತ್ತು ಸಾಂಪ್ರದಾಯಿಕ ಕಾಯಿದೆಯೇ ಆ ಧರ್ಮ. ಧರ್ಮದ ಈ ಅಶರೀರಪ್ರಭುತ್ವವು ಪವಿತ್ರವೂ, ತನ್ನ ಸತ್ವದಲ್ಲಿ ಮತ್ತು ಶರೀರಸರ್ವಸ್ವದಲ್ಲಿ ಸನಾತನವೂ, ಲಕ್ಷಣತಃ ಯಾವಾಗಲೂ ಏಕರೂಪದ್ದೂ ಆಗಿತ್ತು. ಸಮಾಜದ ವಿಕಾಸದಿಂದ ಅದರ ರೂಪದಲ್ಲಿ ಸಂಘಟಿತವಾಗಿಯೂ ಸ್ವಯಂಪ್ರೇರಿತವಾಗಿಯೂ ಉಂಟಾದ ನೂತನ ಬದಲಾವಣೆಗಳು ಆಗಾಗ ಅದರಲ್ಲಿ ಸೇರಿಸಲ್ಪಡುತ್ತಿದ್ದವು. ಭೌಗೋಲಿಕ, ಕೌಟುಂಬಿಕ ಮತ್ತು ಇನ್ನಿತರ ಸಂಪ್ರದಾಯಗಳು ಆಂತರಿಕವಾಗಿ ಮಾತ್ರ ಪರಿವರ್ತನೀಯವಾಗಿದ್ದು ಅದರ ಒಂದು ಗೌಣ ಅಂಗವಾಗಿದ್ದವು. ಈ ಸ್ವರೂಪದ ಧರ್ಮದಲ್ಲಿ ಲೌಕಿಕ ಅಧಿಕಾರವಾವುದಕ್ಕೂ ಮನಸ್ಸುಬಂದಂತೆ ಕೈ ಹಾಕಲು ಹಕ್ಕಿರಲಿಲ್ಲ. ಬ್ರಾಹ್ಮಣರು ಧರ್ಮದ ಕ್ರೋಡೀಕರಣ ಮತ್ತು ವ್ಯಾಖ್ಯಾನಗಳಿಗಷ್ಟೇ ಹೊಣೆಯಾಗಿದ್ದರಲ್ಲದೆ ಅದರ ಜನಕರೂ ಆಗಿರಲಿಲ್ಲ, ಮತ್ತು ಮನಬಂದಂತೆ ಅದರಲ್ಲಿ ಬದಲಾವಣೆಗಳನ್ನು ಮಾಡುವುದಕ್ಕೂ ಅವರಿಗೆ ಅಧಿಕಾರವಿದ್ದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಅಧಿಕೃತ ವಿವರಣೆ ಕೊಡುವುದರ ಮೂಲಕ ಆ ಈ ತತ್ವದಲ್ಲಿ ಅಥವಾ ಧರ್ಮಾಂಶದಲ್ಲಿ ಬದಲಾವಣೆಗಳಾಗುವ ಪ್ರವೃತ್ತಿ ಕಂಡರೆ ಅದನ್ನು ವಿರೋಧಿಸಲು ಅಥವಾ ಅನುಮೋದಿಸಲು ಶಕ್ತರಾಗಿದ್ದರೆಂಬುದೇನೋ ಸ್ಪಷ್ಟವಿದೆ. ದೊರೆಯು ಧರ್ಮದ ರಕ್ಷಕನು, ಸೇವಕನು ಮತ್ತು ಅಮಲಿನಲ್ಲಿ ತರುವವನು ಮಾತ್ರ ಆಗಿದ್ದನು. ಅವನು ಜನರು ಧರ್ಮದಂತೆ ನಡೆದುಕೊಳ್ಳುವುದು, ಧರ್ಮದ್ರೋಹ, ಅಕ್ರಮ ಆಚರಣೆ ಮತ್ತು ಧರ್ಮ ಲೋಪಗಳಲ್ಲಿ ಬೀಳದಿರುವುದು ಇವನ್ನು ನೋಡಿ ಕೊಳ್ಳಬೇಕಾಗಿದ್ದಿತು. ಧರ್ಮಕ್ಕೆ ಬಾಗಿ ನಡೆಯುವುದರಲ್ಲಿ ಅವನೇ ಮೊದಲಿಗನು; ಅಲ್ಲದೆ ತನ್ನ ಖಾಸಗಿ ಜೀವನ ಮತ್ತು ಆಚಾರದ ಇತಿಮಿತಿಯ ಮೇಲೆ ಅರಸುತನದ ಕರ್ತವ್ಯ-ಅಧಿಕಾರ ವಿಷಯಗಳ ಮೇಲೆ ಧರ್ಮವು ಹಾಕಿದ ಕಠೋರ

ನಿಯಮಗಳನ್ನು ಅವನು ಪಾಲಿಸಬೇಕಾಗಿದ್ದಿತು.

ಪ್ರಭುತ್ವಾಧಿಕಾರವು ಧರ್ಮದ ಕಕ್ಷೆಗೆ ಒಳಪಟ್ಟಿರುವುದು ಅವ್ಯಾವಹಾರಿಕ ಆದರ್ಶತತ್ವವಾಗಿರಲಿಲ್ಲ; ಏಕೆಂದರೆ ಸಾಮಾಜಿಕ ಧಾರ್ಮಿಕ ಕಾಯಿದೆಯು ಜನದ ಸಮಷ್ಟಿಜೀವನವನ್ನು ಸಕ್ರಿಯವಾಗಿ ರೂಪಿಸುತ್ತಿತ್ತು; ಆದ್ದರಿಂದ ಅದು ವಾಸ್ತವಿಕ ಸತ್ಯವೇ ಆಗಿತ್ತು; ಅಲ್ಲದೆ ರಾಜಕೀಯ ಕ್ಷೇತ್ರದಲ್ಲಿ ಅದು ವ್ಯಾವಹಾರಿಕ ಪರಿಣಾಮಗಳನ್ನು ಉಂಟುಮಾಡುತ್ತಿತ್ತು. ಇದರ ಅರ್ಥವೇನೆಂದರೆ, ರಾಜನಿಗೆ ನೇರವಾಗಿ ಕಾಯಿದೆ ಮಾಡುವ ಅಧಿಕಾರವಿರಲಿಲ್ಲ; ಅವನ ಅಧಿಕಾರವು ಜನಾಂಗದ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ರಚನೆಗಳಿಗನುಗುಣವಾಗಿರುವ ಆಡಳಿತದ ಅನುಜ್ಞೆಗಳನ್ನು ಹೊರಡಿಸುವಷ್ಟಕ್ಕೇ ಪರಿಮಿತವಾಗಿತ್ತು–ಇಲ್ಲೂ ಕೂಡ ಕೆಲವು ಸಂಸ್ಥೆಗಳು ಪ್ರಶಾಸನಾನುಜ್ಞೆಗಳನ್ನು, ಸ್ವತಂತ್ರವಾಗಿ ಹೊರಡಿಸಿ ಜಾರಿಗೆ ತರುವುದರಲ್ಲಿ ಪಾಲುಗಾರರಾಗಿದ್ದವು. ಇಷ್ಟಲ್ಲದೆ ರಾಜನು ತನ್ನ ಆಡಳಿತದ ಸಾಮಾನ್ಯ ರೂಪ-ರೇಷೆ, ಲಕ್ಷಣ ಮತ್ತು ಕಾರ್ಯರೂಪದ ಪರಿಣಾಮಗಳ ಬಗ್ಗೆ ಜನ ತಳೆದಿರುವ ಅಭಿಪ್ರಾಯವನ್ನು ಅಲ್ಲಗಳೆಯಲಾರದವನಾಗಿದ್ದನು.

ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಜೀವನದ ಸ್ವಾಯತ್ತತೆ:

ಮಹಾಜನರ ಧಾರ್ಮಿಕ ಸ್ವಾತಂತ್ರ್ಯಕ್ಕೆ ಪ್ರತ್ಯಾಭೂತಿ ಇತ್ತು; ಮತ್ತು ಯಾವ ವ್ಯಾವಹಾರಿಕ ಅಧಿಕಾರದಿಂದಲೂ ಅದನ್ನು ಕುಂಠಿತಗೊಳಿಸುವಂತಿರಲಿಲ್ಲ. ಪ್ರತಿಯೊಂದು ಧಾರ್ಮಿಕ ಸಮುದಾಯವೂ, ಪ್ರತಿಯೊಂದು ಹೊಸ ಅಥವಾ ಹಳೆಕಾಲದಿಂದ ಬಂದ ಧರ್ಮವೂ ತನ್ನದೇ ಆದ ಜೀವನನೀತಿಯನ್ನೂ ಸಂಸ್ಥೆಗಳನ್ನೂ ರೂಪಿಸುಕೊಳ್ಳಬಹುದಿತ್ತು; ಮತ್ತು ಆಯಾ ಕ್ಷೇತ್ರದಲ್ಲಿ ಪೂರ್ಣ ಸ್ವಾತಂತ್ರ್ಯವನ್ನನುಭವಿಸುತ್ತಿದ್ದ ತನ್ನದೇ ಆದ ಆಡಳಿತಸಂಸ್ಥೆಗಳನ್ನು ಇಟ್ಟುಕೊಂಡಿತ್ತು. ರಾಜ್ಯಕ್ಕೇ ಪ್ರತ್ಯೇಕವಾದ ಧರ್ಮವೆಂಬುದಿರಲಿಲ್ಲ. ಮತ್ತು ಅರಸನು ಪ್ರಜೆಗಳ ಮುಖ್ಯಸ್ಥನೂ ಆಗಿರಲಿಲ್ಲ. ಈ ಕ್ಷೇತ್ರದಲ್ಲಿ ಅಶೋಕನು ತನ್ನ ರಾಜ-ನಿಯಂತ್ರಣವನ್ನೂ, ರಾಜ-ಪ್ರಭಾವವನ್ನೂ ಬೆಳೆಸಲು ಪ್ರಯತ್ನಿಸಿದಂತೆ ತೋರುತ್ತದೆ. ಆದೇ ಮೇರೆಗೆ ಮಿಕ್ಕ ಕೆಲ ಬಲಿಷ್ಠ ಅರಸರು

ಸ್ವಲ್ಪಮಟ್ಟಿಗೆ ಇಂತಹ ಪ್ರಯತ್ನಗಳನ್ನು ಮಾಡಿದುದುಂಟು. ಆದರೆ ಅಶೋಕನ ಎಂದು ಹೇಳಲಾಗುವ ಈ ಮಾದರಿಯ ಶಿಲಾಶಾಸನಗಳು ಆದೇಶಗಳಾಗಿರದೆ ಉಪದೇಶಲಕ್ಷಣವನ್ನು ಹೊಂದಿದ್ದವು. ಧರ್ಮದ ನಂಬಿಕೆಯನ್ನಾಗಲಿ, ಧರ್ಮ ಸಂಸ್ಥೆಗಳನ್ನಾಗಲಿ ಬದಲಿಸಲು ಬಯಸುವ ಪ್ರಭುವು ಭಾರತೀಯ ತತ್ವವಾದ ಸಂಘ–ಸ್ವಾತಂತ್ರ್ಯ ಮತ್ತು ಸಂಬಂಧಿಸಿದವರ ಪೂರ್ವ ಸಮ್ಮತಿ ಮತ್ತು ಸುಪ್ರಸಿದ್ಧವಾದ ಅಧಿಕಾರಸಮಿತಿಗಳ ಅಭಿಪ್ರಾಯ ಇವನ್ನು ತೆಗೆದುಕೊಳ್ಳಬೇಕಾಗಿದ್ದಿತು. ಅಥವಾ ಉಪಸ್ಥಿತ ಪ್ರಕರಣವನ್ನು ಪ್ರಸಿದ್ಧ ಬೌದ್ಧ ಸಭೆಗಳಲ್ಲಿದ್ದಂತೆ, ಸಲಹೆಸಮಿತಿಯ ಮುಂದೆ ಇಡಬೇಕಾಗಿದ್ದಿತು; ಇಲ್ಲವೆ ಭಿನ್ನ ಧರ್ಮೀಯ ಪಂಡಿತರಲ್ಲಿ ಚರ್ಚೆಯನ್ನೇರ್ಪಡಿಸಿ ಅವರ ತೀರ್ಮಾನದಂತೆ ನಡೆದುಕೊಳ್ಳಬೇಕಾಗಿದ್ದಿತು. ರಾಜನು ಆ ಈ ಪಂಥಕ್ಕೆ ಒಲಿಯಬಹುದು; ಅವನ ಆಚರಣೆಯ ಒಲವಿನಿಂದ ತಕ್ಕಮಟ್ಟಿನ ಪ್ರಚಾರದ ಪ್ರಯೋಜನವು ಆಯಾ ಪಂಥಕ್ಕೆ ಸ್ಪಷ್ಟವಾಗಿ ಸಿಗಬಹುದಾಗಿತ್ತು. ಆದರೆ ಅದೇ ಸಮಯದಲ್ಲಿ ತನ್ನ ಸಾರ್ವಜನಿಕ ಹುದ್ದೆಯಲ್ಲಿ ರಾಜನು ಜನರಿಂದ ಮನ್ನಿಸಲ್ಪಟ್ಟ ಧರ್ಮಗಳನ್ನು ಕೆಲಮಟ್ಟಿನ ನಿಷ್ಪಕ್ಷಪಾತದಿಂದ ನೋಡಿಕೊಳ್ಳಬೇಕಾಗಿದ್ದಿತು. ಬೌದ್ಧ ಹಾಗೂ ಬ್ರಾಹ್ಮಣ ಸಮ್ರಾಜರು ಪರಸ್ಪರ ವಿರುದ್ಧ ಧರ್ಮಗಳೆರಡಕ್ಕೂ ಪ್ರೋತ್ಸಾಹ ನೀಡಿದ್ದರ ಸೂತ್ರಾರ್ಥವನ್ನು ನಾವು ಇಲ್ಲಿ ಕಾಣುತ್ತೇವೆ. ಕೆಲವು ಸಂದರ್ಭಗಳಲ್ಲಿ ಮುಖ್ಯವಾಗಿ ದಕ್ಷಿಣದಲ್ಲಿ ಧರ್ಮದ ಮೇಲಿನ ಚಿಕ್ಕ ದೊಡ್ಡ ದಬ್ಬಾಳಿಕೆಯ ಉದಾಹರಣೆಗಳು ಸಿಗಬಹುದು. ಆದರೆ ಈ ಧಾರ್ಮಿಕ ದಬ್ಬಾಳಿಕೆಗಳು ಧರ್ಮ ಭಂಗಗಳೇ ಆಗಿರುತ್ತಿದ್ದವು. ಮತ್ತು ಅವಕ್ಕೆ ತೀಕ್ಷ್ಣ ಧಾರ್ಮಿಕ ವಿಚಾರ ಕ್ರಾಂತಿಯ ಕಾಲದ ಭಾವೋದ್ರೇಕವೇ ಕಾರಣವಾಗಿತ್ತು; ಅವು ಕೇವಲ ಸ್ಥಾನಿಕವೂ ಅಲ್ಪಕಾಲಿಕವೂ ಆಗಿರುತ್ತಿದ್ದವು. ಭಾರತೀಯ ರಾಜ್ಯಪದ್ಧತಿಯಲ್ಲಿ ಸಾಮಾನ್ಯವಾಗಿ ಇಂಥ ಧಾರ್ಮಿಕ ದಬ್ಬಾಳಿಕೆ ಮತ್ತು ಅಸಹನೆಗೆ ಸ್ಥಾನವಿರಲಿಲ್ಲ. ಹಾಗೂ ಸ್ಥಿರೀಕೃತ ರಾಜ್ಯಧೋರಣವು ಯೋಜಿಸಲ್ಪಡುವಂತೆಯೂ ಇರಲಿಲ್ಲ. ಜನತೆಯ ಸಾಮಾಜಿಕ ಜೀವನವು ಮನಸ್ವಿ ಕಾರಭಾರಿಗಳ ಹಸ್ತಕ್ಷೇಪದಿಂದ ಮುಕ್ತವಾಗಿದ್ದಿತ್ತು. ಈ ಕ್ಷೇತ್ರದಲ್ಲಿ ರಾಜನು ಕಾಯಿದೆಯನ್ನು ಪಾಸುಮಾಡಿದ್ದು ವಿರಳ; ಹಾಗೆ ಮಾಡಿದ ಸಂದರ್ಭದಲ್ಲಿಯೂ ಸಂಬಂಧಪಟ್ಟವರೊಡನೆ ವಿಚಾರವಿನಿಮಯ ಮಾಡಬೇಕಾಗಿದ್ದಿತು.

ಧೀರ್ಘಕಾಲದ ಪ್ರಾಬಲ್ಯದಿಂದ ವಿಸಂಘಟಿತವಾಗಿದ್ದ ಜಾತಿಪದ್ಧತಿಯನ್ನು ಪುನರ್‌ವ್ಯವಸ್ಥೆಗೊಳಿಸಲು ಮಾಡಿದ ಬಂಗಾಲದ ಸೇನ ರಾಜರ ಪ್ರಯತ್ನವು ಇದಕ್ಕೊಂದು ಉದಾಹರಣೆ. ಸಮಾಜದಲ್ಲಿಯ ಬದಲಾವಣೆಗಳು ಕೃತಕವಾಗಿ ಮೇಲಿಂದ ಹೇರಲ್ಪಡದೆ ಅದರೊಳಗಿಂದಲೇ ಬೆಳೆದುಬಂದವಾಗಿದ್ದವು. ಅಂಥ ಬೆಳವಣಿಗೆ ಮುಖ್ಯವಾಗಿ ಆಯಾ ಕುಟುಂಬ ಅಥವಾ ಸಮುದಾಯಗಳಿಗೆ ತಮ್ಮ ಆಚಾರವನ್ನು ವೃದ್ಧಿಪಡಿಸಿಕೊಳ್ಳಲು ಅಥವಾ ಬದಲಿಸಿಕೊಳ್ಳಲು ಕೊಟ್ಟ ಅವಕಾಶದಿಂದಲೇ ಆದದ್ದು.

ರಾಜನ ಪ್ರಶಾಸನಾಧಿಕಾರದ ಇತಿ-ಮಿತಿಗಳು:

ಆಡಳಿತದ ಕ್ಷೇತ್ರದಲ್ಲಿಯೂ ಅದೇ ಮೇರೆಗೆ ರಾಜಶಕ್ತಿಯೂ ಆಚರಣೆಯಲ್ಲಿದ್ದ ಧರ್ಮದಿಂದ ಬದ್ಧವಾಗಿತ್ತು. ರಾಜಾದಾಯದ ಅತಿ ಮುಖ್ಯ ಆಕರಗಳಲ್ಲಿ ರಾಜನು ನಿರ್ದಿಷ್ಟ ಶತಾಂಶವನ್ನು ಪರಮಾವಧಿ ಕರವೆಂದು ವಸೂಲು ಮಾಡಬಹುದಾಗಿತ್ತು. ಇನ್ನಿತರ ಕರಾಕರಣೆಯಲ್ಲಿ ಸಮಷ್ಟಿಯ ಬೇರೆ ಬೇರೆ ಪ್ರಾತಿನಿಧಿಕ ಅಂಗಗಳ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುತ್ತಿತ್ತು. ಒಟ್ಟಿನಲ್ಲಿ ಯಾವಾಗಲೂ ಅವನ ಆಳುವ ಅಧಿಕಾರವೇ ಜನತೆಯ ತೃಪ್ತಿ ಮತ್ತು ಸದಿಚ್ಛೆಗಳಿಗೆ ಒಳಪಟ್ಟಿತ್ತು. ಇದು ಧರ್ಮದ ಒಡೆಯರಾಗಿದ್ದ ಬ್ರಾಹ್ಮಣರ ಶುಷ್ಕ ಸದಾಶಯ ಮಾತ್ರ ಆಗಿರಲಿಲ್ಲ. ಸ್ವತಃ ರಾಜನೇ ಅತ್ಯುಚ್ಚ ನ್ಯಾಯಾಧಿಕಾರಿಯಾಗಿದ್ದನು; ಅವನೇ ವ್ಯಾವಹಾರಿಕ ಮತ್ತು ಅಪರಾಧಿಕ ಕಾಯಿದೆಯ ಜಾರಿಯಲ್ಲಿ ಅತ್ಯುಚ್ಚ ನಿಯಂತನಾಗಿದ್ದನು. ಆದರೆ ಇಲ್ಲಿ ಕೂಡ ಅವನ ಪಾತ್ರವು ಕೇವಲ ಕಾರ್ಯಪಾಲಕನದಾಗಿತ್ತು: ತನ್ನ ನ್ಯಾಯಾಧಿಕಾರಿಗಳ ಅಥವಾ ಧರ್ಮಜ್ಞರಾದ ಬ್ರಾಹ್ಮಣರ ಮೂಲಕ ಇದ್ದ ಹಾಗೆಯೇ ಧರ್ಮವನ್ನು ಚಾಚೂ ತಪ್ಪದಂತೆ ಪ್ರಶಾಸಿಸಲು ಬದ್ಧನಾಗಿದ್ದನು. ವಿದೇಶನೀತಿ, ಸೈನಿಕ ಆಡಳಿತ, ಯುದ್ಧ, ಶಾಂತಿ ಮತ್ತು ಇತರ ಅನೇಕ ನಿರ್ದೇಶಕ ಕಾರ್ಯಗಳಲ್ಲಿ ಮಾತ್ರ ರಾಜನಿಗೆ ಮಂತ್ರಿಮಂಡಲದಲ್ಲಿ ಪೂರ್ಣವೂ ಅನಿರ್ಬದ್ಧವೂ ಆದ ನಿಯಂತ್ರಣವಿತ್ತು. ಸಮಷ್ಟಿಯ ಯೋಗಕ್ಷೇಮ, ಸುವ್ಯವಸ್ಥೆ, ಸಾರ್ವಜನಿಕ ನೀತಿಮತ್ತೆ ಮತ್ತು ಇಂಥ ಸಾರ್ವಭೌಮಾಧಿಕಾರದಿಂದ ನಿಯಂತ್ರಿಸಬಹುದಾಗಿದ್ದ ಅಥವಾ ಅಧೀಕ್ಷಿಸಬಹುದಾಗಿದ್ದ

ಇನ್ನಿತರ ಎಲ್ಲ ವಿಷಯುಗಳನ್ನೂ ಪಡೆದು ಬೆಳೆಯಿಸುವ ಆಡಳಿತಾಂಶದ ದಕ್ಷ ನಿರ್ವಹಣೆಯಲ್ಲಿ ಅವನು ಸ್ವತಂತ್ರನಾಗಿದ್ದನು. ಅವನಿಗೆ ಕಾಯಿದೆಗೆ ಅನುಗುಣವಾಗಿ ದಂಡಿಸುವ, ಮತ್ತು ಪುರಸ್ಕರಿಸುವ ಹಕ್ಕಿತ್ತು; ಆ ಹಕ್ಕನ್ನು ಅವನು ಸಾರ್ವಜನಿಕ ಯೋಗಕ್ಷೇಮದ ಸಂವರ್ಧನೆ ಮತ್ತು ಸಾಮೂಹಿಕ ಕಲ್ಯಾಣಗಳನ್ನು ಗಮನಿಸಿ ನಡೆಸಬೇಕಾಗಿದ್ದಿತು.

ಆದ್ದರಿಂದ ಪ್ರಾಚೀನ ಭಾರತೀಯ ಪದ್ಧತಿಯಲ್ಲಿ ರಾಜನ ಸ್ವೇಚ್ಛಾಚಾರ, ಹಿಂಸೆ ಮತ್ತು ಶೋಷಣೆಗಳಿಗೆ ಸಾಮಾನ್ಯವಾಗಿ ಅವಕಾಶ ವಿರಲಿಲ್ಲ. ಇತರ ಕೆಲ ದೇಶಗಳ ಇತಿಹಾಸದಲ್ಲಿ ಸರ್ವಸಾಧಾರಣವಾಗಿ ಕಂಡು ಬರುವ ಅಸಹ್ಯ ಕ್ರೌರ್ಯ ಮತ್ತು ದಬ್ಬಾಳಿಕೆಗಳಿಗಂತೂ ಎಳ್ಳಷ್ಟೂ ಅವಕಾಶ ವಿರಲಿಲ್ಲ. ಹೀಗಿದ್ದರೂ ಪ್ರಭುವು ಧರ್ಮವನ್ನು ಧಿಕ್ಕರಿಸಿದಾಗ ಅಥವಾ ತನ್ನ ಶಾಸನಾಧಿಕಾರವನ್ನು ದುರುಪಯೋಗಿಸಿದಾಗ ಅಂಥ ಸಂಗತಿಗಳು ನಡೆಯ ಬಹುದಾಗಿತ್ತು. ಅಂಥ ಸಂಗತಿಗಳು ನಡೆದದ್ದೂ ಉಂಟು,–ಅಂಥವುಗಳಲ್ಲಿ ಬಹಳ ಕೆಟ್ಟದ್ದೆಂದು ಉಲ್ಲೇಖಿತವಾದ ದುಃಶಾಸನ ವಿದೇಶಿಯ ಮನೆತನಕ್ಕೆ ಸೇರಿದ ಶೋಷಕನದು; ಇತರ ಪ್ರಕರಣಗಳಲ್ಲಿ ರಾಜನ ಮನಸ್ವಿ ಕಾರಭಾರ ಹಿಂಸೆ ಅಥವಾ ಅನ್ಯಾಯಗಳು ಬಹಳಕಾಲ ನಡೆದಾಗ ಸಕಾಲದಲ್ಲಿ ಜನರು ಪರಿಣಾಮಕರ ಪ್ರತಿಭಟನೆ ಅಥವಾ ದಂಗೆಯನ್ನು ಮಾಡಿದ್ದುಂಟು. ಧರ್ಮ ಶಾಸ್ತ್ರಕಾರರು ಶೋಷಣೆಗೆ ತಕ್ಕ ಪ್ರತೀಕಾರವನ್ನು ಬರೆದಿಟ್ಟಿದ್ದರು. ರಾಜನು ದೇವಾಂಶಸಂಭೂತನೆಂದು ಹೇಳಿದ್ದರೂ ಅವನು ನಿಷ್ಠೆಯಿಂದ ಧರ್ಮಪರಿ ಪಾಲನೆ ಮಾಡುವುದನ್ನು ಬಿಟ್ಟ ಕ್ಷಣದಲ್ಲಿ ತನ್ನ ರಾಜತ್ವವನ್ನು ಕಳೆದು ಕೊಳ್ಳುವನೆಂದೂ ಪ್ರಜೆಗಳು ಅವನಿಗೆ ವಿಧೇಯತೆ ತೋರಿಸಬೇಕಾಗಿಲ್ಲ ವೆಂದೂ ವಿಧಿಸಲಾಗಿತ್ತು. ಅನರ್ಹತೆ ಮತ್ತು ಜನೇಚ್ಛಾನುಗುಣವಾಗಿ ಆಳುವ ಕರ್ತವ್ಯದ ಭಂಗಗಳೇ ಅವನನ್ನು ಪದಚ್ಯುತಗೊಳಿಸಲು ಶಾಸ್ತ್ರತಃ ಮತ್ತು ವ್ಯವ ಹಾರತಃ ಸಾಕಷ್ಟು ಕಾರಣಗಳಾಗಿದ್ದವು. ಹುಚ್ಚು ನಾಯಿಯನ್ನು ಕೊಂದಂತೆ ಅನ್ಯಾಯಿಯೂ, ಶೋಷಕನೂ ಆದ ಅರಸನನ್ನು ಕೊಂದುಹಾಕಬೇಕೆಂದು ಮನುವು ವಿಧಿಸುತ್ತಾನೆ. ಅತ್ಯಯ ಪ್ರಸಂಗಗಳಲ್ಲಿ ದಂಗೆ ಏಳುವುದನ್ನೂ, ರಾಜ ಹತ್ಯೆಮಾಡುವುದನ್ನೂ ಒಂದು ಹಕ್ಕು ಅಥವಾ ಕರ್ತವ್ಯವೆಂದು ಇಂಥ ಅತ್ಯುಚ್ಚ ಆಧಾರವು ಸಮರ್ಥಿಸಿರುವುದು ಸರ್ವಾಧಿಕಾರ ಅಥವಾ ರಾಜನ

ದೈವಿಕವಾದ ಅಮಿತಾಧಿಕಾರವು ಭಾರತೀಯ ರಾಜಕೀಯ ಪದ್ಧತಿಯ ಅಂಗವೇ ಆಗಿರಲಿಲ್ಲ ಎಂಬುವನ್ನು ತೋರಿಸಿಕೊಡಲು ಸಾಕು. ವಾಸ್ತವಿಕವಾಗಿ ನೋಡಿವರೆ ಜನ ರಾಜನ ಮೇಲೆ ಈ ಅಧಿಕಾರವನ್ನು ಉಪಯೋಗಿಸಿದ್ದಕ್ಕೆ ಸಾಹಿತ್ಯ ಮತ್ತು ಇತಿಹಾಸಗಳು ನಿರ್ದಶನ ಕೊಡಬಲ್ಲವು. ಮತ್ತೊಂದು ಹೆಚ್ಚು ಶಾಂತಿಯುತ ಮತ್ತು ಸರ್ವ ಸಾಮಾನ್ಯವಾಗಿ ಬಳಸಲಾಗುತ್ತಿದ್ದ ಉಪಾಯ ವೆಂದರೆ ರಾಜಬಹಿಷ್ಕಾರ ಅಥವಾ ಸ್ವದೇಶತ್ಯಾಗದ ಬೆದರಿಕೆ ಹಾಕುವುದು ಅನೇಕ ಸಂದರ್ಭಗಳಲ್ಲಿ ಭ್ರಷ್ಟ ರಾಜನಿಗೆ ಬುದ್ಧಿ ಕಲಿಸಲು ಸಾಕಾಗುತ್ತಿತ್ತು ಹದಿನೇಳನೆಯ ಶತಮಾನದಷ್ಟು ಈಚೆಗೆ ದಕ್ಷಿಣದಲ್ಲಿ ಜನರಿಗೆ ಅಪ್ರಿಯನಾದ ರಾಜನ ವಿರುದ್ಧ ವಾಗಿ ಇಂಥ ಬಹಿಷ್ಕಾರದ ಬೆದರಿಕೆ ಹಾಕಿದ ಮತ್ತು ಜಾನಪದ ಸಭೆಯು ಈ ಸಮಯದಲ್ಲಿ ರಾಜನಿಗೆ ಸಹಾಯ ಮಾಡಿದರೆ ಅದು ರಾಷ್ಟ್ರದ್ರೋಹವೆಂದು ಸಾರಿದ ಅಂಶವು ಗಮನಾರ್ಹವಾಗಿದೆ. ಈ ಪ್ರಕಾರ ರಚಿತವಾದ ರಾಜತ್ವವು ವ್ಯವಹಾರತಃ ಅನತಿವರ್ತಿಯೂ, ದಕ್ಷವೂ, ಉಪಕಾರಿಯೂ, ತನ್ನ ಉದ್ದೇಶಗಳನ್ನು ಸಫಲಗೊಳಿಸುವಂಥದೂ ಆಗಿತ್ತಲ್ಲದೆ ಪ್ರಜೆಗಳ ಹೃದಯಕ್ಕೆ ಆಪ್ಯಾಯಮಾನ ವಾಗಿತ್ತು. ಇಷ್ಟಾದರೂ ಈ ರಾಜಪ್ರಭುತ್ವವೆಂಬುದು ಭಾರತದ ಸರ್ವಾನು ಮತವೂ ಮುಖ್ಯವೂ ಆದ ಪ್ರಭುತ್ವಗಳಲ್ಲಿ ಒಂದು. ಆದರೆ ಹಿಂದೆ ಗಣರಾಜ್ಯ ಗಳಿದ್ದದ್ದು ನಮಗೆ ಕಂಡುಬರುವದರಿಂದ ಈ ರಾಜಪ್ರಭುತ್ವವು ಭಾರತೀಯ ಸಾಮಾಜಿಕ ರಾಜಕೀಯ ಪದ್ಧತಿಯ ಅನಿವಾರ್ಯ ಅಂಗವಾಗಿರಲಿಲ್ಲ; ರಾಜ ವೈಭವವನ್ನಷ್ಟೇ ನೋಡಿ ಅದರ ಹಿಂದೆ ಏನಿದೆ ಎಂಬುದನ್ನು ನೋಡದೆ ಹೋದರೆ ಭಾರತೀಯ ಪದ್ಧತಿಯ ನಿಜವಾದ ತತ್ವದ ಬಗ್ಗೆ ನಮಗೆ ಏನೂ ತಿಳಿಯಲಾರದು. ಇಡಿ ರಚನೆಯ ಮುಖ್ಯ ಲಕ್ಷಣದ ಸೂಚನೆ ಸಿಕ್ಕುವುದು ಅಲ್ಲೇ.

ಎರಡನೆಯ ಅಧ್ಯಾಯ

ಆತ್ಮಾನ್ವೇಷಣೆಯ ಸ್ಥಾಯಿಭಾವ.

ಭಾರತೀಯ ರಾಜ್ಯಧರ್ಮದ ನಿಜ ಸ್ವಭಾವವು ಅದನ್ನೊಂದು ಪ್ರತ್ಯೇಕ ಪದಾರ್ಥ, ಜನತೆಯ ಮನ-ಜೀವನಗಳ ಇತರ ಅಂಶದಿಂದ ಭಿನ್ನವಾದ ವಸ್ತು ಎಂದು ತಿಳಿದರೆ ಅರ್ಥವಾಗದು; ಅದನ್ನು ಸಮಾಜದ ಬಾಳಿನ ಒಂದು ಸಂಘಟಿತ ಸಾಕಲ್ಯಕ್ಕೆ ಸಂಬಂಧಿಸಿದ ಭಾಗವೆಂದು ತಿಳಿದರೆ ಮಾತ್ರ ಅರ್ಥವಾದೀತು.

ಒಂದು 'ಜನ' ಅಂದರೆ ಒಂದು ದೊಡ್ಡ ಮಾನವ ರಾಶಿ; ವಸ್ತುತಃ ಅದೊಂದು ಸಾಮೂಹಿಕ (ಸಾಮೂಹಿಕ ಎಂಬುದು ವಸ್ತುಸ್ಥಿತಿಯನ್ನು ಸರಿಯಾಗಿ ವ್ಯಂಜಿಸಲಾರದ ಒಂದು ಶುಷ್ಕ ಪದ) ಅಥವಾ ಸರ್ವ ಸಾಧಾರಣವಾದ ಇಲ್ಲವೆ ಸಾಮುದಾಯಿಕವಾದ ಆತ್ಮ, ಮನಸ್ಸು ಮತ್ತು ಶರೀರಗಳಿಂದ ಕೂಡಿದ ಸಂಘಟಿತ ಜೀವಿ.

ಸಮಾಜದ ಜೀವನವು ಮಾನವವ್ಯಕ್ತಿಯ ಭೌತಿಕ ಬಾಳಿನಂತೆ ಹುಟ್ಟು, ಬೆಳವಣಿಗೆ, ಯೌವನ, ಮುಪ್ಪು ಮತ್ತು ಅವನತಿಗಳನ್ನು ಚಕ್ರಗತಿಯಿಂದ ಹೊಂದುತ್ತದೆ. ಈ ಕೊನೆಯ ಅವಸ್ಥೆಯು ತಡೆಯಿಲ್ಲದೆ ದೂರಸಾಗಿ ಕ್ಷೀಣದಶೆಯನ್ನು ಮುಟ್ಟಿದರೆ ಅದು ಅವಸಾನ ಹೊಂದೀತು-ಅಂತೆಯೇ ಭಾರತ ಮತ್ತು ಚೀನಗಳನ್ನುಳಿದು ಮಿಕ್ಕೆಲ್ಲ ಪ್ರಾಚೀನ ಜನಾಂಗಗಳೂ ರಾಷ್ಟ್ರಗಳೂ ಮುಪ್ಪಡಸಿ ಮಾನವ ಸಾಯುವಂತೆ ನಶಿಸಿದವು. ಆದರೆ ಸಮಾಜಪುರುಷನಿಗೆ ತನ್ನ ಪುನರ್ನವೀಕರಣದ, ಪುನರುದಯದ ಮತ್ತು ಹೊಸ ಚಕ್ರಗತಿಯಲ್ಲಿ ಹೊರಡುವ ಶಕ್ತಿಯೂ ಇದೆ. ಯಾಕೆಂದರೆ ಪ್ರತಿ ಒಂದು ಜನಾಂಗದಲ್ಲೂ ಒಂದೊಂದು ಆತ್ಮ ಅಥವಾ ಪ್ರಾಣಸದೃಶ ಭಾವವು ಕಾರ್ಯಗತವಾಗಿರುತ್ತದೆ; ಆ ಭಾವ ಅದರ ಶರೀರಕ್ಕಿಂತ ಕಡಿಮೆ ಮರ್ತ್ಯವಾಗಿರುತ್ತದೆ; ಮತ್ತು ಈ ಭಾವವು ಸಾಕಷ್ಟು ಶಕ್ತವಾಗಿಯೂ ವ್ಯಾಪಕವಾಗಿಯೂ ಸತ್ವದಾಯಕವಾಗಿಯೂ ಇದ್ದರೆ ಅಲ್ಲದೆ ಸಾಕಷ್ಟು ಸಮರ್ಥ, ಸಚೇತನ ಮತ್ತು ನಿರಂತರ ವಿಕಾಸದೊಡನೆ

ಸ್ತಿಮಿತತೆಯನ್ನು ಅಳವಡಿಸಿಕೊಳ್ಳುವಷ್ಟು ಮನಸ್ಸೂ ಪ್ರವೃತ್ತಿಯೂ ಪರಿವರ್ತ ನೀಯವಾಗಿ ಉಳ್ಳ ಇಲ್ಲವೆ ತನ್ನ ಬಾಳಿನಲ್ಲಿ ಆ ಆತ್ಮ ಅಥವಾ ಪ್ರಾಣಸದೃಶ ಭಾವವನ್ನು ಅರಗಿಸಿಕೊಳ್ಳಬಲ್ಲ ಜನತೆಯಾದರೂ ಇದ್ದರೆ ಕೊನೆಯದಾಗಿ ನಿರ್ವೀರ್ಯತೆಯನ್ನು ಹೊಂದುವ ಮೊದಲು ಅಂಥ ಅನೇಕ ಚಕ್ರನೇಮಿಕ್ರಮ ಗಳನ್ನು ಅದು ಮುಗಿಸೀತು. ಅಷ್ಟೇ ಅಲ್ಲದೆ ಅಂಥ ಸ್ಥಾಯಿಭಾವವು ಸಮಾಜ ಪುರುಷನ ಆತ್ಮಾಭಿವ್ಯಕ್ತಿಯ ತತ್ವ ಮಾತ್ರ; ಮತ್ತು ಪ್ರತಿಯೊಂದು ಸಾಮುಷ್ಟಿಕ ಆತ್ಮವೂ ಕಾಲಭೂಮಿಗಳ ಪರಿಧಿಯಲ್ಲಿ ವ್ಯಕ್ತವಾಗಿ ಮಾನುಷ ಸಂಸ್ಕೃತಿಚಕ್ರಗಳ ನೀಚೋಚ್ಚದಶೆಗಳಲ್ಲಿ ಹಾಯ್ದುಹೋಗಿ ತನ್ನ ಪೂರ್ಣತೆಯನ್ನೇ ಮುಟ್ಟಲೀನೋ ಎಂಬಂತೆ ಅನ್ವೇಷಣೆಯಲ್ಲಿರುವ ಮಹತ್ತರ ನಿತ್ಯಾತ್ಮದ ಒಂದು ವಾಹಕ ಮತ್ತು ವ್ಯಂಜಕ ಎನ್ನಬಹುದು. ಆಗ ತನ್ನ ಭೌತಿಕ ಮತ್ತು ಬಾಹ್ಯ ಜೀವನ ದಲ್ಲಲ್ಲದೆ, ಬೆಳವಣಿಗೆಯ ಬದಲಾವಣೆಗಳನ್ನು ನಿಯಂತ್ರಿಸುವ ಹಾಗೂ ತನ್ನ ಮನಃಕವಾಟಕ್ಕೆ ಕೈಯಾಗಿರುವ ಉಕ್ತ ಸ್ಥಾಯಿಭಾವದ ಶಕ್ತಿಯಲ್ಲಷ್ಟೇ ಅಲ್ಲದೆ ಒಂದು ಜನತೆಯು ಹಿನ್ನೆಲೆಯಲ್ಲಿಯ ಆತ್ಮ ಅಥವಾ ಸತ್ವದಲ್ಲಿ ಜಾಗೃತವಾಗಿ ಬಾಳಿಯೂ ನಿರ್ವೀರ್ಯವಾಗದೆ, ಅವಸಾನ ಹೊಂದದೆ, ಲಯಿಸದೆ, ಮಿಕ್ಕವು ಗಳೊಡನೆ ವಿಲೀನವಾಗದೆ ಹೊಸ ಜನಾಂಗಕ್ಕಾಗಲಿ, ಕುಲಕ್ಕಾಗಲಿ ಸ್ಥಳ ಬಿಟ್ಟುಕೊಡದೆ,–ಸ್ವತಃ ತಾನೇ ಚಿಕ್ಕ ಚಿಕ್ಕ ಸಮಾಜಗಳನ್ನು ತನ್ನಲ್ಲಿ ಲಯಗೊಳಿಸಿಕೊಂಡು ತನ್ನ ನೈಸರ್ಗಿಕವಾದ ಬೆಳವಣಿಗೆಯ ಪರಮಾವಧಿ ಯನ್ನು ಮುಟ್ಟಿಯೂ ಅನೇಕ ಕಾಯಕಲ್ಪಗಳ ಮೂಲಕ ಸಾಯದೆ ಉಳಿದೀತು. ಅಥವಾ ಯಾವುದಾದರೂ ಒಂದು ಕಾಲದಲ್ಲಿ ತೀರಾ ನಿರ್ವೀರ್ಯ ದಶೆ ಇಲ್ಲವೆ ಲಯಗತಿಯಲ್ಲಿ ಅದು ನಿಂತಾಗಲೂ ತನ್ನ ಸತ್ವಬಲದಿಂದ ಪುನಃ ಬೆಳೆದೆಷ್ಟು ಮತ್ತೊಂದು ಮತ್ತೂ ಹೆಚ್ಚು ವೈಭವಪೂರ್ಣವಾದ ಸಂಸ್ಕೃತಿ ಚಕ್ರವನ್ನು ಆರಂಭಿಸೀತು. ಭಾರತದ ಇತಿಹಾಸವೆಂದರೆ ಅಂಥ ಜನತೆಯ ಜೀವನದ ಚರಿತ್ರೆ.

ಭಾರತೀಯ ಜನತೆಯ ಜೀವನ, ಸಂಸ್ಕೃತಿ ಹಾಗೂ ಸಾಮಾಜಿಕ ಧ್ಯೇಯಗಳನ್ನು ನಿಯಂತ್ರಿಸಿದ ಪ್ರಭಾವಿ ಕಲ್ಪನೆ ಎಂದರೆ ಆತ್ಮಾನ್ವೇಷಣೆ; ಮತ್ತು ಕ್ರಮವಾಗಿ ಅನ್ನಮಯ, ಪ್ರಾಣಮಯ ಹಾಗೂ ಮನೋಮಯ

ಪ್ರಕೃತಿಯ ವಿಕಾಸಕ್ಕೊಳಪಟ್ಟ, ಒಂದು ಕವಚವನ್ನಾಗಿಯೂ ಆ ಶೋಧನ ಮತ್ತು ನೈಸರ್ಗಿಕ ಅಜ್ಞಾನದಿಂದ ಆಧ್ಯಾತ್ಮಿಕ ಬಾಳಿಗೇರುವುದರ ಅಂಗ ಮತ್ತು ಸಾಧನವನ್ನಾಗಿಯೂ ಜೀವನವನ್ನು ಬಳಸಿಕೊಳ್ಳುವುದೇ ಆಗಿದೆ. ರಾಜಕೀಯ ಮತ್ತು ಸಾಮಾಜಿಕ ರಚನೆಯ ಹಾಗೂ ಭೌತಿಕ ಜೀವನದ ವಿಷಮ ಪರಿಸ್ಥಿತಿಯಲ್ಲಿಯೂ ಭಾರತವು ಈ ಪ್ರಭಾವಿ ಕಲ್ಪನೆಯನ್ನು ಎಂದೂ ಪೂರ್ಣ ಮರೆಯಲಿಲ್ಲ. ಆದರೆ ಮನಸ್ಸಿನ, ಧರ್ಮದ, ವಿಚಾರದ, ಕಲೆಯ ಅಥವಾ ಸಾಹಿತ್ಯದ ಮೂಲಕ ಆಗುವ ಆತ್ಮಾಭಿವ್ಯಂಜನೆಗಿಂತ ಸಾಮಾಜಿಕ ಜೀವನವನ್ನು ಮನುಷ್ಯನ ನೈಜ ಆತ್ಮದ ಮತ್ತು ಅವನ ಅಂತರಾಳದಲ್ಲಿಯ ಕೆಲವು ಅತ್ಯುನ್ನತ ಆತ್ಮಸಿದ್ಧಿಗಳ ಅಭಿವ್ಯಂಜಕವನ್ನಾಗಿ ಮಾಡುವುದು ಬಹು ಕಷ್ಟ. ಇವುಗಳಲ್ಲಿ ಭಾರತವು ಅಸಾಧಾರಣ ಉನ್ನತಿ–ವಿಸ್ತಾರಗಳನ್ನು ಸಾಧಿಸಿದರೂ ಅದು ತನ್ನ ಹೊರಬಾಳಿನಲ್ಲಿ ಕೆಲ ಪಾಕ್ಷಿಕ ಸಿದ್ಧಿಗಳನ್ನು ಮತ್ತು ಬಹಳ ಅಪೂರ್ಣ ತಾತ್ಕಾಲಿಕ ಫಲಗಳನ್ನು ಪಡೆಯುವದಕ್ಕಿಂತ ಮುಂದೆ ಹೋಗಲು ಶಕ್ತವಾಗಲಿಲ್ಲ,–ಬಾಹ್ಯ ಜೀವನದಲ್ಲಿ ಅದು ಸಾಧಿಸಿದ್ದೆಂದರೆ: ಒಂದು ಸಾರ್ವತ್ರಿಕ ಆತ್ಮಸಿದ್ಧಿಯ ಸಂಕೇತವಾಲೆ, ಆ ಮಹೋನ್ನತ ಆಶೆಯ ಪ್ರಸಾರ, ಸಮಷ್ಟಿಜೀವನಕ್ಕೆ ಕೊಟ್ಟ ಒಂದು ಬಗೆಯ ರೂಪ ಮತ್ತು ಆಧ್ಯಾತ್ಮಿಕ ಕಲ್ಪನೆಗಳಿಗನುಗುಣವಾದ ಸಂಸ್ಥೆಗಳ ನಿರ್ಮಾಣ. ರಾಜನೀತಿ, ಸಮಾಜನೀತಿ, ಅರ್ಥನೀತಿಗಳು ಮಾನವನ ಧ್ಯೇಯ ಮತ್ತು ನಡತೆಯ ಮೊದಲನೆಯ ಎರಡು ಸ್ಥೂಲ ಭಾಗಗಳು; ಭಾರತೀಯ ಪದ್ಧತಿಯಲ್ಲಿ ಅವನ್ನು ಅರ್ಥ ಮತ್ತು ಕಾಮಗಳೆನ್ನಲಾಗುತ್ತದೆ. ಜೀವನದ ಈ ಹೊರಬದಿಯಲ್ಲೂ ಮತ್ತು ರಾಜಕೀಯ ಜೀವನದಲ್ಲೂ ಉಕ್ತ ಪುರುಷಾರ್ಥಗಳೆರಡಕ್ಕೂ ಹೆಚ್ಚು ಉನ್ನತವಾದ ಧರ್ಮವೆಂಬ ಪುರುಷಾರ್ಥವನ್ನು ಯಾವಾಗಲೂ ಪೂರ್ಣವಾಗಿ ತಂದದ್ದು ಇಲ್ಲ; ರಾಜಕೀಯ ವ್ಯವಹಾರವನ್ನು ನೀತಿಯಿಂದ ನಿಯಂತ್ರಿಸುವ ಪ್ರಯತ್ನವು ಸಾಮಾನ್ಯವಾಗಿ ಬರಿ ಸೋಗು. ಇನ್ನೂ ಅಪ್ರಬುದ್ಧವಾಗಿರುವ ಮಾನವನ ಗತೇತಿಹಾಸದಲ್ಲಿ ಎಲ್ಲೂ ಶ್ರೇಯಸನ್ನು ಅಂತ್ಯಧ್ಯೇಯವನ್ನಾಗಿಟ್ಟುಕೊಂಡು ಸಾಮೂಹಿಕ ಬಾಹ್ಯ ಜೀವನವನ್ನು ಸುಸಂಬಂಧಗೊಳಿಸುವುದನ್ನು ಅಥವಾ ನಿಜವಾಗಿ ಏಕೀಕರಿಸುವುದನ್ನು ಯೋಚಿಸಿಯೂ ಇಲ್ಲ, ಪ್ರಯತ್ನಿಸಿಯೂ ಇಲ್ಲ, ಅದರಲ್ಲಿ ಜಯ ಹೊಂದಿದ್ದಂತೂ ಎಲ್ಲಿಯೂ ಇಲ್ಲವೇ ಇಲ್ಲ.

ಅದರಂತೆ ಭಾರತದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿಯೂ (ಮತ್ತು ಮಿಕ್ಕ ಕ್ಷೇತ್ರಗಳಿಗಿಂತ ಮುನ್ನವೇ ಆ ಪ್ರಯತ್ನವು ಮುರಿದು ಬಿದ್ದರೂ) ಅದರ ಜೀವನದ, ಪದ್ಧತಿಯ, ದಶಾಂತರದ ರಾಜಕೀಯ ನಿಯಮದಲ್ಲಿಯೂ ಹಿನ್ನೆಲೆಯಲ್ಲಿ ಅಧ್ಯಾತ್ಮ ಸಂಕೇತವನ್ನುಳ್ಳ (ಅಧ್ಯಾತ್ಮ ಜೀವನದ ಪೂರ್ಣ ಸಿದ್ಧಿ ಪಡೆಯುವುದನ್ನು ವ್ಯಕ್ತಿಯ ಪ್ರಯತ್ನಕ್ಕೆ ಮಹೋನ್ನತ ಗುರಿಯೆಂದು ಬಿಟ್ಟು ಕೊಡಲಾಗಿತ್ತು) ಪ್ರಾಚೀನ ಪದ್ಧತಿಯು ಪ್ರಗತಿ ಹೊಂದದಷ್ಟು ದೂರ ಧರ್ಮದ ಆಳಿಕೆ ನಡೆಸಿದ್ದನ್ನು ನಾವು ಕಾಣುತ್ತೇವೆ. ನಿರಂತರ ಪ್ರಯತ್ನದಿಂದಲೂ ಸಹನೆಯಿಂದಲೂ ಇಷ್ಟರ ಮಟ್ಟನ ಸಾಧನೆಯನ್ನು ಅದು ಮಾಡಿತು; ಮತ್ತು ಅದು ತನ್ನ ಸಾಮಾಜಿಕ ರಾಜಕೀಯ ಸಂಘಟನೆಗೆ ಒಂದು ವಿಲಕ್ಷಣವಾದ ಸ್ವರೂಪವನ್ನು ಕೊಟ್ಟಿತು. ಸಂಪೂರ್ಣ ಗುರಿಯಿಂದ ಸ್ವೀಕರಿಸಿ ವಿಸ್ತೃತಗೊಳಿಸುತ್ತ, ಸಮಗ್ರ ಅನುಭವದಿಂದಲೂ, ಅದರ ಮೊದಲಿನ ಧ್ಯೆಯವೇ ಆದ ಜೀವನವನ್ನು ಮತ್ತು ಅಧ್ಯಾತ್ಮವನ್ನು ಸಮನ್ವಯಗೊಳಿಸುವ ಹೆಚ್ಚು ನಿಶ್ಚಯ ಜ್ಞಾನದಿಂದಲೂ ಇನ್ನೂ ನಮ್ಮ ಬಾಳಿನಲ್ಲಿ ಸಾಧಿಸಲಾಗದ ಆಧ್ಯಾತ್ಮಿಕ ಸುಪ್ತ ಶಕ್ತಿಗಳು ಸತ್ಯಸಿದ್ಧಿಯ ಮೇಲೆ ನಿರ್ಮಿತವಾದ ಮಾನವ್ಯ ಸಾಮೂಹಿಕ ಅಸ್ತಿತ್ವದ ಸ್ಥಾನ ಮತ್ತು ಕಾರ್ಯಗಳನ್ನು ಗೊತ್ತುಪಡಿಸುವುದು ಮತ್ತು ಜನರ ಜೀವನದಲ್ಲಿ ಆತ್ಮಶಕ್ತಿಯನ್ನು ತುಂಬುವುದರ ಮೂಲಕ ಮಾನವ ಕುಲದಲ್ಲಿಯ ಗುರುತರ ಆತ್ಮನ ಲೀಲೆಯೆಂದೂ ವಿಶ್ವಸತ್ವವೆಂದೂ ವಿರಾಟ್ ಪುರುಷನ ಜಾಗೃತ ಸಾಮುದಾಯಿಕ ಶರೀರ ಮತ್ತು ಆತ್ಮವೆಂದೂ ತಿಳಿಸಿಕೊಡುವುದು ಬಹುಶಃ ಭವಿಷ್ಯದ್ಭಾರತಕ್ಕೆ ಸೇರಿದುದು.

ಭಾರತದ ಸ್ವಭಾವ ಸಹಜವೂ ಬಲಿಷ್ಠವೂ ಆದ ಸ್ಥಿರವ್ಯವಸ್ಥೆ:

ಪ್ರಾಚೀನ ಭಾರತದ ರಾಜ್ಯಧರ್ಮಕ್ಕೂ ಯುರೋಪಿಯನ್ನರದಕ್ಕೂ ವ್ಯತ್ಯಾಸವನ್ನು ಹುಟ್ಟಿಸುವ ವಿಷಯ ಒಂದಿರುವುದನ್ನು ಗಮನಿಸಬೇಕು; ಮತ್ತು ಮಾನಸಿಕ ವಿಷಯಗಳಲ್ಲಿ ಹಾಗೂ ಅಂತಃ ಸಂಸ್ಕೃತಿಯಲ್ಲಿ ಹೇಗೋ ಹಾಗೇ ಪಶ್ಚಿಮದ ಮಾನದಂಡವನ್ನು ಇಲ್ಲಿ ಕೂಡ ಅನ್ವಯಿಸಲು ಬರದು. ಮಾನವ ಸಮಾಜವು ಬೆಳವಣಿಗೆಯಲ್ಲಿ ತನ್ನ ಸಂಪೂರ್ಣ ಸಾಧ್ಯತೆಗಳತ್ತ ಸಾಗುವವರೊಪಲು ವಿಕಾಸದ ಮೂರು ಘಟ್ಟಗಳನ್ನು ಹಾಯ್ದು ಹೋಗಬೇಕು. ಸಾಮುದಾಯಿಕ

ಅಸ್ತಿತ್ವದ ಸ್ವರೂಪ ಮತ್ತು ಕ್ರಿಯೆಗಳು ಎಂದರೆ ಅದರ ಬಾಳಿನ ಶಕ್ತಿ ಮತ್ತು ತತ್ವಗಳ ಲೀಲೆ. ಇದು ಪ್ರಥಮಾವಸ್ಥೆ. ಹೀಗಿರುವಾಗ ಅದರ ಎಲ್ಲ ಅಭಿವೃದ್ಧಿ, ಆಕೃತಿ, ರೂಢಿ, ಸಂಸ್ಥೆಗಳೂ, ಒಂದು ಸಹಜ ಸಂಘಟಿತ ಸಮಭಿವೃದ್ಧಿಯೂ,-ಅದಕ್ಕೆ ಬೇಕಾದ ಚಾಲಕ ಹಾಗೂ ಘಟಕ ಶಕ್ತಿಯೂ ಹೆಚ್ಚಾಗಿ ಅದರ ಅಂತರ್ ಜೀವನದ ಅಂಧಶ್ಚೇತನೆಯಿಂದಲೇ ಬಂದಿತ್ತು. ಆ ಶಕ್ತಿಯು ನಿಶ್ಚಿತ ಉದ್ದೇಶವಿಲ್ಲದೆ ಭಾರತೀಯರ ಸಾಮುದಾಯಿಕ ಮನೋಧರ್ಮ, ಮನೋವೃತ್ತಿ ಮತ್ತು ಜೈವಿಕ ಹಾಗೂ ಭೌತಿಕ ಅವಶ್ಯಕತೆಗಳನ್ನು ವ್ಯಕ್ತಪಡಿಸುತ್ತಲೂ ಒಂದು ಅಂತಃ ಪ್ರೇರಣೆಯ ಹಾಗೂ ಸಮಷ್ಟಿಯ ಮನ-ಭಾವನೆಗಳ ಪ್ರಚೋದಕವಾದ ಆವರಣದ ಒತ್ತಾಯಕ್ಕೊಳಗಾಗಿ ತನ್ನ ಆ ಕಾರ್ಯವನ್ನು ಹಾಗೇ ಸಾಗಿಸಿಕೊಂಡು ಹೋಗುತ್ತಲೂ ಕೆಲವೊಮ್ಮೆ ಬದಲಾಯಿಸುತ್ತಲೂ ಇತ್ತು. ಈ ಅವಸ್ಥೆಯಲ್ಲಿ ಜನತೆ ವಿಚಾರಮಾರ್ಗದಲ್ಲಿ ಸಾಕಷ್ಟು ಚತುರವಾಗಿದ್ದಿಲ್ಲ; ಇನ್ನೂ ಅದು ವಿಚಾರಶೀಲ ಸಾಮೂಹಿಕ ಪುರುಷಕಾರಕ್ಕೆ ಸಿದ್ಧವಾಗಿರಲಿಲ್ಲ. ಅದು ವಿಚಾರಪರ ಇಚ್ಛಾಶಕ್ತಿಯಿಂದ ತನ್ನ ಇಡೀ ಸಮಷ್ಟಿ ಜೀವನವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದಿಲ್ಲ, ಕೇವಲ ತನ್ನ ಪ್ರಾಣಮಯ ಪ್ರತಿಭೆಗೆ ಅಥವಾ ಅದರ ಪ್ರಾಥಮಿಕ ಮಾನಸರೂಪಕ್ಕೆ ಅನುಗುಣವಾಗಿ ಬದುಕುತ್ತಿತ್ತು.

ಅನೇಕ ಪ್ರಾಚೀನ ಮತ್ತು ಮಧ್ಯಯುಗೀನ ಸಮಷ್ಟಿಗಳಲ್ಲಿ ಹೇಗೋ ಹಾಗೇ ಭಾರತೀಯ ಸಮಾಜದ ಮತ್ತು ರಾಜ್ಯಧರ್ಮದ ಮೊದಲ ಚೌಕಟ್ಟು ಅಂಥದೇ ಅವಧಿಯಲ್ಲಿ ಬೆಳೆಯಿತು. ಆದರೆ ಬೆಳೆಯುತ್ತಿದ್ದ ಸಾಮಾಜಿಕ ಜಾಗೃತಿ ಉಂಟಾದ ಅನಂತರದ ಅವಧಿಯಲ್ಲಿ ಅವು ಪರಿತ್ಯಕ್ತವಾಗದೆ ಭಾರತೀಯ ಜನತೆಯ ಸಚೇತನ ಪ್ರತಿಭೆಗೆ, ಮೂಲಪ್ರವೃತ್ತಿಗಳಿಗೆ, ಮತ್ತು ಮನಸ್ಸಿಗೆ ಸಹಜವೂ ಬಲಿಷ್ಠವೂ ಸ್ಥಿಮಿತವೂ ಆದ ಜೀವಂತ ವ್ಯವಸ್ಥೆಯಾಗುವಂತೆ ಇನ್ನಷ್ಟು ಸುಸ್ವರೂಪಗೊಳಿಸಲ್ಪಟ್ಟವು, ಸಂವರ್ಧಿಸಲ್ಪಟ್ಟವು ಮತ್ತು ಕ್ರೋಡೀಕರಿಸಲ್ಪಟ್ಟವು.

ಯುರೋಪಿಯನ್ನರ ರಾಜಕೀಯ ಮತ್ತು ಸಾಮಾಜಿಕ ಜೀವನದ ವೈಲಕ್ಷಣ್ಯ:–

ಮೊದಲು ಅದರ ಹೆಚ್ಚು ಸುಸಂಸ್ಕೃತ ಹೃದಯಗಳಲ್ಲಿಯೂ

ಅನಂತರ ಹೆಚ್ಚು ಸಾಮಾನ್ಯವಾಗಿ, ಕ್ರಮೇಣ ಸೂಕ್ಷ್ಮ ಸೂಕ್ಷ್ಮತರವಾಗಿ ಅದರ ಎಲ್ಲ ಭಾಗಗಳಲ್ಲಿಯೂ ಸಮಷ್ಟಿಮನಸ್ಸು ಹೆಚ್ಚು ಹೆಚ್ಚು ಬೌದ್ಧಿಕ ವಾಗಿ ಜಾಗೃತವಾಗುವುದು ಸಮಾಜವಿಕಾಸದ ಎರಡನೆಯ ಅವಸ್ಥೆ. ಪ್ರಬುದ್ಧ ಪ್ರಜ್ಞೆಯ ಬೆಳಕಿನಲ್ಲಿಯೂ ಕೊನೆಯದಾಗಿ ವಿಮರ್ಶಾತ್ಮಕವೂ ರಚನಾತ್ಮ ಕವೂ ಆದ ಕಾರ್ಯಕಾರಣ ವಿವೇಕದ ಶಕ್ತಿಯಿಂದಲೂ ಅದು ತನ್ನ ಜೀವನದ ಸಾಮುದಾಯಿಕ ಕಲ್ಪನೆ, ಆವಶ್ಯಕತೆ ಮತ್ತು ಸಂಸ್ಥೆಗಳನ್ನು ಪರಾಮರ್ಶಿಸಲೂ ಅವುಗಳೊಡನೆ ವ್ಯವಹರಿಸಲೂ ಕಲಿಯುತ್ತದೆ. ಈ ಅವಸ್ಥೆಯು ಮಹಾ ಸಿದ್ಧಿಯ ಸಂಭವಗಳಿಂದ ತುಂಬಿದೆ; ಆದರೆ ಜೊತೆಗೆ ಸಹಜವಾದ ಗಂಭೀರ ಅಪಾಯಗಳಿಂದಲೂ ಕೂಡಿದೆ. ಅದರಿಂದ ಬರುವ ಮೊದಲ ಲಾಭ ಗಳೆಂದರೆ: ಸ್ಪಷ್ಟವೂ ಅರ್ಥಗ್ರಾಹಕವೂ ಶುದ್ಧವೂ ಆದ ಶಾಸ್ತ್ರಜ್ಞಾನ ಹಾಗೂ ಅದರ ಅತ್ಯುನ್ನತಾವಸ್ಥೆಯಲ್ಲಿ ಶೋಧಕವೂ, ರಚನಾತ್ಮಕವೂ, ವೈಜ್ಞಾನಿಕವೂ ಆದ ವಿವೇಚನಾಶಕ್ತಿಯ ಪೂರ್ಣ ಉಪಯೋಗ ಹಾಗೂ ತತ್ಪರಿಣಾಮ–ತತ್ಪಾ ರಿತೋಷಿಕ ರೂಪದಲ್ಲಿ ದೊರಕುವ ನಿಯತವೂ ಸುಭದ್ರವೂ ಆದ ಕಾರ್ಯ ಸಾಮರ್ಥ್ಯ. ಸಮಾಜವಿಕಾಸದ ಈ ಅವಸ್ಥೆಯ ಮತ್ತೂ ಹೆಚ್ಚಿನ ಪರಿಣಾಮ ವೆಂದರೆ ಮಾನವನನ್ನು ಅವನ ಪ್ರಾಣಮಯ ಅಸ್ತಿತ್ವದಿಂದ, ಅವನ ಪ್ರಥಮದ ಸಾಮಾಜಿಕ, ಆರ್ಥಿಕ ಮತ್ತು ರಾಜನೈತಿಕ ಆಶೆ-ಆವಶ್ಯಕತೆ ಗಳಿಂದ–ಹೆಚ್ಚು ಹೆಚ್ಚು ಉದಾತ್ತತರ ಸಮಾಜಜೀವನವನ್ನು ನಡೆಸಲು ಸಾಧ್ಯವಾಗುವಂತೆ, ಆಶೆ ಆಕಾಂಕ್ಷೆಗಳು ಸಾಂಪ್ರದಾಯಿಕವಾಗಿ ರೂಪಿಸಿದ ಅಚ್ಚಿನಿಂದ ಅವನನ್ನು ಮೇಲೆಕ್ಕೆತ್ತಿ ತನ್ನ ಸಮಷ್ಟಿಜೀವನದಲ್ಲಿ ಧೀರ ಪ್ರಯೋಗವನ್ನು ಮಾಡುವ ಪ್ರೇರಣೆಯನ್ನು ಸ್ಫುರಣಗೊಳಿಸುವುದು. ಅದರ ಸ್ವಾಭಾವಿಕವಾದ ಅತ್ಯುನ್ನತ ಪರಿಣಾಮವೆಂದರೆ ನಿಯತವೂ, ಪರಿಪೂರ್ಣವೂ ಸುರಕ್ಷಿತವೂ ಆದ ದಕ್ಷತೆಯಿಂದ ವೈಜ್ಞಾನಿಕ ಮನೋವೃತ್ತಿಯನ್ನು ಜೀವನಕ್ಕೆ ಅನ್ವಯಿಸುವುದೇ ಆಗಿದೆ. ಮಹತ್ತರವೂ ಉದ್ದೇಶಪೂರ್ವಕವಾಗಿ ಎದುರಿಟ್ಟು ಕೊಂಡುದೂ ಆದ ಸಾಮಾಜಿಕ ರಾಜಕೀಯ ಧ್ಯೇಯಗಳ ಆರಾಧನೆ ಹಾಗೂ ಆ ಪ್ರಯತ್ನದಲ್ಲಿ ಸಾಧಿಸಿದ ಪ್ರಗತಿಮಾನದಂಡ ಇವು–ಎಷ್ಟೇ ಸದೋಷವೂ ಪರಿಮಿತವೂ ಆಗಿದ್ದರೂ–ಯುರೋಪಿನ ರಾಜಕೀಯ ಮತ್ತು ಸಾಮಾಜಿಕ ಪ್ರಯತ್ನದ ಗಣ್ಯ ಪ್ರಯೋಜನಗಳು.

ಇನ್ನೊಂದು ದೃಷ್ಟಿಯಿಂದ ಅವಲೋಕಿಸಿದರೆ ತಾನು ಭೌತಿಕ ಜೀವನದ ಸರ್ವತಂತ್ರ ಸ್ವತಂತ್ರ ಪ್ರಶಾಸಕ ಎಂದು ತಿಳಿದುಕೊಂಡು ತರ್ಕ ಬುದ್ಧಿಯು ಅದರೊಡನೆ ವ್ಯವಹರಿಸುವ ನಟನೆ ಮಾಡುವುದೆಂದರೆ, ಸಮಾಜವನ್ನು ಸಚೇತನ ಪದಾರ್ಥದ ಬೆಳವಣಿಗೆ ಎಂಬ ಸತ್ಯವನ್ನು ಳಿದು ಎತ್ತಲೋ ದೂರ ನೂಕಿ ಅದನ್ನು ಇಚ್ಛೆ ಬಂದಂತೆ ತಿದ್ದಬಹುದಾದ ಹಾಗೂ ಬುದ್ಧಿಯ ನಿರಂಕುಶ ಆಜ್ಞೆಯ ಅನುಸಾರ ಕಟ್ಟಿಗೆ–ಕಬ್ಬಿಣಗಳನ್ನು ಹೇಗೋ ಹಾಗೆ ರಚಿಸಬಹುದಾದ ಒಂದು ಯಂತ್ರವೆಂದು ನಡೆಸಿಕೊಳ್ಳುವುದೇ ಆಗಿದೆ. ನಾಗರಿಕ ನಡತೆಯನ್ನು ತೋರುವ, ದುಡಿಯುವ, ರಚನಾತ್ಮಕ ಕಾರ್ಯ ಮಾಡುವ ಯಾಂತ್ರಿಸುವ ಸಮರ್ಥ ವಿಚಾರಶಕ್ತಿಯು ಒಂದು ಜನತೆಯ ಚೈತನ್ಯಮಯ ಜೀವನದ ಸರಳ ತತ್ವಗಳ ಮೇಲಿನ ಹಿಡಿತವನ್ನು ಕಳೆದು ಕೊಳ್ಳುತ್ತದೆ; ಅದು ಅದನ್ನು ಅದರ ಬಾಳಿನ ಕಾಣಿಸದ ಬೇರುಗಳಿಂದ ಹರಿದೊಗೆಯುತ್ತದೆ. ಇದರ ಪರಿಣಾಮವೆಂದರೆ ಒಂದು ಪದ್ಧತಿ ಅಥವಾ ಸಂಸ್ಥೆಯ ವಿಧಾನದ ಹಾಗೂ ಪ್ರಶಾಸನದ ಮೇಲೆ ಅತಿಶಯವಾಗಿ ಅವಲಂಬಿಸುವುದು; ಅಲ್ಲದೆ ಸಚೇತನ ಜನತೆಯ ಸ್ಥಳದಲ್ಲಿ ಒಂದು ಯಾಂತ್ರಿಕ ರಾಜ್ಯವನ್ನು ಬೆಳೆಸುವ ಮಾರಕ ಪ್ರವೃತ್ತಿ ಉಂಟಾಗುವುದು. ಸಮುಷ್ಟಿಜೀವನದ ಈ ಒಂದು ಸಾಧನವು ಇಡಿ ಜೀವನಕ್ಕೆ ಆದೇಶವಾಗುವುದು. ಮತ್ತು ಅದರಿಂದ ಸಮರ್ಥವಾದರೂ ಯಾಂತ್ರಿಕವೂ ಕೃತಕವೂ ಆದ ಸಂಘಟನೆ ಉದಯಿಸುವುದು. ಆದರೆ ಈ ಬಾಹ್ಯ ವಿಕಾಸಕ್ಕೆ ತೆರುವ ದಂಡವೋ ಎಂಬಂತೆ ಒಂದು ಸ್ವತಂತ್ರವೂ ಒಂದು ಸಚೇತನವೂ ಆದ ಜನತೆಯ ನಿಕಾಯದಲ್ಲಿ ಸಂಘಟಿತವಾಗಿ ಸ್ವಯಂ–ಪ್ರವರ್ಧಮಾನ ಸಮಾಜಪುರುಷನ ಬಾಳಿನ ಸತ್ಯವನ್ನು ಕಳೆದು ಕೊಳ್ಳಬೇಕಾಗುತ್ತದೆ. ಯುರೋಪಿನ ದೌರ್ಬಲ್ಯವೆಂದರೆ ತನ್ನ ಯಾಂತ್ರಿಕ ಕ್ರಮದ ಜಡ ಭಾರವಡಿಯಲ್ಲಿ ಜೈವಿಕ ಮತ್ತು ಆಧ್ಯಾತ್ಮಿಕ ವಿಚಾರವನ್ನು ಔಂಕುವ ತಪ್ಪೇ ಆಗಿದೆ. ಈ ದೌರ್ಬಲ್ಯವೇ ಅದರ ಮಹಾಶಯವನ್ನು ವಿಕೃತಗೊಳಿಸಿ ಅದರ ಉನ್ನತತರ ಧ್ಯೇಯಗಳ ನಿಜವಾದ ಸಾಧನೆಗೆ ವಿಘ್ನವುಂಟುಮಾಡಿದೆ.

ಬರಲಿರುವ ತೃತೀಯ ಪಂಥ

ವ್ಯಷ್ಟಿಗೆ ಹೇಗೋ ಹಾಗೆ ಸಮುಷ್ಟಿಗಾದರೂ ತೃತೀಯಾವಸ್ಥೆಯನ್ನು

ಮುಟ್ಟದಲ್ಲದೆ ಅದು ಮೊದಲು ಕಂಡ ಮತ್ತು ಆರಾಧಿಸಿದ ಧ್ಯೇಯಗಳ ಮೂಲ ಆಕಾರವನ್ನೂ ಸ್ವರೂಪವನ್ನೂ ಶೋಧಿಸಲಾರದು, ಅವುಗಳ ಸಾಫಲ್ಯದ ನಿಜ ಸಾಧನ ಸನ್ನಿವೇಶಗಳನ್ನು ಕಾಣಲಾರದು. ಆದರ್ಶ ಸಮಾಜವೆಂಬುದು ಅಲ್ಲಿಯ ತನಕ ತಿರು ತಿರುಗಿ ತೇಲುತ್ತ, ಆಸೆಯನ್ನು ಮಸುಳಿಸುತ್ತ, ಓಡಿದು ಕೊಳ್ಳ ಹೋಗುವ ಕೈಯಿಂದ ತಪ್ಪಿಸಿಕೊಳ್ಳುತ್ತ ಕಣ್ಣೆದುರು ಸುಳಿವ ಪ್ರಭಾಮಯ ಮೇಘಸ್ಥ ಛಾಯೆ ಮಾತ್ರ. ಸಮಾಜಪುರುಷನು ಹೆಚ್ಚು ಗಂಭೀರವಾಗಿ ಬಾಳಲಾರಂಭಿಸಿದಾಗ, ತನ್ನ ಸಾಮೂಹಿಕ ಜೀವನವನ್ನು— ಮುಖ್ಯವಾಗಿ ಪ್ರಾಣಮಯ ಕೋಶದಿಂದ ಉದ್ಭೂತವಾದ ತನ್ನ ಅಗತ್ಯ, ಮೂಲ ಪ್ರವೃತ್ತಿ ಮತ್ತು ಸಂಸ್ಥೆಗಳಿಂದಲೂ ಅಲ್ಲ ಅಥವಾ ಗೌಣವಾಗಿ, ತನ್ನ ವಿಚಾರ ಶಕ್ತಿಯ ಕಲ್ಪನೆಗಳಿಂದಲೂ ಅಲ್ಲ—ನಿರಂತರವೂ ಐಕ್ಯಶಕ್ತಿ, ಸಹಾನುಭೂತಿ, ಸ್ವತಃಸಿದ್ಧ ಸ್ವಾತಂತ್ರ್ಯಗಳಿಂದಲೂ ವ್ಯಷ್ಟಿ-ಸಮಷ್ಟಿ ಜೀವನದ ಸ್ವಾಧೀನತೆಯ ಪೂರ್ಣತೆಯ ಹಾಗೂ ಏಕತೆಯ ಸೂತ್ರವನ್ನೊಳಗೊಂಡ ಲಬ್ಧ ಗುಹ್ಯತರ ಆತ್ಮ ಮತ್ತು ಸತ್ವಗಳ ಸೂಕ್ಷ್ಮವೂ ಸಚೇತನವೂ ಆದ ನೀತಿಯಿಂದಲೂ ನಿಯಂತ್ರಿಸಲು ಸಾಧ್ಯವಾದಾಗ ಅಂಥ ಕನಸು ನನಸಾಗುವುದು. ತನ್ನ ಪ್ರಯತ್ನವನ್ನು ಆರಂಭಿಸಲು ಕೂಡ ಆ ನೀತಿ ತಕ್ಕ ಸನ್ನಿವೇಶವನ್ನು ಇನ್ನೂ ಎಲ್ಲಿಯೂ ಕಂಡಿಲ್ಲ. ಆಧ್ಯಾತ್ಮಿಕ ಜೀವನದ ನೀತಿಯನ್ನು ಮುಟ್ಟಿ ಅದರಂತೆ ಬಾಳುವುದು ಕೆಲ ವ್ಯಕ್ತಿಗಳಿಗಷ್ಟೇ ಸೇರಿದ್ದು ಎಂಬುದು ನಿಂತ ಬಳಿಕ, ಅಥವಾ ತನ್ನ ಹೆಚ್ಚು ಸಾಧಾರಣ ಆಶಯದ ರೂಪದಲ್ಲಿ ಭೂರಿ ಧರ್ಮದ ಮಟ್ಟಕ್ಕೆ ಅದು ಇಳಿಯುವುದು ನಿಂತಾಗ, ಅದನ್ನು ಮಾನವನು ತನ್ನ ಬಾಳಿನ ಅನಿವಾರ್ಯ ಆವಶ್ಯಕತೆ ಎಂದು ತಿಳಿದು ಅನುಸರಿಸಿದಾಗ ಮಾತ್ರ ಅಂಥ ಸುದಿನ ಬಂದೀತು: ಅದರ ಸರಿಯಾದ ಹಾಗೂ ಸತ್ಯವಾದ ಸಾಧನೆಯು ಮಾನವ ಕುಲದ ವಿಕಾಸದ ಮುಂದಿನ ಹೆಜ್ಜೆಗೆ ಅವಶ್ಯಕ.

ಜೀವನದ ಸ್ವಯಂಭೂತಿತತ್ವ:

ಭಾರತದ ಪ್ರಾಚೀನ ಚಿಕ್ಕ ಸಮುದಾಯಗಳು ಮಿಕ್ಕವುಗಳಂತೆಯೇ ಓಜಸ್ವಿಯೂ ಸ್ವಯಂಭೂತವೂ ಆದ ಪ್ರಾಣಶಕ್ತಿಯ ಪ್ರಥಮಾವಸ್ಥೆಯಲ್ಲಿ ಬೆಳೆದವು; ಹಾಗೆ ಬೆಳೆಯುವಾಗ ತಮಗೆ ಸಹಜವಾಗಿಯೂ ಅನಿರ್ಬಂಧ

ವಾಗಿಯೂ ತಮ್ಮವೇ ಆದ ಮಾನದಂಡ ಮತ್ತು ಗಡಿಮಿತಿಗಳನ್ನು ಕಂಡು ಕೊಂಡು ತಮ್ಮ ಸಮಾಜಪುರುಷನ ಪ್ರಾಣಮಯ ಪ್ರತಿಭೆ ಮತ್ತು ಮನೋ ಧರ್ಮಗಳಿಂದ ಬಾಳ ಬಗೆ ಮತ್ತು ಸಾಮಾಜಿಕ–ರಾಜಕೀಯ ಸಂಸ್ಥೆಗಳನ್ನು ಎರಕಹೊಯ್ದುವು. ಸಾಂಸ್ಕೃತಿಕ–ಸಾಮಾಜಿಕ ಐಕ್ಯವು ದೃಢತರವಾಗುತ್ತ ಹೋಗುವಂತೆ ಅವು ಪರಸ್ಪರ ಲೀನವಾದಾಗ ಮತ್ತು ಹೆಚ್ಚು ಹೆಚ್ಚು ದೊಡ್ಡ ದೊಡ್ಡ ರಾಜಕೀಯ ನಿಕಾಯಗಳನ್ನು ರೂಪಿಸಿಕೊಂಡಾಗ ಅವುಗಳಲ್ಲಿ ಒಂದು ಸರ್ವಸಾಧಾರಣವಾದ ಸತ್ವಸಿದ್ಧಿ, ಸಾರ್ವತ್ರಿಕ ಅಡಿಗಟ್ಟು, ಮತ್ತು ವಿವರ ಗಳಲ್ಲಿ ಹೆಚ್ಚು ಸ್ವಾತಂತ್ರ್ಯವನ್ನು ಕೊಡುವ ಸತ್ವಸಾಮಾನ್ಯ ರಚನೆ ಕಂಡು ಬಂದವು. ಅಲ್ಲಿ ಅಭೇದ್ಯ ಸಾರೂಪ್ಯವು ಸಾಧ್ಯವಿದ್ದಿಲ್ಲ: ಈ ಪರಿವರ್ತ ನೀಯತೆಯು ಮೇಲೆ ಸಾಮಾನ್ಯ ಐಕ್ಯ ಮುದ್ರೆಯನ್ನೊತ್ತಲು ಅವುಗಳ ಸರ್ವ ಸಾಧಾರಣ ಸತ್ವ ಮತ್ತು ಜೀವಶಕ್ತಿಗಳೇ ಸಾಕಾಗಿದ್ದುವು. ದೊಡ್ಡ ದೊಡ್ಡ ರಾಜ್ಯ ಸಾಮ್ರಾಜ್ಯಗಳು ತಲೆಯೆತ್ತಿಕೊಂಡಾಗಲು ಕೂಡ ನೈಸರ್ಗಿಕ ಲಕ್ಷಣ ಗಳನ್ನು ತಳೆದು ಬೆಳೆದಿದ್ದ ಚಿಕ್ಕ ರಾಜ್ಯ, ಗಣರಾಜ್ಯ ಜನತೆಗಳನ್ನು ಹೊಸ ಸಾಮಾಜಿಕ–ರಾಜಕೀಯ ರಚನೆಯಲ್ಲಿ ಸೇರಿಸಿಕೊಳ್ಳಲಾಯಿತಲ್ಲದೆ ಅವನ್ನು ನಷ್ಟಗೊಳಿಸಲೂ ಇಲ್ಲ ದೂರೀಕರಿಸಲೂ ಇಲ್ಲ. ಜನದ ಸಹಜ ವಿಕಾಸದಲ್ಲಿ ಯಾವುದು ಉಳಿಯಲು ಅಸಮರ್ಥವಾಯಿತೋ ಅಥವಾ ಯಾವುದು ಅನ ವಶ್ಯಕವೆನಿಸಿತೋ ಅದು ತನ್ನಿಂದ ತಾನೇ ಅಡಿ ಬಿದ್ದು ನಿರುಪಯೋಗಿಯಾಗಿ ಲೋಪ ಹೊಂದಿತು. ಹೊಸ ಪರಿಸ್ಥಿತಿ ಹಾಗೂ ಆವರಣಗಳಿಗೆ ತಕ್ಕಂತೆ ಯಾವುದು ತನ್ನನ್ನು ಬದಲಾಯಿಸಿಕೊಂಡು ಬದುಕಿ ಉಳಿಯಲು ಶಕ್ತ ವಾಯಿತೋ ಅದನ್ನು ಉಳಿಸಿಕೊಳ್ಳಲಾಯಿತು: ಯಾವು ಯಾವುದು ಭಾರ ತೀಯ ಜನತೆಯ ಬಾಳಿನ ಮನಸ್ಸಿಗೆ ಹಾಗೂ ಜೀವಕ್ಕೆ ಹಾಗೂ ಮನೋ ಧರ್ಮಕ್ಕೆ ನಿಕಟವಾಗಿ ಹೊಂದಿಕೊಂಡಿತೋ ಅದು ಸರ್ವಸಾಧಾರಣವೆನಿಸಿ ಸಮಾಜ ಮತ್ತು ರಾಜ್ಯ ಧರ್ಮಗಳ ಸ್ಥಾಯಿಸ್ವರೂಪದಲ್ಲಿ ಸ್ಥಾನ ಪಡೆದು ಕೊಂಡಿತು. ಪ್ರವರ್ಧಮಾನ ಸಂಸ್ಕೃತಿಯ ಯುಗವು ಬಾಳಿನ ಈ ಸ್ವಯಂ ಭೂತಿತತ್ವವನ್ನು ಮನ್ನಿಸಿತು.

ಸಮಾಜನೀತಿ, ಅರ್ಥನೀತಿ ಮತ್ತು ರಾಜನೀತಿಗಳ–ಅಂದರೆ

ಧರ್ಮದ ಮತ್ತು ಅರ್ಥಶಾಸ್ತ್ರಗಳ ವಿವೇಚಕರು ಕೇವಲ ಶುಷ್ಕ ಬೌದ್ಧಿಕ ಪ್ರಜ್ಞೆಯಲ್ಲಿ ಸಮಾಜ ಮತ್ತು ಸರಕಾರದ ಧ್ಯೇಯಗಳನ್ನೂ ಪದ್ಧತಿಗಳನ್ನೂ ರಚಿಸಹೊರಡಲಿಲ್ಲ. ಹಾಗಲ್ಲದೆ ಅವರು ಸಮಾಜಪುರುಷನು ಆಗಲೇ ಬೆಳೆಸಿದ ಸಂಸ್ಥೆಗಳನ್ನೂ ಸಾಮುದಾಯಿಕ ಜೀವನದ ಬಗೆಗಳನ್ನೂ ವ್ಯಾವಹಾರಿಕ ವಿವೇಕದಿಂದ ಅರಿತುಕೊಂಡು, ಮೂಲ ಅಂಗಗಳನ್ನು ನಾಶಗೊಳಿಸದೆ ಬೆಳೆಸಿ, ನೆಲೆನಿಲ್ಲಿಸಿ ಸಮರಸಗೊಳಿಸಿದರು. ಅಲ್ಲದೆ ಹಾಗೆ ಮಾಡುವಾಗ ಅವರು ಅಗತ್ಯವೆನಿಸಿದ ಒಂದು ಹೊಸ ಅಂಗ ಅಥವಾ ಕಲ್ಪನೆಯನ್ನು ಅದರ ತಲೆಕಟ್ಟಾಗಿ ಸಮಾವೇಶ ಗೊಳಿಸಿದರು. ಆದರೆ ಅಂತಹ ಸಮಾವೇಶತತ್ವವು ಸುಧಾರಿಸುವ ಮಟ್ಟಿನದಾಗಿತ್ತಲ್ಲದೆ ಕ್ರಾಂತಿಕಾರಕವೂ ಮೂಲೋಚ್ಛೇದಕವೂ ಆಗಿರಲಿಲ್ಲ. ಪ್ರಾಥಮಿಕ ಅವಸ್ಥೆಗಳಿಂದ ಪ್ರಬುದ್ಧ ದಶೆಯನ್ನು ರಾಜ್ಯಪ್ರಭುತ್ವದ ರಾಜ್ಯಧರ್ಮವು ಮುಟ್ಟಿದ್ದು ಹೀಗೆ; ರಾಜ ಅಥವಾ ಸಮ್ರಾಜನ ಉಚ್ಚಾಧಿಕಾರದ ಅಡಿಯಲ್ಲಿ ವರ್ತಮಾನ ಸಂಸ್ಥೆಗಳು ಕೂಡಿಕೊಳ್ಳುವ ಮಾರ್ಗದಲ್ಲಿ ಅದು ಹೊರಟಿತು. ರಾಜಪ್ರಭುತ್ವ ಅಥವಾ ಸಾಮ್ರಾಜ್ಯ ಪದ್ಧತಿಯನ್ನು ಹೇರಿದ್ದರಿಂದ ಅನೇಕ ಹಳೆಯ ಸಂಸ್ಥೆಗಳ ಲಕ್ಷಣ ಹಾಗೂ ಸ್ಥಾನಗಳು ಸುಧಾರಣೆ ಹೊಂದಿದವಲ್ಲದೆ ಶಕ್ಯವಿದ್ದಷ್ಟು ಮಟ್ಟಿಗೆ ಅವು ಅಳಿಯದೆ ಉಳಿದುಕೊಂಡವು. ಅದರ ಫಲವಾಗಿ ಭಾರತದಲ್ಲಿ ನಮಗೆ ಬೌದ್ಧಿಕ ಆದರ್ಶದ ಬೆನ್ನು ಹತ್ತಿದ ರಾಜಕೀಯ ಪ್ರಗತಿಯು ಅಂಶವಾಗಲಿ ಪ್ರಾಚೀನ ಮತ್ತು ಅರ್ವಾಚೀನ ಯುರೋಪಿನಲ್ಲಿ ಗಣ್ಯವಾಗಿ ಕಂಡುಬರುವ ಕ್ರಾಂತಿಕಾರಕ ಲಕ್ಷಣಗಳಾಗಲಿ ಕಂಡುಬರದಾಗಿವೆ. ಪ್ರಾಚೀನ ರಚನೆಗಳನ್ನು ಭಾರತೀಯ ಬಾಳು ಬಗೆಗಳ ಸಹಜಾಭಿವ್ಯಕ್ತಿ ಹಾಗೂ ಅದರ ಧರ್ಮದ ಸಮಂಜಸವಾದ ಬಾಹ್ಯ ಪ್ರಕಾಶ ಎಂದು ಹೆಚ್ಚು ಗೌರವವನ್ನು ತೋರುವುದು ಭಾರತೀಯ ಮನೋವೃತ್ತಿಯ ಬಲಿಷ್ಠಾಂಶವಾಗಿತ್ತು; ಉನ್ನತ ಬೌದ್ಧಿಕ ಸಂಸ್ಕೃತಿಯ ಸುವರ್ಣ ಯುಗವು ಈ ಸಂಗೋಪನ ಪ್ರವೃತ್ತಿಯನ್ನು ಇನ್ನೂ ಹೆಚ್ಚಾಗಿ ಸ್ಥಿರಪಡಿಸಿತಲ್ಲದೆ ಅದನ್ನು ಕಲಕಲು ಹೋಗಲಿಲ್ಲ. ಸ್ಥಿರ ವ್ಯವಸ್ಥಾಪನದ ತತ್ವವನ್ನೂ ಸಾಮಾಜಿಕ-ರಾಜಕೀಯ ಪೂರ್ವ ಸಂಪ್ರದಾಯವನ್ನೂ ಸುಪ್ರತಿಷ್ಠಿತ ಚೌಕಟ್ಟು ಮತ್ತು ರಚನೆಗಳನ್ನೂ ಸಂಗೋಪನ ಮಾಡುವ ಮಂದವಿಕಾಸದ ಜಗದ್ಯೋಂದೇ ರೂಢಿ ಹಾಗೂ ಸಂಸ್ಥೆಗಳಿಗೆ

ಸಾಧ್ಯವೂ ಗ್ರಾಹ್ಯವೂ ಆದ ಪ್ರಗತಿಕ್ರಮವೆನಿಸಿತು; ಹಾಗೂ ರಚನಾಬಂಧಗಳಲ್ಲಿಯ ತತ್ವಗಳನ್ನು ಹಿಡಿದೇ ಪ್ರಗತಿ ಮುನ್ನಡೆಯುವಂತಾಯಿತು. ಇದಕ್ಕೆ ಬದಲಾಗಿ ಯುರೋಪಿನ ಸುಪ್ರಸಿದ್ಧ ಅಧಿಕಾರಿಸತ್ತೆಯ ಮತ್ತು ಉದ್ಯಮಪ್ರಧಾನ ರಾಜ್ಯದ ದೈತ್ಯಸಂಘ ಕೃತಕ ಸಂಘಟನೆಯಲ್ಲಿ ಕೊನೆಗೊಂಡ ನಾಗರಿಕತೆಯ ರೋಗವೆನಿಸಿದ ಜನತೆಯ ಸಹಜ ಜೀವನಕ್ಕೆ ಬದಲಾಗಿ ಯಾಂತ್ರಿಕ ಪದ್ಧತಿಯನ್ನು ಹೇರುವ ಅಹಿತಕರ ಆವೇಶವನ್ನು ಭಾರತೀಯ ರಾಜ್ಯಧರ್ಮವು ಸಿಗಮನಿಸಲಿಲ್ಲ. ಅದರಿಂದ ಆದರ್ಶ ಚಿತ್ರಣದ ಬುದ್ಧಿಮತ್ತೆಯಿಂದಾಗುವ ಲಾಭವೂ ಇಲ್ಲದಾಯಿತು ಅದೇ ಮೇರೆಗೆ ಯಾಂತ್ರಿಸುವ ವಿವೇಚಕ ಬುದ್ಧಿಯ ನಷ್ಟವೂ ಇಲ್ಲದಾಯಿತು.

ಸಮಷ್ಟಿ, ವ್ಯಷ್ಟಿ ಮತ್ತು ಪ್ರಕೃತಿಗಳು:

ತಾನು ಪ್ರೌಢ ತರ್ಕಬುದ್ಧಿಯನ್ನು ಬೆಳೆಸಿಕೊಂಡಾಗಲು ಕೂಡ ಭಾರತವು ಯಾವಾಗಲೂ ತನ್ನ ಪ್ರತಿಭೆಯ ಗಂಭೀರತಮ ದೃಷ್ಟಿಯನ್ನು ಕಳೆದು ಕೊಂಡಿರಲಿಲ್ಲ; ಮತ್ತು ಅದರ ರಾಜಕೀಯ-ಸಾಮಾಜಿಕ ಆಲೋಚನೆಯು ಆ ಕಾರಣದಿಂದಲೇ ಯಾವಾಗಲೂ ಮಧ್ಯಸ್ಥವಾಗಿ ಕ್ರಮಪಡಿಸಿ ನಿಯಂತ್ರಿಸುವ ವಿಚಾರಶಕ್ತಿಯ ಬೆಳಕನ್ನು, ಜೀವ-ಆತ್ಮಗಳ ಪ್ರತಿಭೆಗಳನ್ನು ಸಮರಸಗೊಳಿಸುವ ಪ್ರಯತ್ನವೇ ಆಗಿತ್ತು. ಅದು ಜೀವನದ ಸುಪ್ರತಿಷ್ಠಿತ ಹಾಗೂ ಪದೇ ಪದೇ ಸಂಭವಿಸುವ ವಾಸ್ತವಿಕ ಸಂಗತಿಗಳನ್ನೇ ಆಧರಿಸಿತ್ತು; ತನ್ನ ಧ್ಯೇಯವಾದಕ್ಕೆ ಬುದ್ಧಿಯನ್ನವಲಂಬಿಸದೆ ಆಧ್ಯಾತ್ಮಿಕವಾದ ಪ್ರಕಾಶ, ಸ್ಫೂರ್ತಿ ಮತ್ತು ಉನ್ನತ ಅನುಭೂತಿಗಳನ್ನೇ ಆಧರಿಸಿತು. ಅದು ವಿಚಾರಶಕ್ತಿಯನ್ನು ಯಾವಾಗಲೂ ನಿಜವೂ ಸಮಂಜಸವೂ ಆದ ರಚನಾಶಕ್ತಿಯುಳ್ಳ ಆತ್ಮ ಮತ್ತು ಪ್ರಾಣಗಳ ಪ್ರೇರಣೆಯನ್ನು ಬದಿಗಿರಿಸದೆ ಅವಕ್ಕೆ ಸಹಾಯಕವಾಗಿಯೂ ಅವುಗಳ ಗತಿಗೆ ಪೋಷಕವಾಗಿಯೂ, ಪರೀಕ್ಷಿಸಿ ದೃಢೀಕರಿಸುವ ವಿಮರ್ಶಾತ್ಮಕ ಶಕ್ತಿಯನ್ನಾಗಿಯೂ ಬಳಸಿಕೊಂಡಿದೆ. ಭಾರತದ ಆಧ್ಯಾತ್ಮಿಕ ಮನಸ್ಸು ಜೀವನವನ್ನು ಆತ್ಮದ ಅಭಿವ್ಯಕ್ತಿ ಎಂದು ಭಾವಿಸಿತ್ತು: ಸಮಷ್ಟಿಯು ಹಿರಣ್ಯಗರ್ಭನ ಶರೀರ; ಜನತೆಯು ಅವನ ಸಮಷ್ಟಿಗತವಾದ ಪ್ರಾಣಮಯ ಶರೀರ – ಸಾಮೂಹಿಕ ನಾರಾಯಣ; ಪ್ರತ್ಯೇಕವಾಗಿರುವ ಮತ್ತು ವ್ಯಕ್ತಿ

ರೂಪದ ನಾರಾಯಣನೆಂದರೆ ವ್ಯಷ್ಟಿಗತ ಬ್ರಹ್ಮಶಕ್ತಿ. ಪ್ರಕೃತಿಗಳೆಂದರೆ ಸಾಮೂಹಿಕ ಆತ್ಮದ ಸಮುದಾಯ ರೂಪದ ನೈಸರ್ಗಿಕ ಶಕ್ತಿಗಳು. ರಾಜನು ದಿವ್ಯದ ಹಾಗೂ ಸಮಷ್ಟಿಯ ಇನ್ನಿತರ ವರ್ಗಗಳ ಪ್ರತಿನಿಧಿಯಾಗಿದ್ದನು. ಸರ್ವಸಮ್ಮತವಾದ ಸಮಯ, ಸಂಸ್ಥೆ, ಆಚಾರ, ಸಾಮಾಜಿಕ–ರಾಜಕೀಯ ನಿಕಾಯ, ಸಂವಿಧಾನ–ಇವು ಆದ್ದರಿಂದಲೇ ಸರ್ವಾಂಗತಃ ಪರಿಬಂಧಕ ಆಧಾರಗಳಾಗಿದ್ದವಷ್ಟೇ ಅಲ್ಲದೆ ಅವಕ್ಕೆ ಒಂದು ವಿಧದ ಪಾವಿತ್ರ್ಯವೂ ಇತ್ತು.

ಸ್ವಧರ್ಮ ಸಿದ್ಧಾಂತ:–

ಪ್ರಾಚೀನ ಭಾರತೀಯ ಕಲ್ಪನೆಯಂತೆ ವಿಶ್ವದ ಹೇಗೋ ಹಾಗೇ ಮಾನವ್ಯ ಜೀವನದ ಸುವ್ಯವಸ್ಥೆ ಕೂಡ ಸ್ವಧರ್ಮದಂತೆ ಪ್ರವರ್ತಿಯಿಂದ ನಡೆಮುಕೊಳ್ಳುವ ವ್ಯಕ್ತಿಯಲ್ಲಿ ರಕ್ಷಿಸಲ್ಪಡುವುದಾಗಿತ್ತು. ಸ್ವಧರ್ಮವೆಂಬುದು ಅವನ ಮತ್ತು ಅವನ ಜಾತಿಯ ನಿಜವಾದ ನೀತಿಮಾನವಾಗಿತ್ತು. ಅದೇ ಮೇರೆಗೆ ಸ್ವಧರ್ಮ ಪಾಲಿಸುವ ಸಂಘಟಿತ ಸಾಮೂಹಿಕ ಜೀವನಸ್ವರೂಪದ ಸಮಾಜಪುರುಷನಲ್ಲಿ ಹಾಗೆ ಪೂರ್ವೋಕ್ತ ಸುವ್ಯವಸ್ಥೆ ಸುರಕ್ಷಿತವಾಗಿತ್ತು. ಕುಟುಂಬ, ಕುಲ, ಜಾತಿ, ವರ್ಗ ಅಥವಾ ವರ್ಣ ಹಾಗೂ ಸಾಮಾಜಿಕ, ಧಾರ್ಮಿಕ, ಔದ್ಯಮಿಕ ಅಥವಾ ಇತರ ಸಮಷ್ಟಿ, ರಾಷ್ಟ್ರ, ಜನತೆ ಇವೆಲ್ಲವೂ ತಮ್ಮವೇ ಆದ ಧರ್ಮವನ್ನು ವಿಕಾಸಗೊಳಿಸಿಕೊಂಬ ಸಂಘಟಿತ ಸಾಮೂಹಿಕ ಅಸ್ತಿತ್ವಗಳು. ಆ ಸ್ವಧರ್ಮವನ್ನು ಅನುಸರಿಸುವುದು ಅವುಗಳ ರಕ್ಷಣೆ, ಪಾಲನೆ ಮತ್ತು ಸಮರ್ಪಕ ನಿರ್ವಹಣೆಗಳಿಗೆ ಶರ್ತವಾಗಿತ್ತು. ಇದಲ್ಲದೆ ಸ್ಥಾನ, ಕರ್ತವ್ಯ, ಪರರೊಡನಿರುವ ವಿಶಿಷ್ಟ ಸಂಬಂಧ–ಇವುಗಳದೊಂದು ಧರ್ಮ, ಪರಿಸ್ಥಿತಿಧರ್ಮ, ಯುಗಧರ್ಮ, ಸಾರ್ವತ್ರಿಕವಾದ ಧಾರ್ಮಿಕ ಹಾಗೂ ನೈತಿಕಧರ್ಮ ಮತ್ತು ಇವೆಲ್ಲವೂ ಸ್ವಭಾವಕ್ಕನುಗುಣವಾಗಿರುವ ಸ್ವಧರ್ಮವನ್ನು ರೂಪಿಸುವುದು–ಕಾನೂನಿನ ಶರೀರವನ್ನು ನಿರ್ಮಿಸುತ್ತವೆ. ಪ್ರಾಚೀನ ಸಿದ್ಧಾಂತದ ಪ್ರಕಾರ ಸತ್ಯಯುಗವೆಂಬ ಪೌರಾಣಿಕ ಸುವರ್ಣಯುಗದಲ್ಲಿ ವ್ಯಷ್ಟಿ-ಸಮಷ್ಟಿ ಮಾನವನ ಸಂಪೂರ್ಣ ಸಮಂಜಸವೂ ಸಮರ್ಪಕವೂ ಆದ ಬಾಳುವೆ ಇದ್ದಿತ್ತು. ಆಗ ಯಾವ ರಾಜಕೀಯ ಸರಕಾರ ಅಥವಾ ರಾಜ್ಯಕೀಯ ಇಲ್ಲವೇ ಕೃತಕ ಸಾಮಾಜಿಕ ಅವಶ್ಯಕತೆ ಇದ್ದಿಲ್ಲ. ಏಕೆಂದರೆ

ಎಲ್ಲರೂ ಆಗ ತಮ್ಮ ತಮ್ಮ ಪ್ರಬುದ್ಧಾತ್ಮದ ಮತ್ತು ದಿವ್ಯ ಜೀವನದ ಸತ್ಯಕ್ಕೆ ಅನುಗುಣವಾಗಿ ಮತ್ತು ಆ ಕಾರಣದಿಂದಲೇ ತಮ್ಮ ಆಂತರಿಕ ದಿವ್ಯಧರ್ಮಕ್ಕೆ ಅನುಗುಣವಾಗಿ ಸ್ವಯಂಸ್ಫೂರ್ತಿಯಿಂದ ಸ್ವತಂತ್ರವಾಗಿ ಬಾಳುತ್ತಿದ್ದರು.

ಸ್ವಯಂನಿರ್ಣಯಾಧಿಕಾರವುಳ್ಳ ಸಮುದಾಯಗಳು ತಮ್ಮ ತಮ್ಮ ಅಸ್ತಿತ್ವಕ್ಕೆ ಸ್ವತಂತ್ರವೂ ಸಹಜವೂ ಆದ ನೀತಿಯಂತೆ ಬಾಳುವುದೇ ಆದರ್ಶವೆನಿಸಿತು. ಮಾನವ ಕುಲದ ವಾಸ್ತವಿಕ ಪರಿಸ್ಥಿಯಲ್ಲಿ ವ್ಯಕ್ತಿ ಮತ್ತು ಸಮಾಜ ಧರ್ಮಗಳ ಭಂಗ ಹಾಗೂ ಮೂರ್ಖತೆಗಳಿಗೆ ಒಳಪಟ್ಟ ವಿಕೃತ ಸ್ವಭಾವ-ಅಜ್ಞಾನಗಳು ತುಂಬಿದ್ದು ಕಂಡುಬರುತ್ತದೆ. ಆದುದರಿಂದ ಸಮಾಜದ ನೈಸರ್ಗಿಕ ಜೀವನದ ಮೇಲೆ ಒಂದು ರಾಜ್ಯ, ಪ್ರಭುಶಕ್ತಿ, ರಾಜ ಅಥವಾ ಸುಭದ್ರ ಶಾಸಕನಿಕಾಯವನ್ನು ಹೇರಬೇಕಾಗುತ್ತದೆ. ಅಂಥ ರಾಜ್ಯಶಕ್ತಿಯು ಸಮಾಜಜೀವನದಲ್ಲಿ ಅನವಶ್ಯಕವಾಗಿ ಕೈಹಾಕಬಾರದು. ಬಹಳಮಟ್ಟಿಗೆ ತನ್ನ ನೈಸರ್ಗಿಕ ನೀತಿ, ರೂಢಿ ಮತ್ತು ಸ್ವತಃ ಸಿದ್ಧ ಬೆಳವಣಿಗೆಯಂತೆಯೇ ಕರ್ತವ್ಯ ಮಾಡಲು ಸಮಾಜವನ್ನು ಬಿಡಬೇಕು. ಆದರೆ ರಾಜಶಕ್ತಿಯು ಅದರ ಸರಿಯಾದ ನಡೆವಳಿಕೆಗೆ ನೆರವೀಯಬೇಕು, ಪ್ರಭಾವಿಯಾಗಿ ಧರ್ಮವು ಆಚರಣೆಯಲ್ಲಿರುವಂತೆ ನೋಡಿಕೊಳ್ಳಬೇಕು, ಧರ್ಮದ್ರೋಹಿಗಳ ಹುಟ್ಟಡಗಿಸಬೇಕು ಮತ್ತು ಸಾಧ್ಯವಿದ್ದಷ್ಟು ಮಟ್ಟಿಗೆ ಧರ್ಮವಿರುದ್ಧ ನಡೆವಳಿಕೆಗಳು ಆಗದಂತೆ ಮುಂಜಾಗ್ರತೆ ವಹಿಸಬೇಕು. ಅಧರ್ಮದ ಉತ್ಥಾನದ ಉನ್ನವಶೆಯಲ್ಲಿ ವಿಧಾಯಕರ ಸಮಗ್ರ ಜೀವನವನ್ನು ಪ್ರಕಟವಾಗಿ ಪ್ರಕಾಶಿಸುವ ಬಾಹ್ಯ ಅಥವಾ ಲಿಖಿತ ವಿಧಿ, ನೀತಿ, ಶಾಸನಗಳ ಅವಶ್ಯಕತೆಯುಂಟಾಗುತ್ತದೆ; ಇದನ್ನು ನಿರ್ಣಯಿಸುವ ಕೆಲಸ (ಹೊರಗಿನ ಆಡಳಿತದ ವಿವರಗಳನ್ನು ಬಿಟ್ಟು) ರಾಜಕೀಯ ಪ್ರಭುವಿನದಾಗಿರಲಿಲ್ಲ, ಅವನು ಅದರ ಪ್ರಶಾಸಕನು ಮಾತ್ರ; ಆದರೆ ಆ ಕೆಲಸ ಸಾಮಾಜಿಕ-ನೈತಿಕ ನವನಿರ್ಮಿತಿಕಾರನಾದ ಋಷಿಯದು ಅಥವಾ ಬ್ರಾಹ್ಮಣ ಅಭಿಲೇಖಕ ಮತ್ತು ವ್ಯಾಖ್ಯಾತನದು. ಲಿಖಿತ ಅಥವಾ ಅಲಿಖಿತ ವಿಧಿ ಅಥವಾ ಧರ್ಮವೆಂಬುದು ಒಂದು ರಾಜಕೀಯ ಮತ್ತು ವೈಧಾನಿಕ ಅಧಿಕಾರಸಮಿತಿಯಿಂದ ಹೊಸದಾಗಿ ನಿರ್ಮಿಸಲ್ಪಡುವ ಅಥವಾ ಕೃತಕವಾಗಿ ರಚಿಸಲ್ಪಡುವ ವಸ್ತುವಾಗಿರಲಿಲ್ಲ; ಧರ್ಮವು ಭೂತವಸ್ತು ಮತ್ತು ಅದನ್ನು ಇದ್ದಂತೆಯೇ ಅಥವಾ ಸಾಮುದಾಯಿಕ ಜೀವನ ಮತ್ತು ಚೈತನ್ಯಗಳ

ಪೂರ್ವಸ್ಥ ವಿಧಿ ಮತ್ತು ತತ್ವಗಳಿಂದ ಸ್ವಾಭಾವಿಕವಾಗಿ ಬೆಳೆದು ಬಂದಂತೆಯೇ ಅರ್ಥಯಿಸಿ ಹೇಳಬೇಕಾಗಿತ್ತು. ಈ ಪ್ರವರ್ಧಮಾನ ಕೃತಕತೆ ಮತ್ತು ಸಮಯಗಳಿಂದ ಬೆಳೆದು ನಿಲ್ಲುವ ಅತಿ ಕನಿಷ್ಠ ಸಾಮಾಜಿಕ ವ್ಯವಸ್ಥೆಯೆಂದರೆ ಅರಾಜಕತೆಯ, ಘರ್ಷಣದ, ಧರ್ಮಲೋಪದ ಕಾಲಾವಧಿ. ಇದೇ ಕಲಿಯುಗ. ಇದು ಉದ್ವರ್ತನ, ಹೋರಾಟ, ಪುನಃಸ್ವಾಸ್ಥ್ಯಲಾಭ ಮತ್ತು ಮಾನವ್ಯಾತ್ಮೀಪ್ಸದಲ್ಲಿಯ ಹೊಸ ಆತ್ಮಾಭಿವ್ಯಕ್ತಿಗಳ ಹಿಂದಿನ ಪಾಟಲ-ಕಪಿಲ ಸಂಧ್ಯೆ.

ರಾಜನ ಮುಖ್ಯ ಕರ್ತವ್ಯ ಮತ್ತು ಸಮಷ್ಟಿಯ ಸ್ವಾತಂತ್ರ್ಯ:

ರಾಜಕೀಯ ಪ್ರಭುವೆನಿಪ ರಾಜ, ಅವನ ಮಂತ್ರಿಮಂಡಲ ಮತ್ತು ಇತರ ಶಾಸನನಿಕಾಯಗಳ ಸದಸ್ಯರ ಮುಖ್ಯ ಕರ್ತವ್ಯವೆಂದರೆ ಸಮಾಜ ಜೀವನದ ಸಮಂಜಸ ವಿಧಿಯ ಸಂರಕ್ಷಣೆ ಮತ್ತು ಸೇವೆಯೇ ಆಗಿತ್ತು: ಪ್ರಭುವು ಧರ್ಮಪ್ರಶಾಸಕನೂ ಧರ್ಮರಕ್ಷಕನೂ ಆಗಿದ್ದನು. ಮಾನವ ಜೀವಿಯ ಜೈವಿಕ, ಆರ್ಥಿಕ ಮತ್ತು ಇತರ ಅವಶ್ಯಕತೆಗಳನ್ನು ಮತ್ತು ಸುಖ ಸಂತೋಷಗಳಲ್ಲಿ ಅವನಿಗಿರುವ ಭೋಗಾಧಿಕಾರವನ್ನು ನ್ಯಾಯದಿಂದ ತೃಪ್ತಿ ಪಡಿಸುವದು ಸಮಾಜದ ಕರ್ತವ್ಯಕ್ಕೆ ಸೇರಿದ್ದಾಗಿತ್ತು. ಆದರೆ ಹಾಗೆ ತೃಪ್ತಿ ಪಡೆಯುವದು ನೈತಿಕ, ಸಾಮಾಜಿಕ, ಧಾರ್ಮಿಕ ತತ್ವಗಳಿಗೊಳಪಟ್ಟು ವಿಧ್ಯುಕ್ತವಾಗಿ ತಕ್ಕ ಪ್ರಮಾಣದಲ್ಲಿ ನಡೆಯಬೇಕು. ಸಾಮಾಜಿಕ ರಾಜಕೀಯ ನಿಕಾಯದ ಗುಂಪುಗಳ ಸದಸ್ಯರ ಧರ್ಮವು ಅವರವರ ಸ್ವಭಾವ, ಸ್ಥಾನ, ಇಡಿ ನಿಕಾಯದೊಡನೆ ಅವರಿಗಿರುವ ಸಂಬಂಧ ಇವುಗಳಿಂದ ನಿರ್ದಿಷ್ಟವಾಗಿತ್ತು. ಆ ಧರ್ಮವು ಸ್ವತಂತ್ರವಾಗಿಯೂ ನ್ಯಾಯವಾಗಿಯೂ ಆಚರಣೆಯಲ್ಲಿ ಉಳಿಯುವುದಕ್ಕೆ ಪ್ರತ್ಯಾಭೂತಿ ಇರಬೇಕು; ಅವರವರ ಅಧಿಕಾರಪರಿಮಿತಿಯೊಳಗೆ ಅವರವರ ಸ್ವಾಭಾವಿಕ ಸ್ವನಿಶ್ಚಿತ ಕರ್ತವ್ಯನಿರ್ವಹಣೆಗೆ ಅವನ್ನು ಬಿಟ್ಟು ಬಿಡಬೇಕು. ಆದರೆ ಅದೇ ಕಾಲದಲ್ಲಿ ಅವರವರ ಧರ್ಮವು ಅತಿಕ್ರಾಂತವಾಗದಂತೆ ಅಥವಾ ಅದರ ನಿಜವಾದ ಪರಿಮಿತಿ ಮತ್ತು ನ್ಯಾಯವಾದ ಆಚರಣೆ ವಿಪರ್ಯಸ್ತವಾಗದಂತೆ ನಿಯಂತ್ರಣವಿಡಬೇಕಾಗುತ್ತದೆ. ದೇಶದ ಸರ್ವೋಚ್ಚ ಪ್ರಾಧಿಕಾರಿಯೂ ಮಂತ್ರಿಮಂಡಲಸ್ಥನೂ ಜನಸಭೆಯ ಬೆಂಬಲ ಪಡೆದವನೂ ಆದ ಪ್ರಭುವಿನ ಕರ್ತವ್ಯ ಅದೇ ಆಗಿತ್ತು. ಜಾತಿಯ, ಧಾರ್ಮಿಕ

ಸಮುದಾಯದ, ಸಂಘದ, ಗ್ರಾಮದ, ಪಟ್ಟಣದ ಇಲ್ಲವೆ ಒಂದು ಪ್ರದೇಶ ಅಥವಾ ಪ್ರಾಂತದ ಸಂಘಟನೆಯ ಅನಿರ್ಬದ್ಧ ನಿಯಂತ್ರಣವನ್ನು ಆಕ್ರಮಿಸುವುದಾಗಲಿ, ಅದರಲ್ಲಿ ಕೈಹಾಕುವುದಾಗಲಿ, ಅವುಗಳ ಹಕ್ಕುಗಳನ್ನು ಕಿತ್ತುಹಾಕುವುದಾಗಲಿ ರಾಜ್ಯಶಕ್ತಿಯ ಕೆಲಸವಾಗಿರಲಿಲ್ಲ; ಏಕೆಂದರೆ ಸಾಮಾಜಿಕ ಧರ್ಮದ ಸಮಂಜಸ ಆಚರಣೆಗೆ ಅಗತ್ಯವಿದ್ದುದರಿಂದ ಆ ಹಕ್ಕುಗಳು ನೈಸರ್ಗಿಕವೆನಿಸಿದ್ದವು. ಸುವ್ಯವಸ್ಥೆಗೊಳಿಸುವುದು, ಅತ್ಯುಚ್ಚ ಮಟ್ಟದಿಂದ ಎಲ್ಲವುಗಳ ಮೇಲೂ ಸರ್ವಸಾಧಾರಣ ನಿಯಂತ್ರಣವನ್ನಿಡುವುದು, ಹೊರಗಿನ ದಾಳಿಯಿಂದ ಅಥವಾ ಒಳಗಿನ ಒಡಕಿನಿಂದ ಸಮಷ್ಟಿಯ ಜೀವನವನ್ನು ಸಂರಕ್ಷಿಸುವುದು, ಅಪರಾಧ ಅವ್ಯವಸ್ಥೆಗಳನ್ನು ದಮನ ಮಾಡುವುದು, ವಿಶಾಲ ಕ್ಷೇತ್ರದಲ್ಲಿ ಆರ್ಥಿಕ ಮತ್ತು ಔದ್ಯಮಿಕ ಕ್ಷೇಮಕ್ಕೆ ನೆರವಿತ್ತು ಅದನ್ನು ಅಭಿವೃದ್ಧಿಗೊಳಿಸುವುದಲ್ಲದೆ ಹಿಡಿತದಲ್ಲಿಟ್ಟುಕೊಳ್ಳುವುದು—ಈ ಉದ್ದೇಶಗಳಿಗಾಗಿ ಮಿಕ್ಕವರ ಕೈಗೆ ಸಿಲುಕದ ಅಧಿಕಾರಗಳನ್ನು ಬಳಸುವುದು ರಾಜಶಕ್ತಿಯ ಕರ್ತವ್ಯವಾಗಿತ್ತು. ಈ ರೀತಿಯಿಂದ ಪರಿಣಾಮತಃ ಭಾರತೀಯ ರಾಜಧರ್ಮವೆಂಬುದು ಒಂದು ಬಹು ಜಟಿಲ ಸ್ವರೂಪದ ಸಾಮುದಾಯಿಕ ಸ್ವಾತಂತ್ರ್ಯ ಮತ್ತು ಸ್ವಯಂ ನಿರ್ಣಯಗಳುಳ್ಳ ವ್ಯವಸ್ಥೆ ಎನಿಸಿದೆ. ಸಮುದಾಯದ ಪ್ರತಿಯೊಂದು ಘಟಕಕ್ಕೂ ಅದರದೇ ಆದ ಅಥವಾ ತನತನಗೆ ಸಹಜವಾದ ಬಾಳು ಇತ್ತು; ಆ ಪ್ರತಿಯೊಂದೂ ತನತನಗೆ ಕ್ಲಪ್ತವಾದ ಆಚಾರ ವ್ಯವಹಾರವನ್ನು ನಡೆಸಿಕೊಂಡಿತ್ತು; ಆ ಒಂದೊಂದೂ ತನ್ನ ತನ್ನ ಕ್ಷೇತ್ರ ಮತ್ತು ಮರ್ಯಾದೆಗಳ ಸ್ವಾಭಾವಿಕ ರೇಷೆಯಿಂದ ಪ್ರತ್ಯೇಕಿಸಲ್ಪಟ್ಟಿತ್ತು; ಆದರೆ ಸುಗ್ರಹೀತವಾದ ಸಂಬಂಧಗಳಿಂದ ಸಮಷ್ಟಿಯೊಡನೆ ಹೊಂದಿಕೊಂಡಿತ್ತು. ಸಮಷ್ಟಿ ಜೀವನದಲ್ಲಿ ಪ್ರತಿ ಘಟಕವೂ ಅಧಿಕಾರ-ಕರ್ತವ್ಯಗಳಲ್ಲಿ ಸಹಭಾಗಿಯಾಗಿ ಸ್ವವಿಧಿ-ನಿಯಮಗಳನ್ನು ಪಾಲಿಸುತ್ತ, ಸ್ವಮರ್ಯಾದೆಯೊಳಗೇ ಪ್ರಶಾಸನಗೈಯುತ್ತ, ಪರಸ್ಪರ ಅಥವಾ ಸಾಧಾರಣ ಹಿತಾರ್ಥಕ್ಕೆ ಸಂಬಂಧಿಸಿದ ವಿಷಯದ ಚರ್ಚೆ ಮತ್ತು ನಿಯಂತ್ರಣಗಳಲ್ಲಿ ಮಿಕ್ಕವುಗಳೊಡನೆ ಸೇರಿ ಬಾಳುತ್ತಿತ್ತು. ಅದು ತನ್ನ ಪ್ರಾಮುಖ್ಯಕ್ಕೆ ತಕ್ಕಂತೆ ರಾಜ್ಯ ಅಥವಾ ಸಾಮ್ರಾಜ್ಯದ ಸಾಧಾರಣ ಸಭೆಗಳಲ್ಲಿ ಒಂದಲ್ಲ ಒಂದು ವಿಧದಿಂದ ಪ್ರತಿನಿಧಿಸಲ್ಪಡುತ್ತಿತ್ತು. ರಾಜ್ಯ, ಸಾರ್ವಭೌಮ ಅಥವಾ ಸರ್ವೋಚ್ಚ ರಾಜಕೀಯ ಅಧಿಕಾರವು ಈ ಘಟಕಗಳನ್ನು ಹೊಂದಿಸುವ ಸಾಧನವಾಗಿ ದಕ್ಷತೆಯನ್ನು

ಕಾಯ್ದುಕೊಂಡು, ಸಾರ್ವತ್ರಿಕ ನಿಯಂತ್ರಣವನ್ನಿಟ್ಟುಕೊಂಡು, ಸರ್ವೋಚ್ಚ ವಾದರೂ ಎಂದೂ ಸರ್ವತಂತ್ರಸ್ವತಂತ್ರವಲ್ಲದ ಅಧಿಕಾರವನ್ನನುಭವಿಸುತ್ತಿತ್ತು. ಏಕೆಂದರೆ ಅದರ ಎಲ್ಲ ಹಕ್ಕು ಮತ್ತು ಶಕ್ತಿಗಳಲ್ಲೂ ಧರ್ಮ ಹಾಗೂ ಜನೇಚ್ಛೆ ಯಿಂದ ಪರಿಸೀಮಿತವಾಗಿತ್ತು. ಅದರ ಆಂತರಿಕ ಕರ್ತವ್ಯಗಳೆಲ್ಲದರಲ್ಲೂ ಅದು ಸಾಮಾಜಿಕ ರಾಜಕೀಯ–ನಿಕಾಯಗಳ ಸಾಮಾಜಿಕ ಘಟಕಗಳೊಡನೆ ಸಹ ಭಾಗಿಯಾಗಿತ್ತು. ಇದೇ ಭಾರತೀಯ ರಾಜ್ಯಧರ್ಮದ ಸಿದ್ಧಾಂತ ಮತ್ತು ವಾಸ್ತವಿಕ ಸಂವಿಧಾನ; ಇವರಲ್ಲಿ ಸಾಮುದಾಯಿಕ ಸ್ವಾತಂತ್ರ್ಯದ ಜಟಿಲ ವ್ಯವಸ್ಥೆ, ಸ್ವಯಂನಿರ್ಣಯಾಧಿಕಾರ, ಸರ್ವೋಚ್ಚ ಸಮನ್ವಯಾಧಿಕಾರ, ಸಮರ್ಥ ಬಲ–ಸ್ಥಾನ–ಮಾನ ಸಹಿತವಾದ ಒಂದು ಸಾರ್ವಭೌಮ ವ್ಯಕ್ತಿ ಮತ್ತು ನಿಕಾಯ ಇದ್ದವು. ಈ ಪ್ರಭುಶಕ್ತಿಯು ತನ್ನ ಯುಕ್ತ ಅಧಿಕಾರ ಮತ್ತು ಕರ್ತವ್ಯಗಳಿಂದ ಮರ್ಯಾದಿತವಾಗಿತ್ತು. ಅದು ಏಕಕಾಲದಲ್ಲಿ ನಿಯಂತ್ರ ಕವೂ ಆಗಿ ಮಿಕ್ಕ ನಿಯಂತ್ರಕ ನಿಕಾಯಗಳನ್ನು ಎಲ್ಲ ಶಾಖೆಗಳಲ್ಲೂ ತನ್ನ ಸಹಭಾಗಿಗಳನ್ನಾಗಿ ತೆಗೆದುಕೊಂಡು ಸಮಷ್ಟಿಯ ಜೀವನದ ನಿಯಂತ್ರಣ ಮತ್ತು ಆಡಳಿತಗಳಲ್ಲಿ ಭಾಗಿಯಾಗಿತ್ತು, ಪ್ರಭುಸಹಿತವಾದ ಜನತೆ ಹಾಗೂ ಅದರ ಎಲ್ಲ ಅಂಗಸಮುದಾಯಗಳೂ ಧರ್ಮವನ್ನು ಪಾಲಿಸಬೇಕಾಗಿತ್ತು, ಮತ್ತು ಧರ್ಮದ ಅಂಕುಶಕ್ಕೆ ಅಧೀನವಾಗಿರಬೇಕಾಗಿತ್ತು. ಇಷ್ಟೇ ಅಲ್ಲದೆ ಸಮಷ್ಟಿಜೀವನದ ಆರ್ಥಿಕ ಮತ್ತು ರಾಜಕೀಯ ಅಂಶಗಳು ಧರ್ಮದ ಭಾಗ ಮಾತ್ರ; ಹಾಗೆ ಭಾಗವಾಗಿದ್ದರೂ ಅವು ಭಿನ್ನವಾಗಿರದೆ ಮಿಕ್ಕವುಗಳಾದ ಧಾರ್ಮಿಕ, ನೈತಿಕ ಹಾಗೂ ಸಾಮಾಜಿಕ ಜೀವನದ ಉಚ್ಚ ಸಾಂಸ್ಕೃತಿಕ ಗುರಿಯೊಡನೆ ಹಾಸುಹೊಕ್ಕಾಗಿ ಐಕ್ಯಹೊಂದಿದ್ದವು. ನೀತಿಯ ನಿಯಮವು ರಾಜಕೀಯ ಮತ್ತು ಆರ್ಥಿಕ ನಿಯಮಗಳನ್ನು ವ್ಯಾಪಿಸಿತ್ತು; ಸಮಾಜದ ಘಟಕಗಳಾದ ರಾಜನ, ಅವನ ಸಚಿವರ, ಮಂತ್ರಿಮಂಡಲದ, ಸಭೆಗಳ ಮತ್ತು ವ್ಯಕ್ತಿಯ ಪ್ರತಿಯೊಂದು ಕಾರ್ಯದ ಮೇಲೂ ಅದನ್ನು ಹೇರಲಾಗುತ್ತಿತ್ತು. ಮತ ದಾನದಲ್ಲೂ, ಮಂತ್ರಿಗಳ, ಸದಸ್ಯಸಚಿವರ ಮತ್ತು ಇತರ ಅಧಿಕಾರಿಗಳ ಅರ್ಹತೆಯಲ್ಲಿ ನೈತಿಕ ಹಾಗೂ ಸಾಂಸ್ಕೃತಿಕ ಗುಣಗಳನ್ನು ಗಣ್ಯವೆಂದು ತಿಳಿಯಲಾಗುತ್ತಿತ್ತು. ಆರ್ಯರ ಎಲ್ಲ ವ್ಯವಹಾರಗಳಲ್ಲೂ ಪ್ರತಿಯೊಬ್ಬ ಅಧಿ ಕಾರಿಯೂ ಉಚ್ಚ ಚರಿತ್ರವಂತನೂ, ಅನುಭವಿಕನೂ ಆಗಿರಬೇಕೆಂಬ ನಿರೀಕ್ಷೆ

ಯಿತ್ತು. ಧಾರ್ಮಿಕ ಸತ್ವ ಮತ್ತು ಧರ್ಮಪ್ರಬೋಧಕ ಶಕ್ತಿಗಳು ರಾಜನ ಮತ್ತು ಜನದ ಇಡಿ ಬಾಳಿನ ಹಿನ್ನೆಲೆ ಮತ್ತು ನಾಯಕ ಸೂತ್ರವೆನಿಸಿದ್ದವು. ಸಮಾಜ-ಜೀವನ-ಪದ್ಧತಿಯ ವಿಭಾಗಗಳಲ್ಲಿ ವಿಶೇಷಜ್ಞತೆ ಅವಶ್ಯಕವೆನಿಸಿದರೂ ಸಮಾಜಜೀವನವೇ ಅಂತ್ಯವೆಂದು ತಿಳಿಯುತ್ತಿದ್ದಿಲ್ಲ. ಅದು ತನ್ನ ಅಂಗಾಗಿ ಭಾವಗಳೆರಡರಲ್ಲೂ ಮಾನವ ಮನ-ಆತ್ಮಗಳ ಶಿಕ್ಷಣಕ್ಕೂ ತನ್ನ ನೈಸರ್ಗಿಕಾವಸ್ಥೆಯ ಮೂಲಕ ಆಧ್ಯಾತ್ಮಿಕ ಅವಸ್ಥೆಗೆ ಬೆಳೆದು ಮುಟ್ಟುವುದಕ್ಕೂ ಬೇಕಾದ ಶಿಕ್ಷಣರಂಗ ಮತ್ತು ಹಿರಿಯ ಆಧಾರಭಿತ್ತಿಯೆನಿಸಿತ್ತು.

ಮೂರನೆಯ ಅಧ್ಯಾಯ

ಸಂಘಟಿತ ಸ್ವಯಂನಿರ್ಣಯದ ಸಮುದಾಯಜೀವನ:

ಉಪಲಬ್ಧ ಆಧಾರಗಳ ಮೇಲಿಂದ ಹೇಳುವುದಾದರೆ, ಭಾರತೀಯ ನಾಗರಿಕತೆಯ ಸಾಮಾಜಿಕ-ರಾಜಕೀಯ ವಿಕಾಸವು ನಾಲ್ಕು ಐತಿಹಾಸಿಕ ಅವಸ್ಥೆಗಳ ಮೂಲಕ ಹಾಯ್ದುಬಂದಿವೆ ಎನ್ನಬೇಕಾಗುತ್ತದೆ. ಆ ನಾಲ್ಕು ಅವಸ್ಥೆಗಳಲ್ಲಿ ಆರ್ಯರ ಸಾದಾ ಜಾತಿ ಮೊದಲನೆಯದು. ಅನಂತರ ರಾಷ್ಟ್ರ ಜೀವನವು ರಾಜಕೀಯ ರಚನೆ ಹಾಗೂ ಸಮನ್ವಯಗಳ ಪ್ರಾಯೋಗಿಕ ರೂಪಗಳ ಸಾಕಷ್ಟು ವೈವಿಧ್ಯದ ಮೂಲಕ ಸಾಗುತ್ತಿಪ್ಪ ಸುದೀರ್ಘವಾದ ಮಾರ್ಪಾಡುಗಾಲ. ಜನರ ಸಮುಷ್ಟಿಜೀವನದ ವಿಭಿನ್ನಾಂಗಗಳನ್ನು ಪ್ರದೇಶ ಮತ್ತು ಸಾಮ್ರಾಜ್ಯಗಳ ಘಟಕಗಳನ್ನಾಗಿ ಸಮಕ್ರಮಗೊಳಿಸುವ ರಾಜ ಪ್ರಭುತ್ವ ನಿಶ್ಚಿತವಾಗಿ ರೂಪಗೊಂಡದ್ದು ಮೂರನೆಯ ಅವಸ್ಥೆ. ಕೊನೆಯದಾಗಿ, ಆಂತರಿಕ ವೃದ್ಧಿವಿಘ್ನ ಮತ್ತು ಅಪ್ರಗತಿಪರ ತಾಟಸ್ಥ್ಯ ಹಾಗೂ ಪಾಶ್ಚಾತ್ಯ ಏಶಿಯ-ಯುರೋಪುಗಳ ಹೊಸ ಸಂಸ್ಕೃತಿ ಮತ್ತು ಪದ್ಧತಿಗಳ ಆರೋಪಣ ಇವುಗಳೊದಗಿದ ಅವನತಿಕಾಲ. ಮೊದಲ ಮೂರು ಕಾಲಾವಧಿಗಳ ಮುಖ್ಯ ಲಕ್ಷಣವೆಂದರೆ, ಸಾಕಷ್ಟು ಒಕ್ಕೂಟ, ಸ್ಥಿಮಿತತೆಗಳು ಎಲ್ಲ ಘಟಕಗಳಲ್ಲೂ ಕಂಡು ಬರುವುದು ಮತ್ತು ಈ ಮೂಲಭೂತ ಸ್ಥಿಮಿತತೆಯ ಇದ್ದಷ್ಟನ್ನೇ ಇಟ್ಟು ಕೊಂಡಿರುವ ಪ್ರವೃತ್ತಿಯಿಂದ ಮುಂದಗತಿಯಿಂದಾದರೂ ತನ್ನ ಭವಿಷ್ಯದ ರಚನೆಯಲ್ಲಿ, ಬಾಳಿನಲ್ಲಿ ಮತ್ತು ಅದನ್ನು ಪೂರ್ಣತೆಗೊಯ್ಯುವುದರಲ್ಲಿ ಖಾತ್ರಿಗೊಂಡು ಸರಿಯಾಗಿ, ಗಣ್ಯವಾಗಿ, ಬಲಿಷ್ಠವಾಗಿ ಜನಜೀವನ ವಿಕಾಸ ಹೊಂದುವುದೇ ಆಗಿತ್ತು; ಅವನತಿಯ ಈ ಕಾಲದಲ್ಲೂ ಆ ಒಕ್ಕೂಟದ ದೃಢಬಂಧ ಸರ್ವ ನಾಶವನ್ನು ಬಲವಾಗಿ ಎದುರಿಸುತ್ತಿದೆ. ನಾಗರಿಕತೆಯ ರಚನೆ ವಿದೇಶಿಯ ಪ್ರಭಾವದ ಒತ್ತಡದಿಂದ ತನ್ನ ಮೇಲ್ಮಟ್ಟದಲ್ಲಿ ಛಿನ್ನ ಭಿನ್ನವಾಗುತ್ತದೆ. ಆದರೆ ಅದು ಬಹುಕಾಲ ತನ್ನ ಅಡಿಗಟ್ಟನ್ನು ಉಳಿಸಿಕೊಂಡಿರುತ್ತದೆ, ಪರ ಪದ್ಧತಿಗಳ ದಾಳಿಯಿಂದ ತನಗೆ ಸಾಧ್ಯವಾದಷ್ಟನ್ನು ರಕ್ಷಿಸಿಕೊಳ್ಳುತ್ತದೆ, ತನ್ನ ವಿಶಿಷ್ಟ ಪದ್ಧತಿಯ ಬಹ್ವಂಶವನ್ನು ಕಾಯ್ದುಕೊಳ್ಳುತ್ತದೆ; ಮತ್ತು ಕೊನೆಯಲ್ಲಿ ಅದರ

ಆತ್ಮ-ಶರೀರಗಳನ್ನು ಪುನರುಜ್ಜೀವಿಸಿಕೊಂಬ ಶಕ್ತಿಯನ್ನೂ ತಳೆದಿರುತ್ತದೆ. ಇಂದಿನ ಈ ಅಪ್ರಗತಿಪರ ಸಾಮಾಜಿಕ ತಾಟಸ್ಥ್ಯದಲ್ಲೂ ದೌರ್ಬಲ್ಯದಲ್ಲೂ ವಿಪರೀತ ದೃಷ್ಟಿಯಲ್ಲೂ ವಿಘಟನೆಯಲ್ಲೂ-ಸದ್ಯದ ವಿಲಕ್ಷಣ ಪ್ರವೃತ್ತಿಗಳೂ ಆಘಾತಗಳೂ ಇರುವಾಗಲೇ-ಒಮ್ಮೆ ಈ ನಾಗರಿಕತೆ ಸ್ವವ್ಯವಹಾರವನ್ನು ಸ್ವತಂತ್ರವಾಗಿ ಸಾಗಿಸಲು ಶಕ್ತವಾಯಿತೆಂದರೆ, ಸ್ವೇಷ್ಟಾನುಸಾರವಾಗಿಯೂ ಸ್ವರೀತಿಯಂತೆಯೂ ನಡೆಸಿಕೊಂಡು ಹೋಗಲು ಸಮರ್ಥವಾಯಿತೆಂದರೆ ಅದೆಂದೂ ಪಾಶ್ಚಾತ್ಯ ವಿಕಾಸ ಮಾರ್ಗದಂತೆ ಹೋಗದು. ಅದು ತನ್ನ ಆತ್ಮ ಶಕ್ತಿಯಿಂದಲೇ ಒಂದು ಹೊಸ ಸೃಷ್ಟಿಯನ್ನು ನಿರ್ಮಿಸೀತು ಮತ್ತು ಆ ಹೊಸ ಸೃಷ್ಟಿ ಭಾರತಕುಲದ ಮುಂಬರಿದ ವಿಚಾರಧಾರೆಯಲ್ಲಿ ಆಗಲೇ ಅಸ್ಪಷ್ಟವಾಗಿ ಉದಿಸಿದ ಆವಶ್ಯಕತೆಯ ಕರೆಗನುಗುಣವಾಗಿ ಪೂರಣೆಯ ಅವಸ್ಥೆಯ ಸಮಷ್ಟಿಜೀವನದತ್ತಲೂ ಮಾನವಸಮಾಜದ ಆಧ್ಯಾತ್ಮಿಕ ತಳಹದಿಯತ್ತಲೂ ಇನ್ನೂ ಹರಿಯಬೇಕಾಗಿದೆ. ಆದರೆ ಅದರ ರಚನೆಗಳ ಸುದೀರ್ಘ ಸ್ಥಿಮಿತತೆಯೂ ಅವು ಕಾಯ್ದುಕೊಂಡ ಬಾಳ ಬಗೆಯ ಪುನರಾವೃತ್ತಿಕೆಯೂ ಎಂದಿಗೂ ಅಶಕ್ತತೆಯ ಕುರುಹೆನಿಸವು; ಅವು ಭಾರತದ ಸಾಂಸ್ಕೃತಿಕ ವಿಚಾರದಲ್ಲಿಯ ಗಣ್ಯವಾದ ರಾಜಕೀಯ ಮೂಲಪ್ರವೃತ್ತಿ ಹಾಗೂ ಸಾಮರ್ಥ್ಯ ಎಂದೇ ತಿಳಿಯಬೇಕು.

ಭಾರತೀಯ ರಾಜ್ಯಜೀವನದ ಎಲ್ಲ ಬಗೆಯ ರಚನೆ, ವಿಸ್ತರಣೆ ಮತ್ತು ಪುನಾರಚನೆಗಳ ಬುಡದಲ್ಲೂ ಇದ್ದ ಒಂದೇ ಒಂದು ದೃಢತತ್ವವೆಂದರೆ ಸಚೇತನ ಮತ್ತು ಸ್ವಯಂನಿರ್ಣಾಯಕ ಸಮಷ್ಟಿಜೀವನತತ್ವ. ಹಾಗೆ ಸ್ವಯಂ ನಿರ್ಣಯ ತೆಗೆದುಕೊಂಬುದು ಸಾಮಾನ್ಯ ಜನತೆಯಲ್ಲಿ ಮಾತ್ರವಲ್ಲ, ಅದೂ ಇಂದಿನಂತೆ ಮತಯಂತ್ರದ ಮೂಲಕವಲ್ಲ, ಮೇಲ್ಮೈಯಲ್ಲಿಷ್ಟೇ ನಿಂತ ಪ್ರಾತಿನಿಧಿಕ ಸಮಿತಿಯ ಮೂಲಕವಲ್ಲ-ಈ ಪ್ರಾತಿನಿಧಿಕ ಸಮಿತಿಯಾದರೋ ರಾಷ್ಟ್ರದ ರಾಜಕೀಯ ಬುದ್ಧಿಯ ಏಕಮಾತ್ರ ಭಾಗದ ಪ್ರತಿನಿಧಿ!-ಇಷ್ಟೇಅಲ್ಲದೆ ಆಧುನಿಕ ಪದ್ಧತಿ ವ್ಯವಸ್ಥೆಗೊಳಿಸಲು ಶಕ್ತವಾದಷ್ಟು! ಆ ಸ್ವಯಂನಿರ್ಣಯವು ದೇಶದ ಎಲ್ಲ ಜೀವನ-ನಾಡಿಗಳಲ್ಲೂ ಅದರ ಬಾಳಿನ ಪ್ರತಿಯೊಂದು ಪ್ರತ್ಯೇಕ ಅಂಗದಲ್ಲೂ ಮೂಡಿಬರುವಂಥದು. ಒಂದು ಸ್ವತಂತ್ರ ಸಮನ್ವಯಶೀಲ ವ್ಯವಸ್ಥೆಯು ಅದರ ಲಕ್ಷಣವಾಗಿತ್ತು. ಅದು ಲಕ್ಷ್ಯವನ್ನಾಗಿ ತೆಗೆದುಕೊಂಡ

ಸ್ವಾತಂತ್ರ್ಯ ಸ್ಥಿತಿಯಾದರೂ ಅಷ್ಟು ವೈಯಕ್ತಿಕವಾಗಿರದೆ ಸಮಷ್ಟಿಹಿತದ ದೃಷ್ಟಿಯುಳ್ಳದ್ದಾಗಿತ್ತು. ಮೊಟ್ಟಮೊದಲು ಸಮಸ್ಯೆ ಸರಳವಾಗಿತ್ತು; ಗ್ರಾಮ ಮತ್ತು ವಂಶ, ಕುಲ ಅಥವಾ ಚಿಕ್ಕ ಪ್ರಾದೇಶಿಕ ಜನತೆ ಎಂಬೆರಡೇ ಸಮಷ್ಟಿ ಘಟಕಗಳ ಪ್ರಶ್ನೆಯಿತ್ತು. ಸ್ವಾಯತ್ತವಾದ ಗ್ರಾಮಸಮಷ್ಟಿಯು ತಳಹದಿಯ ಪದ್ಧತಿಯ ಮೇಲೆ ಮೊದಲನೆಯದರ ಸಚೇತನವಾದ ಸ್ವತಂತ್ರ ಬಾಳುವೆ ಸ್ಥಾಪಿತವಾಗಿತ್ತು; ಅದು ಅಷ್ಟು ಪೂರ್ಣವಾಗಿಯೂ ದೃಢವಾಗಿಯೂ ರಚಿತ ವಾಗಿದ್ದುದರಿಂದಲೇ ಕಾಲಧರ್ಮಾನುಗುಣವಾದ ಬಳಿಕೆ ಕಳಪೆಗಳೆಲ್ಲವನ್ನೂ ಎದುರಿಸಿ ಇಂದಿನವರೆಗೂ ಉಳಿದುಕೊಂಡು ಬಂತು ಮತ್ತು ಇದೇ ಇತ್ತೀ ಚೆಗೆ ನಿರ್ದಯವೂ ನಿರ್ಜೀವವೂ ಆದ ಬ್ರಿಟಿಷ್ ಸಾಹೇಬೀಪದ್ಧತಿಯ ಆಡಳಿತ ಯಂತ್ರದಡಿಯಲ್ಲಿ ಸಿಕ್ಕಿ ನಾಶವಾಯ್ತು. ಹಳ್ಳಿಯ ಇಡಿ ಜನತೆ ಕೃಷಿಯನ್ನವ ಲಂಬಿಸಿತ್ತು; ಒಟ್ಟಿನಲ್ಲಿ ಅದು ಒಂದೇ ಒಂದಾದ ಧಾರ್ಮಿಕ, ಸಾಮಾಜಿಕ ಸೈನಿಕ ಮತ್ತು ರಾಜಕೀಯ ಘಟಕವೆನಿಸಿ, ತನ್ನ ಸಮಿತಿಯಮೂಲಕ ರಾಜನ ನೇತೃತ್ವದಲ್ಲಿ ತನ್ನನ್ನು ತಾನೇ ಆಳಿಕೊಂಡಿತ್ತು;ಆಗ ಸ್ಪಷ್ಟವಾದ ಕರ್ತವ್ಯವಿಭಜನೆ ಅಥವಾ ಶ್ರಮವಿಭಜನೆ ಆಗಿದ್ದಿಲ್ಲ.

ಕೃಷ್ಟಿಗಳು, ಮಂಡಲಗಳು ಹಾಗೂ ಸಾಮ್ರಾಜ್ಯಗಳು:

ಮೇಲೆ ಹೇಳಿದ ಪದ್ಧತಿಯು ಸರಳತಮವಾದ ಕೃಷಿಗೋರಕ್ಷಣ ಜೀವನದ ರೂಪಕ್ಕಷ್ಟೇ ತಕ್ಕದ್ದಾಗಿತ್ತಲ್ಲದೆ ಎಲ್ಲರಿಗೂ ಸರಿಯನಿಸುವಂತಿದ್ದಿಲ್ಲ; ಪರಿಮಿತವಾದ ಚಿಕ್ಕ ಪ್ರಾದೇಶಿಕ ಜನತೆಗಲ್ಲದೆ ಅನ್ಯರಿಗದು ಸಾಕಷ್ಟು ವ್ಯಾಪಕ ವಾಗಿರಲಿಲ್ಲ. ಆದುದರಿಂದ ಹೆಚ್ಚು ಜಟಿಲವಾದ ಸಮಷ್ಟಿಜೀವನ ಪದ್ಧತಿಯು, ಮೂಲಭೂತ ಭಾರತೀಯ ತತ್ವದ ಮಾರ್ಪಟ್ಟ ಹಾಗೂ ಅಧಿಕ ಸೂಕ್ಷ್ಮಪ್ರಕಾರ ಸಮನ್ವಿತವಾದ ಪ್ರಯೋಗದ ವಿಕಾಸ ಆವಶ್ಯಕವೆನಿಸಿತು. ಮೊಟ್ಟಮೊದಲು ಆರ್ಯಸಮಷ್ಟಿಯ ಎಲ್ಲ ಸದಸ್ಯರಿಗೂ ಸಾಧಾರಣವೆನಿಸಿದ ಕೃಷಿಗೋರಕ್ಷಾ ಜೀವನ (ಕೃಷ್ಟಯಃ) ಸದಾ ಬಹುವ್ಯಾಪಕವಾಗಿ ಉಳಿಯಿತು; ಆದರೆ ಅದರ ಮೇಲೆ ವ್ಯಾಪಾರ, ಉದ್ಯಮ, ಕಲೆ, ಕಸಬುಗಳೂ ಅವಕ್ಕಿಂತ ಕಡಿಮೆ ವ್ಯಾಪ್ತಿ ಯಲ್ಲಿ ವಿಶೇಷಜ್ಞತೆವೆತ್ತ ಸೈನಿಕ, ರಾಜಕೀಯ, ಧಾರ್ಮಿಕ ಮತ್ತು ಪಾಂಡಿತ್ಯ ಸಾಧ್ಯ ಉದ್ಯೋಗಗಳೂ ಕರ್ತವ್ಯಗಳೂ ಹೆಚ್ಚುಹೆಚ್ಚಾಗಿ ಬೆಳೆಯುತ್ತಬಂದವು.

ಗ್ರಾಮಸಮಷ್ಟಿಯು ಉದ್ದಕ್ಕೂ ಸ್ಥಿಮಿತ ಘಟಕವಾಗಿ ಉಳಿಯಿತು, ಸಮಾಜ ಶರೀರದ ದೃಢಬೀಜ ಅಥವಾ ಅಭೇದ್ಯ ಅಣುವಾಗಿನಿಂತಿತ್ತು. ಆದರೆ ಆ ಬಳಿಕ ನೂರು-ಸಾವಿರ-ಲಕ್ಷಗಟ್ಟಲೆ ಗ್ರಾಮಗಳ ಜೀವನ ತನ್ನ ತನ್ನ ಪ್ರಭುವಿನ ಆಡಳಿತದಡಿಯಲ್ಲಿ ತನ್ನದೇ ಆದ ಆಡಳಿತ ವ್ಯವಸ್ಥೆಯ ಆವಶ್ಯಕತೆಯೊಡನೆ ರೂಪುಗೊಂಡಿತು. ಈ ಘಟಕಗಳು, ದಿಗ್ವಿಜಯ–ಪರರಾಜ್ಯ ಸಹಪರಕಾರಗಳ ಮೂಲಕ ಒಂದುಕುಲ–ಒಂದು ಗೋತ್ರಸಂತತಿಯ ದೊಡ್ಡ ಜನತೆಯಾಗಿ ಬೆಳೆದುಬಂದ ಹಾಗೆ, ಒಂದುರಾಜ್ಯದ ಅಥವಾ ಸಂಯುಕ್ತ ಗಣರಾಷ್ಟ್ರದ ಅಂಗಗಳಾದವು; ಇವು ಪುನಃ ಇನ್ನೂ ಹೆಚ್ಚು ದೊಡ್ಡ ರಾಜ್ಯಗಳ ಮಂಡಲಗಳೆನಿಸಿದವು ಮತ್ತು ಕೊನೆಯಲ್ಲಿ ಒಂದು ಅಥವಾ ಹಲವು ಸಾಮ್ರಾಜ್ಯಗಳ ಭಾಗಗಳಾದವು. ಸಾಮಾಜಿಕ–ರಾಜಕೀಯ ರಚನೆಯಲ್ಲಿಯ ಭಾರತೀಯ ಪ್ರತಿಭೆ ಒರೆಗೆ ಹತ್ತುವುದು ಈ ವರ್ಧಮಾನ ಸಮಭಿವೃದ್ಧಿ ಮತ್ತು ಸಾನ್ನಿವೇಶಿಕ ನವ ವಿಧಾನಗಳಿಗನುಗುಣವಾಗಿ ಮಾಡಿದ ತನ್ನ ಸಾಮಷ್ಟಿಕ ಸ್ವಯಂನಿರ್ಣಯ ನಿಷ್ಠ ಸ್ವಾತಂತ್ರ್ಯ ಹಾಗೂ ಸುವ್ಯವಸ್ಥೆಯ ತತ್ವದ ಜಯಪ್ರದ ಪ್ರಯೋಗದಲ್ಲಿ.

ಚಾತುರ್ವರ್ಣ್ಯದ ವಿಕಾಸ:

ಈ ಆವಶ್ಯಕತೆಯನ್ನು ಪೂರೈಸಲೆಂದು ಚಾತುರ್ವರ್ಣ್ಯದ ಸ್ಥಿಮಿತ ಸಾಮಾಜಿಕ–ಧಾರ್ಮಿಕ ಪದ್ಧತಿಯನ್ನು ಭಾರತೀಯ ಬಗೆ ನಿರ್ಮಿಸಿತು. ಹೊರ ಹೊರಗೆ ನೋಡಿದರೆ–ಒಂದು ಅರ್ಚಕವರ್ಗ, ಒಂದು ಸೈನಿಕ ಹಾಗೂ ರಾಜಕೀಯ ಶ್ರೀಮಂತ ವರ್ಗ, ಕಸಬುದಾರ-ಸ್ವತಂತ್ರಕೃಷಿಕ ಮತ್ತು ವ್ಯಾಪಾರಿಗಳದೊಂದುಗುಂಪು, ಅನಂತರ ದಾಸ-ಶ್ರಮಜೀವಿಗಳ ಕೆಳವರ್ಗ–ಇವುಗಳಿಂದ ಕೂಡಿದ ಪದ್ಧತಿ ಸಾಮಾನ್ಯವಾಗಿ ಮಾನವಸಮಾಜದಲ್ಲಿ ಒಂದಲ್ಲ ಒಂದು ಕಾಲದಲ್ಲಿ ಅನೇಕ ಜನಾಂಗಗಳಲ್ಲಿ ಇದ್ದ ಕಟ್ಟಿನ ಒಂದು ಉನ್ನತರ ರೂಪವೆಂದು ತೋರಬಹುದು. ಆ ಹೋಲಿಕೆ ಕೇವಲ ಹೊರಗಷ್ಟೇ; ಭಾರತದ ಚಾತುರ್ವರ್ಣ್ಯದ ಅಂತಸ್ತತ್ವವೇ ಬೇರೆ ಬಗೆಯದು. ಅರ್ವಾಚೀನ ವೈದಿಕ ಮತ್ತು ಇತಿಹಾಸ ಪುರಾಣಗಳ ಕಾಲದಲ್ಲಿ ಚತುರ್ವರ್ಣಪದ್ಧತಿಯು ಏಕಕಾಲದಲ್ಲಿ ಧಾರ್ಮಿಕ–ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬಗೆಗಳ ಒಂದು ಹಾಸುಹೊಕ್ಕಾದ ಚೌಕಟ್ಟಾಗಿತ್ತು. ಆ ಚೌಕಟ್ಟಿನಲ್ಲಿ ಪ್ರತಿಯೊಂದು ವರ್ಗಕ್ಕೂ ತನ್ನ ನೈಸರ್ಗಿಕ

ಭಾಗಧೇಯವಿತ್ತು ಹಾಗೂ ಯಾವ ಒಂದು ಮೂಲಭೂತ ಚಟುವಟಿಕೆಯಲ್ಲೂ ಯಾವ ಒಂದರ ಭಾಗ ಅಥವಾ ಸ್ಥಾನವೂ ಪರವ್ಯಾವರ್ತಕವಾಗಿದ್ದಿಲ್ಲ. ಈ ಲಕ್ಷಣವು ಪ್ರಾಚೀನ ಪದ್ಧತಿಯನ್ನರಿತುಕೊಳ್ಳುವುದಕ್ಕೆ ಅತ್ಯಾವಶ್ಯಕ; ಆದರೆ ಅಧಃಪತನಕಾಲದ ಪರಿಸ್ಥಿತಿ ಪರಿಣಾಮಗಳ ಅಪಾರ್ಥ ಅಥವಾ ಅತಿಶಯಾರ್ಥಗಳ ದೆಸೆಯಿಂದ ತಾಳಿದ ಅಪಕಲ್ಪನೆಗಳಿಗಿದು ತುತ್ತಾಗಿ ಮಲಿನವಾಯ್ತು. ಉದಾಹರಣಾರ್ಥ, ಪವಿತ್ರಾಧ್ಯಯನ ಮತ್ತು ಅತ್ಯುಚ್ಚ ಆಧ್ಯಾತ್ಮಿಕ ಜ್ಞಾನ-ಜ್ಞಾನಾರ್ಜನಾವಕಾಶಗಳು ಕೇವಲ ಬ್ರಾಹ್ಮಣರ ಸ್ವತ್ತಾಗಿದ್ದಿಲ್ಲ. ಮೊಟ್ಟಮೊದಲು ಬ್ರಾಹ್ಮಣ ಕ್ಷತ್ರಿಯರಲ್ಲಿ ಆಧ್ಯಾತ್ಮಿಕ ನೇತೃತ್ವಕ್ಕಾಗಿ ಸ್ಪರ್ಧೆಯಿತ್ತು; ಬಹಳಕಾಲ ಕ್ಷತ್ರಿಯರು ಪಂಡಿತರ ಮತ್ತು ಪುರೋಹಿತರ ಬಾಯಬ್ರಹ್ಮದ ವಿರುದ್ಧ ನಿಂತು ಸ್ವತ್ವವನ್ನು ಕಾಪಾಡಿಕೊಂಡರು. ಆದರೆ ಕೊನೆಯಲ್ಲಿ ಧರ್ಮಶಾಸ್ತ್ರಕಾರರು, ಉಪಾಧ್ಯಾಯರು, ಅರ್ಚಕರು ಅಲ್ಲದೆ ತತ್ವಜ್ಞಾನ, ಪಾಂಡಿತ್ಯ, ಪವಿತ್ರಗ್ರಂಥಗಳ ಅಧ್ಯಯನಗಳಿಗೆ ಇಡಿ ಬಾಳನ್ನು ಮೀಸಲಿಡ ಬಲ್ಲವರು ಎಂದೆನಿಸಿದ ಬ್ರಾಹ್ಮಣರು ಸುಸ್ಥಿರವೂ ಸುಪ್ರಭಾವಿಯೂ ಆದ ಗಣ್ಯತೆಯನ್ನು ಪಡೆದರು. ಅರ್ಚಕ-ಪಂಡಿತವರ್ಗ ಧಾರ್ಮಿಕ ಆಧಾರವಾದರು, ಪವಿತ್ರ ಗ್ರಂಥ ಹಾಗೂ ಪರಂಪರೆಯ ಪಾಲಕರಾದರು, ಧರ್ಮ-ಶಾಸ್ತ್ರಗಳ ಅರ್ಥಗಾರರಾದರು, ಸರ್ವಜ್ಞಾನಶಾಖೆಗಳ ಅಭಿಜ್ಞಾತ ಅಧ್ಯಾಪಕರಾದರು- ಮಿಕ್ಕ ವರ್ಗದವರ ಸಾಮಾನ್ಯ ಉಪದೇಶಕರೂ ಗುರುಗಳೂ ಹೆಚ್ಚಾಗಿ ಅವರೇ ಆದರು. ತತ್ವಜ್ಞಾನಿಗಳೆಲ್ಲರೂ ಬ್ರಾಹ್ಮಣರೇ ಎಂದು ಹೇಳಬರದಿದ್ದರೂ ಬಹುಸಂಖ್ಯ ಚಿಂತಕರೂ ಸಾಹಿತಿಗಳೂ ವಿದ್ವಾಂಸರೂ ಅವರೇ ಆಗಿದ್ದರೆನ್ನಬಹುದು. ಬ್ರಹ್ಮ-ಕ್ಷತ್ರ-ವೈಶ್ಯ ಎಂಬ ದ್ವಿಜತ್ರಯಕ್ಕೂ ಅಧಿಕಾರವಿದ್ದರೂ ವೇದೋಪನಿಷತ್ತುಗಳ ಅಧ್ಯಯನ ಅವರ ಪಾಲಿಗೆ ಸೇರಿತು. ಶೂದ್ರರಿಗೆ ತಾತ್ವಿಕವಾಗಿ ಆ ಹಕ್ಕಿದ್ದಿಲ್ಲ. ಇದ್ದ ಸಂಗತಿಯೇನೆಂದರೆ, ಅತ್ಯರ್ವಾಚೀನ ಕಾಲದಲ್ಲಿ ಕೂಡ ಪ್ರಾಚೀನ ಸ್ವಾತಂತ್ರ್ಯದ ಮುಖ್ಯಾಂಗವನ್ನು ಧಾರ್ಮಿಕ ಚಳವಳಿಗಳು ಸಾಲು ಸಾಲಾಗಿ ಎದ್ದು ಎತ್ತಿಹಿಡಿದವು; ಅತ್ಯುಚ್ಚ ಆಧ್ಯಾತ್ಮಿಕ ಜ್ಞಾನವನ್ನೂ ಆ ಜ್ಞಾನಲಾಭದ ಅವಕಾಶವನ್ನೂ ಎಲ್ಲರ ಮನೆಬಾಗಿಲಿಗೂ ತಂದವು ಮತ್ತು ಆದಿಯಲ್ಲಿ ಹೇಗೋ ಹಾಗೇ ಎಲ್ಲ ವರ್ಗಗಳಲ್ಲೂ, ವೇದ-ವೇದಾಂತಗಳ ಋಷಿಗಳು ಹುಟ್ಟಿದರು; ಕೊನೆವರೆಗೂ ಯೋಗಿ, ಸಂತ, ಅಧ್ಯಾತ್ಮಚಿಂತಕ, ನವಮಾರ್ಗನಿರ್ಮಾತೃಗಳೂ

ಧಾರ್ಮಿಕ ಕವಿ-ಗಾಯಕರೂ ಪಾರಂಪರಿಕ ಆಧಾರಗ್ರಂಥ ಹಾಗೂ ವಿದ್ಯೆಗಳಿಂದ ಭಿನ್ನವಾದ ಚೈತನ್ಯಮಯ ಆಧ್ಯಾತ್ಮಿಕತೆ ಮತ್ತು ಜ್ಞಾನಗಳ ಮೂಲ ಪುರುಷರೂ ಅತಿ ನೀಚವಾದ ಶೂದ್ರವರ್ಗ, ನಿಂದಿತ–ಶೋಷಿತ ಬಹಿಷ್ಕೃತ ವರ್ಗಗಳನ್ನೊಳಗೊಂಡು ಸಮಷ್ಟಿಯ ಎಲ್ಲ ಉಚ್ಚ ನೀಚ ಮಟ್ಟಗಳಿಂದಲೂ ಬಂದವರು.

ವರ್ಣತಾರತಮ್ಯದ ಬೆಳವಣಿಗೆ:

ಆ ಚತುರ್ವರ್ಣಗಳು ಅವಿಲಂಘ್ಯ ಸಾಮಾಜಿಕ ತರತಮ ಪ್ರಸ್ತರಗಳಾದವು. ಆದರೆ ಬಹಿಷ್ಕೃತರನ್ನುಳಿದರೆ ಮಿಕ್ಕ ವರ್ಗಗಳಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ಆಧ್ಯಾತ್ಮಿಕ ಜೀವನ ಮತ್ತು ಪ್ರಯೋಜನ, ಒಂದುವಿಧದ ಸಾಮಾಜಿಕ ಘನತೆ, ಶಿಕ್ಷಣ, ಸಾಮಾಜಿಕ–ನೈತಿಕ ಗೌರವತತ್ವ ಹಾಗೂ ಸಮಷ್ಟಿಯ ಅಂಗವಾಗಿ ಒಂದು ಸ್ಥಾನ, ಹಕ್ಕು, ಬಾಧ್ಯತೆಗಳಿದ್ದವು. ಆ ಪದ್ಧತಿಯ ಪರಿಣಾಮವಾಗಿ ಒಂದು ಸ್ಥಿರವಾದ ಶ್ರಮವಿಭಜನೆ ಮತ್ತು ಸುವ್ಯವಸ್ಥಿತ ಆರ್ಥಿಕ ಯೋಗ್ಯತೆಗಳು ಉಂಟಾದವು; ಮೊದಲು ಇದರಲ್ಲಿ ಆನುವಂಶಿಕ ತತ್ವ ಗಣ್ಯವಾಗಿತ್ತು-ಇದರಲ್ಲೂ ಆಚಾರಕ್ಕಿಂತ ಬರಿ ವಿಚಾರವಷ್ಟೇ ಅಲಂಘ್ಯವಾಗಿತ್ತೆನ್ನಿ-ಆದರೆ ತನ್ನ ವರ್ಗದಲ್ಲೇ ಸ್ವಪ್ರಭಾವ ಇಲ್ಲವೆ ಯೋಗ್ಯತೆಗಳನ್ನು ಬಳಸಿಕೊಂಡು ಧನಾರ್ಜನೆ ಮಾಡಿಕೊಳ್ಳಲೂ ಸಮಾಜ, ಆಡಳಿತಚಕ್ರ ಮತ್ತು ರಾಜಕೀಯಕ್ಷೇತ್ರಗಳಲ್ಲಿ ಗಣ್ಯನೆನಿಸಿಕೊಳ್ಳಲೂ ಯಾವನಿಗೂ ಅವಕಾಶವಿರದಿರಲಿಲ್ಲ. ಏಕೆಂದರೆ, ಕೊನೆಯದಾಗಿ, ಸಾಮಾಜಿಕ ತರತಮಶ್ರೇಣಿಯು ಆದೇಕಾಲದಲ್ಲಿ ರಾಜಕೀಯ ಉಚ್ಚನೀಚ ಸೋಪಾನಪಂಕ್ತಿಯಾಗಿರಲಿಲ್ಲ: ಸರ್ವಸಾಧಾರಣವಾದ ನಾಗರಿಕ ಹಕ್ಕುಬಾಧ್ಯತೆ, ಸಭೆ, ಸಮಿತಿ, ಆಡಳಿತಘಟಕಗಳಲ್ಲಿ ನಾಲ್ಕೂ ವರ್ಗದವರಿಗೆ ತಮ್ಮತಮ್ಮ ಸ್ಥಾನ ಮತ್ತು ಪ್ರಭಾವಾಂಶವಿತ್ತು. ಕಾಯಿದೆ ಮತ್ತು ತತ್ವಗಳಲ್ಲಾದರೂ ಪ್ರಾಚೀನಭಾರತದಲ್ಲಿ ಮಿಕ್ಕ ಹಳೆಯ ಜನಾಂಗಗಳ ಭಾವನೆಗಳಿಗೆ ವಿರುದ್ಧವಾಗಿ–ಆಚರಣೆಯಲ್ಲಿ ಕೆಲವೇ ಅಪವಾದಗಳನ್ನುಳಿದರೆ ಅವರ ಸಮಾನಸ್ಥಾನವು ಸಾಮಾಜಿಕ ಪುರುಷಾಧೀನತೆಯಿಂದಲೂ ಗಾರ್ಹಸ್ಥಕರ್ಮಮಗ್ನತೆಯಿಂದಲೂ ಲುಪ್ತವಾದರೂ-ಸ್ತ್ರೀಯರಿಗೆ ನಾಗರಿಕ ಹಕ್ಕುಗಳನ್ನು ಸಮಾನವಾಗಿ ಕೊಡದೆ ಇದ್ದಿಲ್ಲ. ಉಪಲಬ್ಧ ಇತಿಹಾಸಕಥೆಗಳಲ್ಲಿ

ರಾಣಿಯರಾಗಿಯೂ ಆಡಳಿತಗಾರ್ತಿಯರಾಗಿಯೂ ಯೋಧೆಯರಾಗಿಯೂ ಬಾಳಿದ ಸ್ತ್ರೀಯರು ಬೇಕಾದಷ್ಟು ಸಿಕ್ಕುವರಷ್ಟೇ ಅಲ್ಲ, ನಾಗರಿಕ ಸಮಿತಿಗಳಲ್ಲಿ ನಿರ್ವಾಚಿತ ಪ್ರತಿನಿಧಿಗಳಾದವರೂ ಲಭ್ಯರು.

ಸರ್ವಸಾಧಾರಣ ಜೀವನದಲ್ಲಿ ಎಲ್ಲ ವರ್ಗಗಳೂ ನಿಕಟವಾಗಿ ಭಾಗ ವಹಿಸುವ ತಳಹದಿಯ ಮೇಲೆಯೇ ಇಡಿ ಭಾರತೀಯ ಪದ್ಧತಿ ರಚಿತವಾದದ್ದು. ಪ್ರತಿಯೊಂದು ವರ್ಗವೂ ಸ್ವಕ್ಷೇತ್ರದಲ್ಲಿ ಪ್ರಾಧಾನ್ಯಪಡೆದಿತ್ತು–ಬ್ರಾಹ್ಮಣನಿಗೆ ಧರ್ಮದಲ್ಲಿ ಪ್ರಾಧಾನ್ಯವಿದ್ದರೆ, ಪಾಂಡಿತ್ಯ ಸಾಹಿತ್ಯಗಳಲ್ಲಿ ಗಣ್ಯತೆಯಿದ್ದರೆ; ಕ್ಷತ್ರಿಯನಿಗೆ ಯುದ್ಧ, ರಾಜ್ಯಭಾರ, ಅಂತಾರಾಜ್ಯಕೀಯ ರಾಜಕಾರ್ಯಗಳಲ್ಲಿ ಪ್ರಾಮುಖ್ಯವಿತ್ತು; ಅರ್ಥಾರ್ಜನ ಹಾಗೂ ಉತ್ಪಾದಕ ಆರ್ಥಿಕ ಕರ್ತವ್ಯಗಳಲ್ಲಿ ವೈಶ್ಯ ಅಗ್ರೇಸರನಾಗಿದ್ದನು. ಆದರೆ ಯಾರಿಗೂ-ಶೂದ್ರನಿಗೆ ಸಹ-ನಾಗರಿಕ ಜೀವನದಲ್ಲಿ ಭಾಗವಹಿಸುವ, ರಾಜಕೀಯ ಆಡಳಿತ ನ್ಯಾಯದಾನಗಳಲ್ಲಿ ಪರಿಣಾಮಕರವಾದ ಸ್ಥಾನಪಡೆದು ಅಭಿಪ್ರಾಯ ಪ್ರಕಟಿಸುವ ಅಧಿಕಾರವಿಲ್ಲದೆ ಇದ್ದಿಲ್ಲ. ಇದರ ಪರಿಣಾಮವಾಗಿ ಬೇರೆಯ ದೇಶಗಳಲ್ಲಿದ್ದಂತೆ ಭಾರತದಲ್ಲಿ ಪ್ರಾಚೀನ ಭಾರತೀಯ ರಾಜಕೀಯ–ಸಾಮಾಜಿಕ ವ್ಯವಸ್ಥೆ ವರ್ಗಸತ್ತೆಯನ್ನು ಬೆಳೆಸಲಿಲ್ಲ, ಇದ್ದಲ್ಲೂ ಬಹಳಕಾಲ ಉಳಿಸಿಕೊಳ್ಳಲಿಲ್ಲ. ತಿಬೇಟಿನಲ್ಲಿಯ ಪುರೋಹಿತ ಪ್ರಭುತ್ವ, ಫ್ರಾನ್ಸ್–ಇಂಗ್ಲಂಡ ಮತ್ತು ಇತರ ಯೌರೋಪ್ಯ ದೇಶಗಳಲ್ಲಿ ಅನೇಕ ಶತಕಗಳ ಕಾಲ ಇದ್ದ ಜಮೀನುದಾರಿ ಮತ್ತು ಸೈನಿಕ ಶ್ರೀಮತ್ಪ್ರಭುತ್ವ, ಕಾರ್ತೇಜು–ವೆನೀಸುಗಳಲ್ಲಿದ್ದಂಥ ವೈಶ್ಯ ಸ್ವಯಂಪ್ರಭುತ್ವಗಳು ಭಾರತೀಯ ಭಾವಕ್ಕೆ ವ್ಯತಿರಿಕ್ತವಾದಂಥವು. ಕುಲ-ವಂಶಗಳು ರಾಷ್ಟ್ರ–ರಾಜ್ಯಗಳಿಗಾಗಿ ಬೆಳೆಯುತ್ತಿರುವಾಗ ಹಾಗೂ ಅವು ಮಂಡಲ–ನೇತೃತ್ವಕ್ಕಾಗಿಯೂ ಅಧಿರಾಜ್ಯ ಪದಕ್ಕಾಗಿಯೂ ಹೋರಾಡುತ್ತಿದ್ದಾಗ–ಅಲ್ಲದೆ ಎಲ್ಲೆಲ್ಲೂ ಯುದ್ಧ, ಕಲಹ, ರಾಜ್ಯವಿಸ್ತರಣ ನಡೆಯುತ್ತಿದ್ದಾಗ ಗಣ್ಯಕ್ಷತ್ರಿಯ ಮನೆತನಗಳ ರಾಜಕೀಯ ಪ್ರಾಧಾನ್ಯವಿದ್ದುದಕ್ಕೆ ಮಹಾಭಾರತದಲ್ಲೂ ಅದಕ್ಕಿಂತ ಹೆಚ್ಚಿನ ಒರಟುರೂಪದಲ್ಲಿ ಕುಲ ರಾಷ್ಟ್ರಪದ್ಧತಿಗೆ ತಿರುಗುತ್ತಿದ್ದ ಮಧ್ಯಯುಗೀನ ರಾಜಪುತ್ರಸ್ಥಾನದಲ್ಲೂ ನಿದರ್ಶನಗಳು ಸಿಗುತ್ತವೆ: ಆದರೆ ಪ್ರಾಚೀನ ಭಾರತದಲ್ಲಿ ಇದು ಕ್ಷಣಿಕ ಆಗಂತುಕವಾಗಿತ್ತಲ್ಲದೆ, ಅಂಥ ಪ್ರಾಧಾನ್ಯವಿದ್ದುದಾದರೂ ಇತರ ವರ್ಣದವರ ರಾಜಕೀಯ ಮತ್ತು ನಾಗರಿಕ ಪ್ರಭಾವವನ್ನು ಹೊರಪಡಿಸಲೂ ಅಲ್ಲ: ಮತ್ತು

ಸಮಷ್ಟಿಯ ವಿವಿಧ ಘಟಕಗಳ ಸ್ವತಂತ್ರ ಜೀವನದಲ್ಲಿ ಅದು ಕೈಹಾಕಲೂ ಇಲ್ಲ, ಶೋಷಕಹಸ್ತವನ್ನು ಚಾಚಲೂ ಇಲ್ಲ. ನಡುಗಾಲಗಳ ಪ್ರಜಾಪ್ರಭುತ್ವ ಪದ್ಧತಿಯ ಗಣರಾಜ್ಯಗಳು ಬಹುಶಃ ಸಭೆಗಳಲ್ಲಿ ಇಡಿ ಜನತೆ ಸಕ್ರಿಯವಾಗಿ ಭಾಗವಹಿಸಬೇಕೆಂಬ ತತ್ವವನ್ನು ಪೂರ್ಣವಾಗಿ ಉಳಿಸಿಕೊಳ್ಳಲು ಹೆಣಗಿದ ರಾಜಕೀಯ-ಸಾಮಾಜಿಕ ಸಂಸ್ಥೆಗಳೆನ್ನಬೇಕು. ಅವೆಂದೂ ಗ್ರೀಕ್ ಮಾದರಿಯವಾಗಿರಲಿಲ್ಲ. ಸ್ವಯಂಪ್ರಭುತ್ವದ ಗಣರಾಜ್ಯಗಳೆಂದರೆ ಕುಲಪ್ರಭುತ್ವಗಳು ಅಥವಾ ಸಮಾಜದ ಘನವಂತರಿಂದ ತುಂಬಿದ ಪರಿಮಿತ ಶಾಸನಸಭೆಗಳು-ಇವು ಅನಂತರ ಆಮೇಲಿನ ರಾಜಕೀಯ ಸಮಿತಿ ಇಲ್ಲವೆ ನಾಗರಿಕ ಸಭೆಗಳಂಥ ಚತುರ್ವರ್ಣ ಪ್ರಾತಿನಿಧಿಕವಾದ ಸಮಿತಿ, ಸಭೆ ಎನಿಸಿತು. ಹೇಗಿದ್ದರೂ ಕೊನೆಯಲ್ಲಿ ವಿಕಾಸ ಪಡೆದದ್ದು ಸಂಮಿಶ್ರ ಸಾಮಾಜಿಕ-ರಾಜಕೀಯ ಪದ್ಧತಿ. ಅದರಲ್ಲಿ ಯಾವ ಒಂದು ವರ್ಣಕ್ಕೂ ಅತಿ ಪ್ರಾಧಾನ್ಯವಿರಲಿಲ್ಲ. ಹೀಗಿದ್ದುದರಿಂದಲೇ ಗ್ರೀಸ್-ರೋಮ್‌ಗಳ ವ್ಯಥಾಬಹುಲ ಇತಿಹಾಸದಲ್ಲಿ ಕಂಡುಬರುವಂತೆ ಧನಿಕ-ದರಿದ್ರರ ಹೋರಾಟ, ಸ್ವಯಂಪ್ರಭುತ್ವ ಪ್ರಜಾಪ್ರಭುತ್ವಗಳ ಕಲ್ಪನೆ-ಅದು ಸರ್ವತಂತ್ರ ಸ್ವತಂತ್ರ ರಾಜಪ್ರಭುತ್ವವಾಗಿ ಬೆಳೆದುನಿಂತದ್ದು; ಅಥವಾ ಮೊದಲು ಶ್ರೀಮಂತರ ಆಳಿಕೆ, ಅದನ್ನುರುಳಿಸಿಬಂದ ಧನಿಕ ಹಾಗೂ ವೃತ್ತಿಗ ವರ್ಗದ ಮೇಲ್ಮೆ, ಸಾಮಾನ್ಯರ ಹೆಸರಿನಲ್ಲಿ ಸಮಾಜವನ್ನು ಉದ್ಯಮೀಕರಣಕ್ಕೀಡುಮಾಡುವುದು, ದಬ್ಬಾಳಿಕೆನಡೆಸುವುದು, ಶೋಷಿಸುವುದು ಮುಂತಾದ ಚಟುವಟಿಕೆಯ ಮಧ್ಯವರ್ಗೀಯ ಅಂಗಡಿಗಾರರ ಪ್ರಭುತ್ವ ಮತ್ತು ಕೊನೆಯದಾಗಿ ಅರ್ವಾಚೀನ ಯುರೋಪಿನಲ್ಲಿ ಕಂಡುಬರುವ ಶ್ರಮಜೀವಿಗಳ ಆಳಿಕೆಯತ್ತ ತಿರುಗುವ ಶಾಸನ ನೀತಿ ಎಂಬಂತೆ ವರ್ಗಕಲಹದಿಂದ ಉತ್ತರೋತ್ತರ ಶಾಸನರೂಪಗಳು ಪರಿಣಮಿಸಿದ್ದು ಭಾರತದ ಇತಿಹಾಸದಲ್ಲಿ ಕಾಣದಾಗಿದೆ. ಭಾರತೀಯ ಬಗೆ ಮತ್ತು ಭಾವ ಪಾಶ್ಚಾತ್ಯರಷ್ಟು ಕೇವಲ ಬೌದ್ಧಿಕ ಹಾಗೂ ಜೈವಿಕ (ಪ್ರಾಣಪ್ರಧಾನ) ವಲ್ಲ; ಅದು ಪ್ರಾತಿಭ, ಸಮರಸಾತ್ಮಕ ಮತ್ತು ಸಮ್ಯಕ್ ಶಿಥಿಲ. ಸಮಾಜ ಮತ್ತು ರಾಜಕೀಯದ ಯಾವ ಒಂದು ಆದರ್ಶ ಪದ್ಧತಿಯನ್ನೂ ಅದು ಸಂಸ್ಥಾಪಿಸದಿದ್ದರೂ ಅದು ಒಂದು ಬುದ್ಧಿವಂತಿಕೆಯ ಹಾಗೂ ಸ್ಥಿತಿಮಿತತೆಯ ಸಾಮರಸ್ಯ ಪದ್ಧತಿಯನ್ನು ಸ್ಥಾಪಿಸಿತು. ಆ ಪದ್ಧತಿ ಅಪಾಯಕರವಾದ ಅಸ್ಥಿರ ಸಮತೋಲವುಳ್ಳದ್ದೂ ಅಲ್ಲ; ಎಲ್ಲ ನೈಸರ್ಗಿಕ ಶಕ್ತಿ ಮತ್ತು ವರ್ಗಗಳಲ್ಲಿಯ ರಾಜಿ-ವ್ಯವಸ್ಥೆ

ಯುಳ್ಳದ್ದೂ ಅಲ್ಲ: ಅದೊಂದು ಸಂಘಟಿತವೂ ಪ್ರಾಣಸ್ಥಾನೀಯವೂ ಆದ ಸಮು ಕ್ರಮ, ಸಹಜೀವನ ಪದ್ಧತಿ; ಸಮಷ್ಟಿಯ ಸರ್ವಾಂಗಗಳ ಸ್ವತಂತ್ರ ಚಟುವ ಟಿಕೆಯನ್ನದು ಗೌರವಿಸುತ್ತಿತ್ತು. ಎಲ್ಲ ಮಾನುಷ ಪದ್ಧತಿಗಳಿಗೆ ಒದಗುವ ಅಧಃ ಪಾತವನ್ನು ತಡೆಗಟ್ಟುವಂತಲ್ಲದಿದ್ದರೂ ಆಂಗಿಕ ಗಲಭೆ ನಿಯಮೋಲ್ಲಂಘನ ಗಳನ್ನಾದರೂ ತಡೆಗಟ್ಟುವಂಥ ಶಕ್ತಿ ಅದಕ್ಕಿತ್ತು.

ಶಾಸನಾಧಿಕಾರಗಳ ತ್ರಿಕೂಟ:

ರಾಜಕೀಯ ರಚನೆಯ ಶಿಖರದಲ್ಲಿ ಸಮಂತ್ರಿಕರಾಜ, ಆಸ್ಥಾನ ಸಭೆ ಮತ್ತು ರಾಜ್ಯದ ಸಾಮಾನ್ಯ ಸಭೆಗಳೆಂಬ ಮೂರು ಶಾಸಕ ವೃತ್ತಗಳಿದ್ದವು. ಮಂತ್ರಿಮಂಡಲದ ಸದಸ್ಯರನ್ನೂ ಮಂತ್ರಿಗಳನ್ನೂ ಎಲ್ಲ ವರ್ಗಗಳಿಂದಲೂ ಆಯಲಾಗುತ್ತಿತ್ತು; ಅವರಲ್ಲಿ ನಿಶ್ಚಿತಸಂಖ್ಯ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಪ್ರತಿನಿಧಿಗಳಿರುತ್ತಿದ್ದರು. ಸಂಖ್ಯೆಯಲ್ಲಿ ವೈಶ್ಯರೇ ಗಣ್ಯರಾಗಿದ್ದರು; ಆದರಿದು ಜನತೆಯಲ್ಲಿಯ ಅವರ ಸಂಖ್ಯಾಬಾಹುಲ್ಯಕ್ಕೆ ಅನುಗುಣವಾಗಿತ್ತು. ಏಕೆಂದರೆ ಪ್ರಾಚೀನ ಆರ್ಯ ಸಮಾಜದಲ್ಲಿ ವೈಶ್ಯವರ್ಣಕ್ಕೆ ದೊಡ್ಡ ಪುಟ್ಟ ವ್ಯಾಪಾರಿಗಳಲ್ಲದೆ ಕಸಬುದಾರರೂ ಶಿಲ್ಪಿಗಳೂ ಕೃಷಿಕರೂ ಸೇರಿದ್ದರಿಂದ ಅದೇ 'ವಿಶಃ' ಎಂಬ ಹೆಸರಿಂದ ಸರ್ವಸಾಮಾನ್ಯರಲ್ಲಿ ಮುಕ್ಕಾಲುಮೂರುವೀಸ ಅಂಶ ವಾಗಿತ್ತು. ಬ್ರಹ್ಮ, ಕ್ಷತ್ರ, ಶೂದ್ರರಲ್ಲಿ-ಮೊದಲನೆಯ ಎರಡು ವರ್ಗಗಳ ಸ್ಥಾನ-ಪ್ರಭಾವಗಳು ಎಷ್ಟೇ ಗಣ್ಯವಾಗಿದ್ದರೂ–ಅವರ ವರ್ಗಗಳು ಅನಂತರ ಹುಟ್ಟಿ ಬೆಳೆದವುಗಳಾದ್ದರಿಂದ–ಸಂಖ್ಯಾಬಲದಲ್ಲಿ ಹೋಲಿಸಿನೋಡಿದರೆ ಬಹಳ ಕಡಿಮೆ ಯವರಾಗಿದ್ದರು. ಬೌದ್ಧ ಆಂದೋಲನ ಗಲಿಬಿಲಿಮಾಡಿ ಬ್ರಹ್ಮವರ್ಗವು ಸಮಾ ಜದ ಪುನಾರಚನೆಗೈದ ಸಾಂಸ್ಕೃತಿಕ ಅವನತಿಕಾಲದಲ್ಲಷ್ಟೇ ಬಹುಸಂಖ್ಯ ಕೃಷಿಕರೂ ಶಿಲ್ಪಿಗಳೂ ಚಿಕ್ಕವ್ಯಾಪಾರಿಗಳೂ ಭಾರತದ ಬಹುಭಾಗದಲ್ಲಿ ಶೂದ್ರ ತ್ವಕ್ಕಿಳಿದು ಸಮಾಜಶಿಖರದಲ್ಲಿ ಅಲ್ಪಸಂಖ್ಯ ಬ್ರಾಹ್ಮಣರೂ ಮಧ್ಯದಲ್ಲಿ ಅಲ್ಪ ಸ್ವಲ್ಪ ಜನ ಕ್ಷತ್ರ–ವೈಶ್ಯರೂ ಉಳಿಯುವಂತಾದುದು. ಹೀಗೆ ಇಡಿ ಸಮಷ್ಟಿಯನ್ನು ಪ್ರತಿನಿಧಿಸುವ ಮಂತ್ರಿಮಂಡಲವು ಅತ್ಯುಚ್ಚ ಕಾರ್ಯಪಾಲಿಕೆಯೂ ಶಾಸನಿಕಾ ಯವೂ (ಆಡಳಿತಸಂಸ್ಥೆ) ಆಗಿತ್ತಲ್ಲದೆ; ಸರಕಾರ, ಕೋಶ, ಧೋರಣಗಳಿಗೆ ಸಂಬಂಧಿಸಿದ ಮುಖ್ಯ ಆಡಳಿತಕಾರ್ಯಗಳಲ್ಲಿ ಹಾಗೂ ಆಜ್ಞೆಗಳನ್ನು ಹೊರಡಿ

ಸುವುದರಲ್ಲಿ, ಸಮಷ್ಟಿಹಿತ (–ಸಂಬಂಧ)ದ ಸರ್ವವಿಷಯಗಳಲ್ಲಿ ಪ್ರಭುವು ಅವರ ಒಪ್ಪಿಗೆಯನ್ನು ಪಡೆಯಬೇಕು ಮತ್ತು ಅವುಗಳಲ್ಲದು ಭಾಗವಹಿಸಿರಬೇಕು. ಶಾಸನಮಂಡಲಿಗಳ ನೆರವಿಂದ ರಾಜನೂ ಮಂತ್ರಿಗಳೂ ಮಂತ್ರಿಮಂಡಲವೂ ರಾಜ್ಯಭಾರದ ವಿವಿಧ ಶಾಖೆಗಳ ಮೇಲ್ವಿಚಾರಣೆ ಮಾಡುತ್ತಿದ್ದರು ಹಾಗೂ ನಿಯಂತ್ರಿಸುತ್ತಿದ್ದರು. ನಿಃಸಂದೇಹವಾಗಿ ರಾಜನ ಶಕ್ತಿಯು ಕಾಲ ಹೋದ ಹಾಗೆ ಬೆಳೆಯುವ ಪ್ರವೃತ್ತಿಯನ್ನು ತೋರಿತು ಮತ್ತು ಎಷ್ಟೋ ವೇಳೆ ಆತ ಸ್ವೇಚ್ಛೆ–ಸ್ವಪ್ರಯತ್ನಗಳಿಂದ ನಡೆದುಕೊಂಬ ಪ್ರಲೋಭನಕ್ಕೊಳಗಾದುದುಂಟು; ಹೀಗಿದ್ದರೂ ರಾಜ್ಯ–ಧರ್ಮವು ಸಚೇತನವಾಗಿದ್ದವರೆಗೆ ಮಂತ್ರಿಗಳ ಮತ್ತು ಪರಿಷತ್ತಿನ (ಮಂತ್ರಿಮಂಡಲದ) ಅಭಿಪ್ರಾಯ–ಇಚ್ಛೆಗಳನ್ನು ರಾಜನು ನಿರ್ಭಯವಾಗಿ ಅಲಕ್ಷಿಸಲೂ ಪ್ರತಿಭಟಿಸಲೂ ಆಗದವನಾಗಿದ್ದನು. ಅಶೋಕನಂತಹ ಅತಿಶಕ್ತನೂ ನಿಶ್ಚಯನಿಷ್ಠನೂ ಆದ ಸಮ್ರಾಜ ಕೂಡ ತನ್ನ ಮಂತ್ರಿಪರಿಷತ್ತನ್ನು ಎದುರಿಸ ಬೇಕಾಗಿ ಬಂದಾಗ ಕೊನೆಯಲ್ಲಿ ಸೋತು ವಸ್ತುತಃ ಸ್ಥಾನತ್ಯಾಗ ಮಾಡಬೇಕಾಗಿ ಬಂತು. ಪರಿಷತ್ತಿನ ಮಂತ್ರಿಗಳು ಅವಿಧೇಯ ಅಥವಾ ಅಸಮರ್ಥ ಅರಸನನ್ನು ಕಿತ್ತೊಗೆದು ಅವನ ಕುಟುಂಬದ ಇನ್ನೊಬ್ಬನನ್ನಾಗಲಿ ಹೊಸ ಕುಟುಂಬದವನನ್ನಾಗಲಿ ಗದ್ದಿಗೇರಿಸಬಲ್ಲವರಾಗಿದ್ದರು, ಗದ್ದಿಗೇರಿಸಿಯೂ ಇದ್ದರು. ಮೌರ್ಯರಿಂದ ಸುಂಗರಿಗೆ ರಾಜ್ಯಾಧಿಕಾರ ಬಂದುದೂ ಕಣ್ವವಂಶೀಯರು ಆಳಲಾರಂಭಿಸಿದ್ದೂ ಹೀಗೇ; ಇಂಥ ಐತಿಹಾಸಿಕ ಬದಲಾವಣೆಗಳೂ ವಂಶಕ್ರಾಂತಿಗಳೂ ಆದುದು ಈ ಪ್ರಕಾರವೇ. ಸಂವಿಧಾನದ ತತ್ವದಂತೆಯೂ ಸಾಮಾನ್ಯ ರೂಢಿಯ ಪ್ರಕಾರವೂ ರಾಜನ ಎಲ್ಲ ಕಾರ್ಯಗಳೂ ವಸ್ತುತಃ ಸಮಂತ್ರಿಕರಾಜನವು, ಮಂತ್ರಿಗಳ ನೆರವಿಂದಾದಂಥವು. ಆತನ ವೈಯಕ್ತಿಕ ಕಾರ್ಯಗಳೆಲ್ಲವೂ ಅವರ ಒಪ್ಪಿಗೆಯಿರುವ ವರೆಗೆ ಮತ್ತು ಧರ್ಮೋಕ್ತ ಕರ್ತವ್ಯಗಳ ನ್ಯಾಯವೂ ಅನಪೇತವೂ ಆದ ಆಚರಣೆ ಎನಿಸಿರುವ ವರೆಗೆ ಮಾತ್ರ ಕ್ರಮಬದ್ಧವಾದವುಗಳಾಗುತ್ತವೆ. ಮಂತ್ರಿಪರಿಷತ್ತೆಂಬುದು ಸಾರಸರ್ವಸ್ವರೂಪದ ಶಕ್ತಿನಿಕಾಯ ಅಥವಾ ಕಾರ್ಯಕೇಂದ್ರ. ವ್ಯವಸ್ಥಾಪನೀಯ ಪರಿಣಾಮದೊಳಗೆ ಕಾರ್ಯಭಾರವನ್ನು ವಹಿಸಿಕೊಂಡು, ತನ್ನ ಪ್ರಾತಿನಿಧ್ಯದಲ್ಲಿಯೂ ಕೇಂದ್ರೀಕರಣದಲ್ಲಿಯೂ ಸಂವಿಧಾನತಃ ನಾಲ್ಕು ವರ್ಣಗಳನ್ನೊಳಗೊಂಡ ಆದು ಸಮಾಜದ ಮುಖ್ಯ ಮೂಲಾಂಗ ಸಹಿತವಾಗಿ ನಿಂತದ್ದರಿಂದ

ರಾಜನಾದರೂ ಈ ಶಕ್ತಿಯ ಸಕ್ರಿಯ ಶಿರಸ್ಸಾಗಿದ್ದನಲ್ಲದೆ ನಿರಂಕುಶ ಪ್ರಭುತ್ವದಲ್ಲಿರುವಂತೆ ತಾನೇ ಸರಕಾರ, ತಾನೇ ರಾಜ್ಯದೊಡೆಯ ಅಥವಾ ಮಾಲಕ ಇಲ್ಲವೆ ವಿಧೇಯ ಪ್ರಜೆಗಳಿಂದ ತುಂಬಿದ ರಾಷ್ಟ್ರದ ಹೊಣೆಯರಿಯುವ ಖಾಸಗಿ ಶಾಸಕ ಎಂದು ಭಾವಿಸುತ್ತಿದ್ದಿಲ್ಲ. ಜನರ ವಿಧೇಯತೆ ಧರ್ಮವೆಂಬ ಕಾಯಿದೆಯಲ್ಲಿಯೂ ಧರ್ಮಾಚರಣೆ, ಧರ್ಮಸಂರಕ್ಷಣೆಗಳಿಗಾಗಿ ಸಮಂತ್ರಿಕರಾಜ ಹೊರಡಿಸುವ ಆಜ್ಞೆಗಳಲ್ಲೂ ನಿಷ್ಠವಾಗಿತ್ತು.

ಪೌರ ಮತ್ತು ಜಾನಪದ ಸಭೆಗಳು:

ತಾನೊಬ್ಬನೇ ಶಾಸಕನಿಕಾಯವೆಂದಾಗಿದ್ದರೆ ಮಂತ್ರಿಪರಿಷತ್ತಿನಂತಹ ಆ ಚಿಕ್ಕ ನಿಕಾಯವು ರಾಜ ಮತ್ತು ಅವನ ಸಚಿವರ ಪ್ರತಿಷ್ಠೆಯ ಹಾಗೂ ನೇರವಾದ ಪ್ರಭಾವಕ್ಕೊಳಪಟ್ಟಿರುವುದರಿಂದ ನಿರಂಕುಶಪ್ರಭುತ್ವದ ಒಂದು ಸಾಧನವಾಗಿ ಮಾರ್ಪಟ್ಟು ಅಧಃಪತಿತವಾಗುತ್ತಿತ್ತು. ಆದರೆ ಅಲ್ಲಿ ಮತ್ತೆರಡು ಸಮರ್ಥ ನಿಕಾಯಗಳಿದ್ದವು; ಅವು ಸಮಾಜವನ್ನು ವಿಸ್ತೃತ ಪ್ರಮಾಣದಲ್ಲಿ ಪ್ರತಿನಿಧಿಸುತ್ತಿದ್ದವಲ್ಲದೆ ಅದರ ಬಗೆ, ಬಾಳು, ಬಯಕೆಗಳ ಹೆಚ್ಚು ನಿಕಟವಾದ ಅಭಿವ್ಯಕ್ತಿಗಳಾಗಿದ್ದವು; ಇದರಮೇಲೆ ಅವು ನೇರವಾದ ರಾಜಪ್ರಭಾವದಿಂದ ಸ್ವತಂತ್ರವಾಗಿದ್ದವು, ಪ್ರಶಾಸನ ಮತ್ತು ಪ್ರಶಾಸನೀಯ ವಿಧಾನಗಳ ವಿಸ್ತೃತವೂ ಸತತವೂ ಆದ ಶಕ್ತಿಗಳನ್ನು ಬಳಸುತ್ತಿದ್ದವು ಮತ್ತು ರಾಜನ ಶಕ್ತಿವಿಸ್ತರಣಕ್ಕೆ ತಡೆಯಾಗಿ ಯಾವಾಗಲೂ ವರ್ತಿಸಬಲ್ಲವಾಗಿದ್ದವು. ಅವಕ್ಕೆ ಅಸಮಾಧಾನವುಂಟಾದಾಗ ಅವು ಅಪ್ರಿಯ ಅಥವಾ ಶೋಷಕ ರಾಜನನ್ನು ಕಿತ್ತೊಗೆಯಬಲ್ಲವಾಗಿದ್ದವು ಇಲ್ಲವೆ ಜನೇಚ್ಛೆಗೆ ಅವನು ಶರಣಾಗುವವರೆಗೆ ಅವನಿಗೆ ಆಡಳಿತ ನಡೆಸಲು ಅಸಾಧ್ಯವಾಗುವಂತೆ ಮಾಡಬಲ್ಲವಾಗಿದ್ದವು. ಇವೇ ಆ ಆಸ್ಥಾನಿಕ ಮತ್ತು ಸಾಮಾನ್ಯ ಸಭೆಗಳು. ಇವು ತಮ್ಮ ವಿಶಿಷ್ಟ ಶಕ್ತಿಯ ಪ್ರಯೋಗಕ್ಕಾಗಿ ಬೇರೆ ಬೇರೆಯಾಗಿಯೂ ಇಡಿ ಜನತೆಗೆ ಸಂಬಂಧಿಸಿದ ವಿಷಯಗಳಲ್ಲಿ ಒಟ್ಟಾಗಿಯೂ ಕೂಡುತ್ತಿದ್ದವು.* ಆಸ್ಥಾನಸಭೆ ಅಥವಾ ಪೌರಸಭೆ ಎಂಬುದು ನಗರಸ್ಥ

---

*ಈ ನಿಕಾಯಗಳ ವಿಷಯವನ್ನು ನನ್ನ ಉದ್ದೇಶಕ್ಕೆ ಗಣ್ಯವಾಗುವ ಮಟ್ಟಿಗೆ ಪ್ರಕಾಶಮಾಯವೂ ಸೂಕ್ಷ್ಮದೃಷ್ಟಿಯಿಂದ ಬರೆದದ್ದೂ ಆದ ಶ್ರೀ ಜಯಸ್ವಾಲರ ಈ ವಿಷಯದ ಲೇಖದಿಂದ ತೆಗೆದುಕೊಳ್ಳಲಾಗಿದೆ.

ನಾಗರಿಕಸಭೆ. ರಾಜ್ಯದ ಅಥವಾ ಸಾಮ್ರಾಜ್ಯದ ರಾಜಧಾನಿಯಲ್ಲಿ ಅದು ಕೂಡುತ್ತಿತ್ತು ಮತ್ತು ಆ ಸಾಮ್ರಾಜ್ಯ ಪದ್ಧತಿಯೊಳಗೆ ಅಂಥವೇ ಆದ ಕೆಳ ಮಟ್ಟದ ಸಭೆಗಳು ಪ್ರಾಂತಗಳ ಮುಖ್ಯಪಟ್ಟಣಗಳಲ್ಲಿ ಕೂಡುತ್ತಿದ್ದವೆಂದು ತೋರುತ್ತದೆ. ಅವು ಸ್ವತಃ ಸ್ವತಂತ್ರ ರಾಜ್ಯಗಳ ರಾಜಧಾನಿಗಳಾಗಿದ್ದಾಗ ಆ ಪ್ರಾಂತಗಳ ಆಡಳಿತ ನಡೆಸುತ್ತಿದ್ದ ಸಭೆಗಳ ಅಳಿದುಳಿದ ನಿಕಾಯಗಳು. ನಗರದ ಸಂಘಗಳು, ವಿವಿಧ ಜಾತೀಯ ನಿಕಾಯಗಳು ಅವುಗಳಲ್ಲಿ ಪ್ರಾತಿನಿಧ್ಯಪಡೆದಿದ್ದವು. ಜಾತೀಯ ಪ್ರತಿನಿಧಿಗಳು ಸಮಾಜದ ಎಲ್ಲ ವರ್ಗಗಳಿಂದಲೂ ಆಯ್ದವರು ಅಥವಾ ಕೊನೆಯಪಕ್ಷ ಮೊದಲಿನ ಮೂರು ವರ್ಗಗಳಿಂದ ಬಂದವರು. ಆ ಸಂಘ ಮತ್ತು ಜಾತಿನಿಕಾಯಗಳಾದರೋ ಗ್ರಾಮ-ನಗರಗಳ ಸಮಷ್ಟಿಯ ಸಂಘಟಿತ, ಸ್ವಪ್ರಭುತ್ವಸಂಪನ್ನ ಅಂಗಗಳು. ಪೌರಸಭೆ ಕೃತಕವಾದುದಾಗಿರಲಿಲ್ಲ. ರಾಜಧಾನಿ ಅಥವಾ ಮುಖ್ಯನಗರದ ಗಡಿಯೊಳಗಿದ್ದ ಇಡಿ ಜನತಾವಯವಿಯ ಒಟ್ಟಿನ (ಸಾಕಲ್ಯದ) ಸಂಘಟಿತ ಪ್ರಾತಿನಿಧ್ಯವುಳ್ಳದ್ದಾಗಿತ್ತು. ಅದು ನಗರದ ಇಡಿ ಜೀವನವನ್ನು ಪ್ರಶಾಸಿಸುತ್ತಿತ್ತು. ಅದರ ಪ್ರಶಾಸನ ನೇರ ಅಥವಾ ಅದರ ಅಧೀನದಲ್ಲಿರುವ ಕೆಳ ಸಭೆಗಳ ಅಥವಾ ಪ್ರಶಾಸನಮಂಡಲಿಗಳ ಇಲ್ಲವೆ ಐದು ಹತ್ತು ಅಥವಾ ಹೆಚ್ಚು ಜನಗಳ ಸಮಿತಿಗಳ ಮೂಲಕ ಸಾಗುತ್ತಿತ್ತು. ಅದು ನಿಯಮಾವಳಿಯನ್ನೂ ಆಜ್ಞೆಗಳನ್ನೂ ಜನಸಂಘಗಳಿಗೆ ವಿಧಿಸುತ್ತಿತ್ತಲ್ಲದೆ ನೇರವಾದ ಆಡಳಿತದ ಮೂಲಕ ನಾಗರಿಕ ಸಮಷ್ಟಿಯ ವಾಣಿಜ್ಯಕ, ಔದ್ಯಮಿಕ ಆರ್ಥಿಕ ಮತ್ತು ನಗರಸಭಾಸಂಬಂಧಿ ವ್ಯವಹಾರಗಳನ್ನು ನಿಯಂತ್ರಿಸುತಿತ್ತು ಹಾಗೂ ಅವುಗಳ ಮೇಲ್ವಿಚಾರಣೆ ನಡೆಸುತ್ತಿತ್ತು; ಆದರೆ ಅದರ ಶಕ್ತಿವ್ಯಾಪ್ತಿ ಇಷ್ಟಕ್ಕೇ ಮುಗಿಯಲಿಲ್ಲ; ರಾಜ್ಯದ ವಿಶಾಲ ವ್ಯವಹಾರಗಳಲ್ಲಿ ಅದನ್ನು ಕೇಳಬೇಕಾಗುತ್ತಿತ್ತು ಮತ್ತು ಅದು ತನ್ನ ನಿರ್ಣಯಾನುಸಾರ ಕಾರ್ಯ ನಡೆಸಬಲ್ಲುದಾಗಿತ್ತು; ಅದು ನಿರ್ಣಯ ತೆಗೆದುಕೊಳ್ಳುವುದು ಕೆಲವೇಳೆ ಸ್ವತಂತ್ರವಾಗಿ ಮತ್ತೆ ಕೆಲವೆಡೆ ಸಾಮಾನ್ಯ ಸಭೆಯೊಟ್ಟಿಗೆ. ರಾಜಧಾನಿಯಲ್ಲಿ ಅದು ಯಾವಾಗಲೂ ಇದ್ದು ಕೆಲಸಮಾಡುತ್ತಿದ್ದುದರಿಂದ ರಾಜನೂ ಅವನ ಅಮಾತ್ಯರೂ ಸಚಿವಪರಿಷತ್ತೂ ಅದನ್ನೊಂದು ಗಣ್ಯ ಬಲವೆಂದು ಗಣಿಸಬೇಕಾಗಿತ್ತು. ರಾಜನ ಮಂತ್ರಿಗಳೊಡನೆ ವಿರೋಧವುಂಟಾದಾಗ–ದೂರದ ಪ್ರಾಂತೀಯ ನಾಗರಿಕ ಲೋಕಸಭೆ ಕೂಡ–ಅವುಗಳ ಸ್ಥಾನ ಮಾನ, ಹಕ್ಕು ಹಿಡುವಳಿಗಳಿಗೆ ಧಕ್ಕೆ ಬಂದರೆ ಅಥವಾ

ರಾಜಪ್ರಶಾಸಕರ ಬಗ್ಗೆ ಅಸಮಧಾನ ಉಂಟಾದರೆ ತನ್ನ ಅಸಂತೋಷವನ್ನು ಪರಿಣಾಮಕರವಾಗಿ ವ್ಯಕ್ತ ಮಾಡಬಲ್ಲುದಾಗಿತ್ತು, ಸಂಬಂಧಿಸಿದ ಅಧಿಕಾರಿಯನ್ನು ಹಿಂಕರೆಸಿಕೊಳ್ಳಲು ಒತ್ತಾಯಿಸಬಲ್ಲುದಾಗಿತ್ತು.

ಸಾಮಾನ್ಯ ಅಥವಾ ಜಾನಪದ ಸಭೆ ಮುಖ್ಯನಗರೇತರ ಪ್ರದೇಶದ ಎಲ್ಲ ಮಾನ-ಸಂಕಲ್ಪಗಳ ಪ್ರತಿನಿಧಿಯಾಗಿತ್ತು; ಏಕೆಂದರೆ ಅದರಲ್ಲಿ ಉಪನೇತೃಗಳೂ ಆಯ್ದ ಮುಖಂಡರೂ ಅಥವಾ ಹಳ್ಳಿ ಪಟ್ಟಣಗಳ ಗಣ್ಯ ಜನರೂ ಇರುತ್ತಿದ್ದರು. ಅದರ ಪ್ರತಿನಿಧಿಗಳು ಮುಖ್ಯವಾಗಿ ಪ್ರತಿನಿಹಿತ ಸಮಷ್ಟಿಯೊಳಗಿನ ಧನಿಕರಾದುದರಿಂದ ಅದರಲ್ಲಿ ಒಂದು ಬಗೆಯ ಹಣವಂತಿಕೆಯ ಹಬ್ಬ ಎದ್ದು ಕಾಣಿಸುತ್ತಿತ್ತು. ಆದುದರಿಂದ ಅದು ಸಾಮಾನ್ಯರ ಸಭೆಯಾದರೂ ಪ್ರಜಾಪ್ರಭುತ್ವದ ಮಾದರಿಯದಾಗಿತ್ತೆನ್ನಲು ಬರುವದಿಲ್ಲ-ಅದನ್ನು ಇತರ ಯಾವದಕ್ಕೂ ಹೋಲಿಸಲು ಬರದಿದ್ದರೂ ಇತ್ತೀಚಿನ ಆಧುನಿಕ ಸಂಸತ್ತುಗಳಂತೆ ಅದರಲ್ಲಿ ಶೂದ್ರ, ಕ್ಷತ್ರಿಯ, ವೈಶ್ಯ ಪ್ರತಿನಿಧಿಗಳಿದ್ದರು; ಆದರಿಂದ ಅದು ಜನತೆಯ ಬಾಳು ಬಗೆಗಳ ಸಾಕಷ್ಟು ಮಟ್ಟಿನ ಪಡಿಯಚ್ಚಾಗಿತ್ತೆನ್ನ ಬಹುದು. ಅದು ಅತ್ಯುಚ್ಚ ಸಂಸತ್ತು ಅಥವಾ ಪಾರ್ಲಿಮೆಂಟಾಗಿದ್ದಿಲ್ಲ. ಏಕೆಂದರೆ ಅದಕ್ಕೆ ಸಾಮಾನ್ಯವಾಗಿ ರಾಜ ಮತ್ತು ಪರಿಷತ್ತು, ಪೌರ ಸಭೆಗಳಂತೆಯೇ ಕಾಯದೆ ಮಾಡುವ ಶಕ್ತಿಯಿದ್ದಿಲ್ಲ; ಕೇವಲ ವಿನಿಯಮಗಳ ರಚನೆ, ಆಜ್ಞಾದಾನಗಳಷ್ಟೇ ಅದಕ್ಕೆ ಶಕ್ಯವಾಗಿತ್ತು. ರಾಷ್ಟ್ರಜೀವನದ ವಿವಿಧ ಚಟುವಟಿಕೆಗಳ ಸಹಕ್ರಮದಲ್ಲಿ ಸಮವ್ಯವಸ್ಥೆಯಲ್ಲಿ ಜನೇಚ್ಛೆಯ ನೇರವಾದ ಸಾಧನವಾಗಿ ಕೆಲಸಮಾಡುವುದು ಅದಕ್ಕೆ ಸೇರಿದ್ದು: ಅವು ನೇರವಾಗಿ ನಡೆಯುವಂತೆ ನೋಡಿಕೊಳ್ಳುವುದು; ವಾಣಿಜ್ಯ, ಉದ್ಯಮ, ಕೃಷಿ, ರಾಷ್ಟ್ರದ ಸಾಮಾಜಿಕ ಮತ್ತು ರಾಜಕೀಯಜೀವನಗಳ ಸಾಧಾರಣ ವ್ಯವಸ್ಥೆ ಹಾಗೂ ಯೋಗಕ್ಷೇಮಗಳನ್ನು ಕಾಯ್ದುಕೊಂಬುದು; ಅದಕ್ಕಾಗಿ ವಿನಿಯಮ-ಆಜ್ಞಪ್ತಿಗಳನ್ನು ಹೊರಡಿಸುವುದು, ಮತ್ತು ರಾಜನ ಹಾಗೂ ಅವನ ಪರಿಷತ್ತಿನ ಕಡೆಯಿಂದ ವಿಶೇಷಾಧಿಕಾರಗಳನ್ನೂ ಸೌಕರ್ಯಗಳನ್ನೂ ಪಡೆದುಕೊಡುವುದು; ಸಾರ್ವಭೌಮನ ಕಾರ್ಯಗಳಿಗೆ ಜನತೆಯ ಸಮ್ಮತಿಯನ್ನು ಕೊಡುವುದು ಅಥವಾ ಬಿಡುವುದು, ಅವಶ್ಯವಿದ್ದರೆ ಆತನನ್ನು ನೇರವಾಗಿ ಎದುರಿಸುವುದು, ಅವನ ದುಃಶಾಸನವನ್ನು ತಡೆಯುವುದು ಇಲ್ಲವೆ ಜನಪ್ರತಿನಿಧಿ

ಗಳಿಗವಶ್ಯವಾದ ಸಾಧನಗಳಿಂದ ಅದನ್ನು ಕೊನೆಗೊಳಿಸುವದು—ಇವೇ ಮುಂತಾದವು ಆ ಜನಸಭೆಯ ಕರ್ತವ್ಯಗಳಾಗಿದ್ದವು. ಉತ್ತರಾಧಿಕಾರದ ವಿಷಯದಲ್ಲಿ ಪೌರ–ಜಾನಪದ ಸಭೆಗಳೆರಡರ ಸಂಯುಕ್ತ ಸತ್ರದ ಸಲಹೆಯನ್ನು ತೆಗೆದುಕೊಳ್ಳಲಾಗುತ್ತಿತ್ತು; ಅದು ಪ್ರಭುವನ್ನು ಅಥವಾ ಸಾರ್ವಭೌಮನನ್ನು ಗದ್ದುಗೆಯಿಂದ ಕೆಳಗಿಳಿಸಬಲ್ಲುದಾಗಿತ್ತು, ಅವನ ಮರಣಾನಂತರ ಉತ್ತರಾಧಿಕಾರವನ್ನು ಬದಲಾಯಿಸಬಲ್ಲುದಾಗಿತ್ತು, ಶಾಸಕ ಕುಟುಂಬವನ್ನೇ ಬಿಟ್ಟು ಸಿಂಹಾಸನವನ್ನು ಅನ್ಯನಿಗೆ ಸ್ಥಾನಾಂತರಿಸಬಲ್ಲುದಾಗಿತ್ತು; ರಾಜಕೀಯ ಅಂಶವಿರುವ ಯಾವುದಾದರೊಂದು ವಿವಾದ ಬಂದಲ್ಲಿ—ದ್ರೋಹ ಬಗೆದ ವ್ಯಾಜ್ಯದ ಅಥವಾ ತಪ್ಪಾಗಿ ನ್ಯಾಯದಾನ ಮಾಡಿದ ಸಂಬಂಧದಲ್ಲಿ ಅದು ಅತ್ಯುಚ್ಚ ನ್ಯಾಯಾಲಯವಾಗಿ ಕೆಲಸ ಮಾಡುತ್ತಿತ್ತು. ವಿಶೇಷ ಕರ, ಯುದ್ಧ, ಯಜ್ಞ, ದೊಡ್ಡ ನೀರಾವರಿ ಕೆಲಸ ಮುಂತಾದ ಹಾಗೂ ದೇಶಕ್ಕೆ ಸಂಬಂಧಿಸಿದ ಇತರ ಎಲ್ಲ ಗಣ್ಯ ಪ್ರಶ್ನೆಗಳ ವಿಷಯವಾಗಿ ತೆಗೆದುಕೊಂಡ ರಾಜಸಂಕಲ್ಪಗಳು (ರಾಜನಿರ್ಣಯಗಳು) ಈ ಸಭೆಗಳಿಗೆ ಬಂದು ಇವುಗಳ ಒಪ್ಪಿಗೆಯನ್ನು ಪಡೆಯಬೇಕಾಗಿತ್ತು. ಈ ಎರಡು ಸಭೆಗಳ ಉಪವೇಶನ ಪದೇ ಪದೇ ಜರುಗುತ್ತಿತ್ತೆಂದು ತೋರುತ್ತದೆ; ಅವುಗಳಿಂದ ನಿತ್ಯವೂ ಏನಾದರೊಂದು ವಿಷಯವು ಪ್ರಭುವಿನ ಮುಂದೆ ಬರುತ್ತಿತ್ತು: ಅವುಗಳ ಕಾರ್ಯ ರಾಜನಿಂದ ನಿಬದ್ಧಗೊಳಿಸಲ್ಪಡುತ್ತಿತ್ತು ಮತ್ತು ಅದು ಹಾಗೇ ಕಾಯದೆಯಾಗಿ ಪರಿಣಮಿಸುತ್ತಿತ್ತು. ಅವುಗಳ ಹಕ್ಕು ಹಾಗೂ ಚಟುವಟಿಕೆಗಳ ಆಮೂಲಾಗ್ರ ಅವಲೋಕನದಿಂದ ಪ್ರಭುತ್ವದಲ್ಲಿ ಅವು ಪಾಲುಗಾರರು, ಅದರ ಶಕ್ತಿಗಳು ಅವುಗಳಲ್ಲಿ ಅಡಗಿಸಲ್ಪಟ್ಟಿದ್ದುವು, ಸಾಮಾನ್ಯವಾಗಿ ಅವುಗಳ ಕೈಯಲ್ಲಿರದ ಅಪೂರ್ವ ಸಂದರ್ಭಗಳಲ್ಲಿಷ್ಟೇ ಪ್ರಯೋಗಿಸುವ ಶಕ್ತಿಗಳು ಕೂಡ ಅವುಗಳಿಗಿದ್ದವು ಎಂದು ತಿಳಿದು ಬರುತ್ತದೆ. ಸಮಷ್ಟಿ ಧರ್ಮ ಪರಿವರ್ತನದ ಪ್ರಯತ್ನದಲ್ಲಿ ಅಶೋಕನು ತನ್ನ ರಾಜಾಜ್ಞೆಗಳನ್ನಷ್ಟೇ ಅವಲಂಬಿಸದೆ ಸಭೆಯಲ್ಲಿ ಚರ್ಚಿಸಿಯೂ ಇದ್ದನು ಎಂಬುದು ಮಹತ್ವದ ಸಂಗತಿ. ಆದುದರಿಂದ ಪ್ರಾಚೀನರ ಸಭಾವರ್ಣನೆ ಸಾರ್ಥಕವಾದದ್ದೆನ್ನಬಹುದು. ಅದರ ಪ್ರಕಾರ ಈ ಎರಡೂ ಸಭೆಗಳು ರಾಜ್ಯದ ಚಟುವಟಿಕೆಗಳ ನಿರ್ವಾಹಕಗಳು ಮತ್ತು ಅವಶ್ಯಬಿದ್ದಾಗ ರಾಜಸರಕಾರವನ್ನು ವಿರೋಧಿಸುವ ಸಾಧನಗಳು ಎನಿಸಿದ್ದವು.

ಕುಲಧರ್ಮ ಹಾಗೂ ಕುಲಸಂಘಗಳು:

ಮಹಾಮದೀಯರ ಆಕ್ರಾಮಕ ದಾಳಿಯ ಮೊದಲೋ ಅಥವಾ ವಿದೇಶೀಯ ವಿಜಯದ ಫಲವಾಗಿಯೋ-ಯಾವುದರಿಂದ ಈ ಮಹಾಸಂಸ್ಥೆಗಳು ನಿರ್ನಾಮವಾದವು ಎಂಬುದು ಗೊತ್ತಾಗುವುದಿಲ್ಲ. ಈ ಪದ್ಧತಿಯೊಮ್ಮೆ ಮುರಿದುಬಿದ್ದರೆ ಮೇಲ್ತುದಿಯಲ್ಲಿಯ ರಾಜಪ್ರಭುತ್ವವು ತನ್ನ ಪ್ರತ್ಯೇಕತೆಯಿಂದಲೂ ರಾಷ್ಟ್ರದ ವಿಶಾಲ ವ್ಯವಹಾರಗಳ ಮೇಲಿನ ತನ್ನ ಏಕಾಂತಿಕ ನಿಯಂತ್ರಣ ಶಕ್ತಿಯಿಂದಲೂ ಹೆಚ್ಚು ಸ್ವೇಚ್ಛಾವೃತ್ತಿಯದಾಗುವುದು; ಅದಕ್ಕೂ ಮಿಕ್ಕ ಸಾಮಾಜಿಕ ರಾಜಕೀಯ ನಿಕಾಯಗಳಿಗೂ ನಡುವೆ ಸಭಾಸ್ವರೂಪದಿಂದ ದೊಡ್ಡ ಅಂತರ ವುಂಟಾಗುವುದು. ಈ ನಿಕಾಯಗಳಾದರೋ ತಮ್ಮ ತಮ್ಮ ಆಂತರಿಕ ವ್ಯವಹಾರದಲ್ಲಿ ಮಗ್ನವಾದಂಥವು. ಗ್ರಾಮಸಮುದಾಯಗಳು ಕೊನೆಯ ತನಕ ಇಂಥವೇ ಆಗಿದ್ದವು. ಆದರೆ ಉಚ್ಚ ಸರಕಾರಿ ವಿಷಯಗಳಲ್ಲಿ ಅವೇನೂ ಸಚೇತನ ಸಂಬಂಧವುಳ್ಳವಾಗಿದ್ದಿಲ್ಲ. ಸಮವಾಯ, ಸಹಕಾರ, ಸಹಕ್ರಮಗಳ ಮೇಲೇ ನಿಂತ ವಿಧ ವಿಧವಾದ ಪ್ರಕಾರಪೂರ್ಣ ಸಾಮುದಾಯಿಕ ಸ್ವಾತಂತ್ರ್ಯ ಪದ್ಧತಿಯಲ್ಲಿ ಹೀಗೆ ಅಂತರ ಉಂಟಾಗುವುದೊಂದು ಮಹಾ ದೌರ್ಬಲ್ಯ. ಅದು ಹೇಗಿದ್ದರೂ ಮಹ್ಮದೀಯದವರ ದಾಳಿಯಾದ ಅನಂತರ ಅವರು ತಂದ ನಿರಂಕುಶ ವೈಯಕ್ತಿಕ ಆಡಳಿತದ ಪರಂಪರೆಗೆ ಪೂರ್ವೋಕ್ತ ನಿರ್ಬಂಧನವು ಅಪರಿಚಿತವಾಗಿದ್ದುದರಿಂದ ಉತ್ತರ ಹಿಂದುಸ್ತಾನದ ಆದ್ಯಂತವೂ ಉಕ್ತ ಸಭಾಸ್ವರೂಪ, ಅದರ ಅವಶೇಷ ಎಲ್ಲವೂ ಧ್ವಂಸಹೊಂದಿದವು. ಆ ನಂತರವೂ ಬಹುಕಾಲದವರೆಗೆ ದಕ್ಷಿಣ ಹಿಂದುಸ್ತಾನದಲ್ಲಿ ಭಾರತೀಯ ರಾಜ್ಯಪದ್ಧತಿ ಉಳಿದುಕೊಂಡಿತ್ತು. ಆದರೆ ಅಲ್ಲಿ ಮುನ್ನಡೆದ ಸಾರ್ವಜನಿಕ ಸಭೆಗಳು ಹಳೆಯ ಮಾದರಿಯವಾಗಿರದೆ ಇತರ ಸಾಮುದಾಯಿಕ ಸಂಘ, ಸಂಸ್ಥೆ, ಸಭೆಗಳ ಸಮವಾಯ ಸ್ವರೂಪದವೂ ಅತ್ಯುಚ್ಚ ನಿಯಂತ್ರಣ ಸಾಧನಗಳೂ ಆಗಿದ್ದವು. ಈ ಅವಸಭೆಗಳು ಮೂಲತಃ ರಾಜಕೀಯವಾಗಿದ್ದ ನಿಕಾಯಗಳನ್ನೊಳಗೊಂಡಿದ್ದವು: ಅವು ಒಮ್ಮೆ ಕುಲರಾಷ್ಟ್ರದ ಮತ್ತು ಗಣರಾಷ್ಟ್ರದ ಅತ್ಯುಚ್ಚ ಸರಕಾರ-ಸಂಸ್ಥೆಗಳಾಗಿದ್ದವು. ಹೊಸ ಬಗೆಯಲ್ಲಿ ಅವೇನೋ ಉಳಿದಿದ್ದವು, ಆದರೆ ತಮ್ಮ ಉಚ್ಚಾಧಿಕಾರ ಶಕ್ತಿಯನ್ನು ಅವು ಕಳೆದುಕೊಂಡು ತಮ್ಮ ಅಂಗಸಮುದಾಯಗಳ ವ್ಯವಹಾರಗಳನ್ನು ಅಧೀನ

ಸ್ಥಾನವಲಿದ್ದು ಪರಿಮಿತ ಪ್ರಾಧಿಕಾರದಿಂದ ನಿರ್ವಹಿಸುತ್ತಿದ್ದವು. ಕುಲ ಕುಟುಂಬದ ಪರಂಪರೆ ಇನ್ನೂ ಸಾಗಿತ್ತು; ಆದರೆ ಅದರ ರಾಜಕೀಯ ಲಕ್ಷಣ ಆಗಲೇ ಅಳಿದುಹೋಗಿತ್ತು. ಅದಕ್ಕಿದ್ದುದು ಸಾಮಾಜಿಕ-ಧಾರ್ಮಿಕ ಸ್ವರೂಪ ಮಾತ್ರ. ಅದು ಉಳಿದದ್ದಾರೂ ಕ್ಷತ್ರಿಯರಲ್ಲಿ; ಅದು ತನ್ನ ಕುಲಧರ್ಮವನ್ನೂ ಸಾಮಾಜಿಕ-ಧಾರ್ಮಿಕ ಕಾಯಿದೆಯನ್ನೂ ಕಾಯ್ದುಕೊಂಡು ಕುಲಸಂಘವೆಂಬ ಸಮಷ್ಟಿಸಭೆಯನ್ನು ನಡೆಸಿಕೊಂಡಿತ್ತು. ಅತಿ ಇತ್ತೀಚೆಗೆ ದಕ್ಷಿಣ ಭಾರತದಲ್ಲಿ ನಾವು ಕಾಣುವ ಹಳೆಯ ಜಾನಪದ ಸಭೆಯು ಬದಲಾಗಿ ಇದ್ದ ಸಾರ್ವಜನಿಕ ಸಭೆಗಳು ಪ್ರತ್ಯೇಕವಾಗಿಯೂ ಒಟ್ಟಾಗಿಯೂ ಕೆಲಸಮಾಡುತ್ತಿದ್ದವಲ್ಲದೆ ಅವು ಮೇಲೆ ಹೇಳಿದ ಸಮವೇತ ಸಭೆಗಳ ಪ್ರಕಾರಗಳೇ ಆಗಿದ್ದವು. ರಾಜಪುತ್ರ ಸ್ಥಾನದಲ್ಲಿ ಕೂಡ ಕುಲವು ತನ್ನ ರಾಜಕೀಯ ಲಕ್ಷಣವನ್ನೂ ಕಾರ್ಯಶಕ್ತಿಯನ್ನೂ ಪುನಃ ಪಡೆಯಿತು; ಆದರೆ ಹಾಗೆ ಅದು ಪಡೆದದ್ದು ಮತ್ತೊಂದು ರೂಪದಲ್ಲಿ ಪ್ರಾಚೀನ ಸಂಸ್ಥೆಗಳಿಲ್ಲದೆ ಮತ್ತು ಹಸನಾದ ಸಾಂಸ್ಕೃತಿಕ ಹದವಿಲ್ಲದೆ. ಆದರೂ ಅದು ಧೈರ್ಯ, ದಾಕ್ಷಿಣ್ಯ, ಔದಾರ್ಯ, ಗೌರವ ಮುಂತಾದ ಗುಣಗಳುಳ್ಳ ಕ್ಷಾತ್ರಧರ್ಮವನ್ನು ಹೆಚ್ಚು ಅಂಶದಲ್ಲಿ ಉಳಿಸಿಕೊಂಡಿತ್ತು.

ಜಾತಿಪದ್ಧತಿಯ ಬೆಳವಣಿಗೆ:

ಭಾರತೀಯ ಸಮಷ್ಟಿಜೀವನಪದ್ಧತಿಯ ಬಲವತ್ತರವಾದ ಹಾಗೂ ಚಿರಸ್ಥಾಯಿಯಾದ ಮೂಲಾಂಗವೆಂದರೆ ಜಾತಿ. ಚಾತುರ್ವರ್ಣ್ಯದ ಚೌಕಟ್ಟಿನಲ್ಲಿ ಬೆಳೆದು, ಕೊನೆಯಲ್ಲಿ ಅದಕ್ಕೇ ಆವೇಶವಾಗಿ ಕುಳಿತು, ಅಸಾಧಾರಣ ಚೈತನ್ಯಶಕ್ತಿಯನ್ನೂ ಸ್ಥಾಯಿತ್ವವನ್ನೂ ಅತಿಗಣ್ಯತೆಯನ್ನೂ ಪಡೆದ ಇತಿಹಾಸ ಪ್ರಸಿದ್ಧವಾದ, ಈಗಲೂ ಕಚ್ಚಿಹಿಡಿದುಕೊಂಡಿರುವ, ಭಂಗಮುಖವಾದ ಸಂಸ್ಥೆ ಇದು. ಮೂಲತಃ ಜಾತಿಗಳು ಚಾತುರ್ವರ್ಣ್ಯದ ಉಪವಿಭಾಗದಿಂದಲೆ ವಿವಿಧ ಶಕ್ತಿಗಳ ಒತ್ತಡದ ಫಲವಾಗಿ ಆಯಾ ವರ್ಣದಲ್ಲೇ ಹುಟ್ಟಿದವು. ಬ್ರಾಹ್ಮಣ ಜಾತಿಗಳ ಉಪವಿಭಾಗಗಳಾದದ್ದು ಮುಖ್ಯವಾಗಿ ಧಾರ್ಮಿಕ, ಸಾಮಾಜಿಕ-ಧಾರ್ಮಿಕ ಮತ್ತು ವ್ರತ-ಸಮಾರಂಭಸಂಬಂಧಿ ಕಾರಣಗಳಿಂದ; ಆದರೆ ಜೊತೆಗೆ ಪ್ರಾದೇಶಿಕ ಹಾಗೂ ಸ್ಥಳೀಯ ವಿಭಾಗಗಳೂ ಕೂಡಿದ್ದವು: ಕುಲ

ಗಳಾಗಿ ವಿಂಗಡಿಸಲ್ಪಟ್ಟಿದ್ದರೂ ಹೆಚ್ಚಾಗಿ ಕ್ಷತ್ರಿಯರು ಒಂದು ಸಂಯುಕ್ತ ವರ್ಗವಾಗಿಯೇ ಉಳಿದಿದ್ದರು. ತದ್ವಿರುದ್ಧವಾಗಿ ವೈಶ್ಯ-ಶೂದ್ರ ವರ್ಗಗಳು ಆನುವಂಶಿಕ ತತ್ವದ ಅನುಸಾರವಾಗಿ ನಡೆದು ಬಂದ ಆರ್ಥಿಕ ಕರ್ತವ್ಯ ಕರ್ಮಗಳ ಉಪವಿಭಜನೆಯ ಆವಶ್ಯಕತೆಗೊಳಗಾಗಿ ಅಸಂಖ್ಯ ಜಾತಿಗಳಾಗಿ ಒಡೆದುಹೋದವು. ಆನುವಂಶಿಕ ತತ್ವದ ಹೆಚ್ಚುತ್ತ ಬಂದ ಉಗ್ರ ಪ್ರಯೋಗವನ್ನುಳಿದು ಬೇರೆ ದೇಶಗಳಲ್ಲಿದ್ದಂತಹ ಸಂಘಪದ್ಧತಿಯಿಂದ ಈ ಸ್ಥಿರವಾದ ಕರ್ತವ್ಯವಿಭಾಗವನ್ನು ಸಾಧಿಸಿಕೊಳ್ಳಬಹುದಾಗಿತ್ತು; ಅಂಥ ಕಾರ್ಯಪಟುವೂ ಉತ್ಸಾಹಪೂರ್ಣವೂ ಆದ ಸಂಘಗಳು ಭಾರತೀಯ ಪಟ್ಟಣಗಳಲ್ಲಿ ಇದ್ದವು. ಆದರೆ ಸಂಘಪದ್ಧತಿ ಆಮೇಲೆ ಬಳಕೆಯಿಂದ ದೂರವಾಯಿತು; ಅದಕ್ಕೂ ಹೆಚ್ಚು ಸಾಧಾರಣವಾದ ಜಾತಿಸಂಸ್ಥೆ ಎಲ್ಲೆಲ್ಲೂ ಆರ್ಥಿಕ ಕರ್ತವ್ಯಗಳ ಅಡಿಗಲ್ಲಾಯಿತು. ಹಳ್ಳಿಪಟ್ಟಣಗಳಲ್ಲಿದ್ದ ಜಾತಿ ಪ್ರತ್ಯೇಕ ಸಾಮುದಾಯಿಕ ಘಟಕವೆನಿಸಿ, ಏಕಕಾಲದಲ್ಲಿ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮುಖಗಳಿಂದ ಕೂಡಿ, ತನ್ನ ಧಾರ್ಮಿಕ, ಸಾಮಾಜಿಕ ಹಾಗೂ ಇತರ ಪ್ರಶ್ನೆಗಳನ್ನೂ ಜಾತೀಯ ವ್ಯವಹಾರವನ್ನೂ ಬಗೆಹರಿಸಿಕೊಂಡು ಹೊರಗಿನ ಹಸ್ತಕ್ಷೇಪವಿಲ್ಲದೆ ಸ್ವತಂತ್ರವಾಗಿ ತನ್ನ ಸದಸ್ಯರ ಮೇಲೆ ಅಧಿಕಾರ ನಡೆಸುತ್ತಿತ್ತು. ಧರ್ಮದ ಮೂಲಭೂತ ಪ್ರಶ್ನೆಗಳಲ್ಲಿ ಮಾತ್ರ ಶಾಸ್ತ್ರನಿಧಿಗಳಾದ ಬ್ರಾಹ್ಮಣರನ್ನು ಅಧಿಕೃತ ವ್ಯಾಖ್ಯೆ ಅಥವಾ ನಿರ್ವಚನಕ್ಕಾಗಿ ಇಲ್ಲವೆ ನಿರ್ಣಯ ಕೊಡಲು ಕೇಳಿಕೊಳ್ಳಲಾಗುತ್ತಿತ್ತು. ಕುಲದಲ್ಲಿದ್ದಂತೆಯೇ ಜಾತಿಯಲ್ಲೂ ಆಯಾ ಜಾತಿಯ ಜಾತಿವಿಧಿ ಹಾಗೂ ಜೀವನ ವರ್ತನೆಗಳ ನಿಯಮಗಳನ್ನೊಳಗೊಂಡ ಜಾತಿಧರ್ಮವೂ ಜಾತಿಸಂಘವೆಂಬ ಜಾತೀಯ ಸಾಮುದಾಯಿಕ ಸಭೆಯೂ ಇರುತ್ತಿದ್ದವು. ತನ್ನ ಸರ್ವ ಸಂಸ್ಥೆಗಳಲ್ಲೂ ಭಾರತೀಯ ರಾಜ್ಯಪದ್ಧತಿಯು ಸಮಷ್ಟಿಯ ತತ್ವವನ್ನಲ್ಲದೆ ವ್ಯಷ್ಟಿನಿಷ್ಠೆಯನ್ನು ಅವಲಂಬಿಸದುದರಿಂದ ಜಾತಿಕೂಡ ರಾಜ್ಯದ ರಾಜಕೀಯ ಹಾಗೂ ಪ್ರಶಾಸನೀಯ ಕೃತ್ಯಗಳಲ್ಲಿ ಗಣಿತವಾಯಿತು. ಅದೇ ಮೇರೆಗೆ ಸಂಘಗಳು ಸಹ ಸ್ವಯಂಕಾರವುಳ್ಳ ವ್ಯಾಪಾರದ ಮತ್ತು ಔದ್ಯಮಿಕ ಸಾಮುದಾಯಿಕ ಘಟಕಗಳಾಗಿದ್ದವು. ತಮ್ಮ ವ್ಯವಹಾರಗಳ ಚರ್ಚೆಗಾಗಿಯೂ ಪ್ರಶಾಸನಕ್ಕಾಗಿಯೂ ಅವು ಸಭೆಸೇರುತ್ತಿದ್ದವಲ್ಲದೆ ಒಂದುಕಾಲದಲ್ಲಿ ಶಾಸಕ ಪೌರನಿಕಾಯಗಳೆನಿಸಿದ್ದ ಸಂಯುಕ್ತ ರೂಪದಲ್ಲೂ ಅವೆಲ್ಲ ಒಟ್ಟಾಗಿ ಕೂಡುವುದಿತ್ತು.

ಈ ಸಂಘ ಸರಕಾರಗಳು–ಅವುಗಳನ್ನು ಹಾಗೆ ಕರೆಯಬಹುದಾದರೆ–ನಗರ ಸಭೆಗಳಿಗಿಂತ ಹೆಚ್ಚಿನವಾಗಿದ್ದವು. ಎಲ್ಲ ವರ್ಗಗಳ, ವರ್ಣವ್ಯವಸ್ಥೆಗಳ ಜಾತಿ ಸಭೆಗಳ ಹಾಗೂ ಸಂಘಗಳ ಆಂಗಿಕ ಏಕತೆಯನ್ನು ಪ್ರತಿನಿಧಿಸುವ ನಗರಸ್ಥ ನಿಕಾಯದಲ್ಲಿ ಅನಂತರ ಅವು ಲೀನವಾಗಿಹೋದವು. ರಾಜ್ಯದ ಸಾಧಾರಣ ಸಭೆಯಲ್ಲಿ ಜಾತಿಗಳ ಪ್ರಾತಿನಿಧ್ಯ ನೇರವಾಗಿ ಇದ್ದಿಲ್ಲ; ಆದರೆ ಸ್ಥಾನಿಕ ವ್ಯವಹಾರಗಳ ಆಡಳಿತದಲ್ಲಿ ಅವಕ್ಕೆ ಸ್ವಸ್ಥಾನ ಲಭ್ಯವಾಗಿತ್ತು.

ಗ್ರಾಮ ಮತ್ತು ನಗರಗಳ ಸಮುಷ್ಟಿಗಳು:

ಇಡಿ ಪದ್ಧತಿಯ ಪ್ರತ್ಯಕ್ಷ ಸ್ತಿಮಿತ ತಳಪಾಯವೆಂದರೆ ಗ್ರಾಮ ಸಮುಷ್ಟಿ ಮತ್ತು ಪಟ್ಟಣ ಸಮುದಾಯ; ಆದರೆ ಇವು ಪ್ರಾದೇಶಿಕ ಘಟಕಗಳೂ ಆಗಿರಲಿಲ್ಲ; ನಿರ್ವಾಚನೀಯ, ಪ್ರಶಾಸನೀಯ ಇಲ್ಲವೆ ಇತರ ಉಪಯುಕ್ತ ಸಾಮಾಜಿಕ ಹಾಗೂ ರಾಜಕೀಯ ಉದ್ದೇಶಗಳಿಗೆ ಅನುಕೂಲವಾದ ಯಂತ್ರಬಂಧವೂ ಆಗಿದ್ದಿಲ್ಲ; ಹಾಗಲ್ಲದೆ ಇವು ಯಾವಾಗಲೂ ನಿಜವಾದ ಸಾಮುದಾಯಿಕ ಏಕತೆಗಳೆನಿಸಿ, ಸ್ವಶಕ್ತಿಯಿಂದ ಸ್ವಕೃತ್ಯಗಳನ್ನು ನಿರ್ವಹಿಸುವ ಸಂಘಟಿತ ಜೀವನವನ್ನು ನಡೆಸಿಕೊಂಡು, ಕೇವಲ ರಾಜ್ಯದ ರಾಜಯಂತ್ರದ ಪರಾಧೀನ ಭಾಗವಾಗದೆ ಬಾಳಿಕೊಂಡಿದ್ದವು. ಗ್ರಾಮಸಮುಷ್ಟಿಯನ್ನು ಚಿಕ್ಕ ಗ್ರಾಮ ಗಣರಾಜ್ಯವೆಂದು ಕರೆಯಲಾಗುತ್ತಿತ್ತು. ಆ ವರ್ಣನೆ ಸ್ವಲ್ಪವೂ ಅತಿಶಯೋಕ್ತಿಯುಳ್ಳದ್ದಲ್ಲ: ಏಕೆಂದರೆ ಪ್ರತಿಯೊಂದು ಗ್ರಾಮವೂ ತನ್ನ ಇತಿಮಿತಿಯಲ್ಲೇ ಒಂದು ಸ್ವಾಯತ್ತ ಸ್ವಯಂಪೂರ್ಣ ಘಟಕವಾಗಿತ್ತು; ಅದನ್ನು ಅದರ ಆಯ್ದ ಪಂಚಾಯತರೂ ಆಯ್ದ ಅಥವಾ ಆನುವಂಶಿಕ ಅಧಿಕಾರಿಗಳೂ ನಡೆಸಿಕೊಂಡು ಹೋಗುತ್ತಿದ್ದರು. ಅವರೇ ಅದರ ಬೇಡಿಕೆಗಳನ್ನು ಪೂರಯಿಸುತ್ತಿದ್ದರು; ಅಲ್ಲಿಯ ಶಿಕ್ಷಣ, ಪೋಲೀಸು ವ್ಯವಸ್ಥೆ, ನ್ಯಾಯದ ತೀರ್ಪು, ಅದರ ಎಲ್ಲ ಆರ್ಥಿಕ ಅವಶ್ಯಕತೆ ಮತ್ತು ಕೃತ್ಯಗಳು ಮುಂತಾಗಿ ಸ್ಥಳೀಯ ಜೀವನದ ಎಲ್ಲ ಅಂಗಗಳನ್ನೂ ಸ್ವತಂತ್ರ ಸ್ವಶಾಸಕ ಘಟಕವಾಗಿ ನೋಡಿಕೊಳ್ಳುತ್ತಿದ್ದರು. ಪರಸ್ಪರ ವ್ಯವಹಾರವನ್ನು ಕೂಡ ಹಳ್ಳಿಗರು ಬಗೆಬಗೆಯ ಕೂಟಗಳ ಮೂಲಕ ನಡೆಸುತ್ತಿದ್ದರು; ಮತ್ತು

ಹಲವು ಹಳ್ಳಿಗಳ ಗುಂಪಿಗೆ ಚುನಾಯಿಸಲ್ಪಟ್ಟ ಇಲ್ಲವೆ ಆನುವಂಶಿಕ ಶಿರೋಮಣಿಯೊಬ್ಬನಿರುತ್ತಿದ್ದ; ಆದುದರಿಂದ ಅಷ್ಟು ಸುಸಂಘಟಿತವಾಗಿ ಅಲ್ಲವಾದರೂ ಅವು ಒಂದು ನೈಸರ್ಗಿಕ ನಿಕಾಯವಾಗಿ ಬಾಳುತ್ತಿದ್ದವು. ಆದರೆ ಭಾರತದ ಪಟ್ಟಣಗಳು ಸಹ ಅಷ್ಟು ಗಣ್ಯರೀತಿಯಿಂದಲ್ಲದಿದ್ದರೂ ಸ್ವಾಯತ್ತ ಸ್ವಶಾಸಕ ನಿಕಾಯಗಳಾಗಿದ್ದವು. ಅವುಗಳ ಆಳಿಕೆಗೆ ಅವುಗಳವೇ ಆದ ಸಭೆ ಸಮಿತಿಗಳೂ ನಿರ್ವಾಚನ ಪದ್ಧತಿ ಮತ್ತು ಮತದ ಒಳಕೆಯೂ ಇದ್ದವು. ತಮ್ಮ ಜನ್ಮಸಿದ್ಧ ಹಕ್ಕಿನ ಪ್ರಕಾರ ಅವು ತಮ್ಮ ವ್ಯವಹಾರಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದವು. ಹಳ್ಳಿಗಳಂತೆಯೇ ರಾಜ್ಯದ ಜಾನಪದ ಸಭೆಗೆ ಅವು ತಮ್ಮ ಪ್ರತಿನಿಧಿಗಳನ್ನು ಕಳಿಸಿಕೊಡುತ್ತಿದ್ದವು. ಈ ಪಟ್ಟಣ ಸರಕಾರಗಳ ಆಡಳಿತದಲ್ಲಿ ಪೋಲೀಸು, ನ್ಯಾಯ ವ್ಯವಹಾರ, ಸಾರ್ವಜನಿಕ ಉಪಯೋಗ, ಪವಿತ್ರ ಹಾಗೂ ಸಾರ್ವಜನಿಕ ಸ್ಥಲಗಳ ಸಂರಕ್ಷಣೆ, ನಿಬಂಧನ, ಪಟ್ಟಣಸ್ಥರ ಕರಗಳ ಮಾಹರಣ ಮತ್ತು ವ್ಯಾಪಾರಸಂಬಂಧಿಯಾದ ಎಲ್ಲ ವಿಷಯ, ಉದ್ಯಮ, ವಾಣಿಜ್ಯ ಮುಂತಾದ ಭೌತಿಕ ಮತ್ತು ತದಿತರ ಜನಹಿತ ಕಾರ್ಯ್ಯಗಳೆಲ್ಲವೂ ಸೇರಿದ್ದವು. ಗ್ರಾಮಸಮಷ್ಟಿಯನ್ನೊಂದು ಚಿಕ್ಕ ಗಣರಾಜ್ಯವೆನ್ನಬಹುದಾದರೆ ಪಟ್ಟಣದ ರಚನೆಯನ್ನೂ ಅದೇ ಮೇರೆಗೆ ಅದಕ್ಕಿಂತ ದೊಡ್ಡದಾದ ನಾಗರ ಗಣರಾಜ್ಯವೆನ್ನಬಹುದು. ನೈಗಮ ಅಥವಾ ಸಂಘ ಸರಕಾರಗಳಿಗೂ ಪೌರ ಅಥವಾ ಆಸ್ಥಾನ ಸಭೆಗಳಿಗೂ ತಮ್ಮವೇ ಆದ ನಾಣ್ಯಗಳನ್ನು ಮುದ್ರಿಸುವ ಹಕ್ಕಿತ್ತೆಂಬುದು ಬಹಳ ಮಹತ್ವದ್ದು. ಅಂಥ ಶಕ್ತಿಪ್ರಯೋಗಕ್ಕೆ ಇತರ ಕಡೆಗಳಲ್ಲಿ ರಾಜರು ಹಾಗೂ ಗಣರಾಜ್ಯ ನೇತೃಗಳಷ್ಟೇ ಅರ್ಹರೆನಿಸುತ್ತಿದ್ದರು.

ಅವಿಭಕ್ತಕುಟುಂಬಪದ್ಧತಿ:

ಇನ್ನೊಂದುಬಗೆಯ ಸಮಷ್ಟಿಯಿತ್ತು. ಅದಕ್ಕೆ ರಾಜಕೀಯ ಅಸ್ತಿತ್ವವಿದ್ದಿಲ್ಲ. ಆದರೆ ಅದು ವಿಶಿಷ್ಟ ಸ್ವಶಾಸಕನಿಕಾಯವಾಗಿತ್ತು. ಅದು ಭಾರತೀಯ ಜೀವನದಲ್ಲಿಯ ಎಲ್ಲೆಡೆಗೂ ತನ್ನನ್ನು ಹರಡಿಕೊಂಡು ಎಲ್ಲ ರೂಪಗಳಲ್ಲಿಯೂ ಒಂದು ಬಗೆಯ ನಿಕಟ ಸಾಮುದಾಯಿಕ ಸ್ವರೂಪ ತಾಳುವ ಬಲವಾದ ಪ್ರವೃತ್ತಿಗೊಂದು ನಿದರ್ಶನವಾಗಿತ್ತು. ಅದರ ಒಂದು ಉದಾಹರಣೆ

ಯೆಂಬರೆ ಕುಟುಂಬ; ಈ ಕುಟುಂಬ ಭಾರತದ ಎಲ್ಲೆಡೆಯಲ್ಲೂ ಇತ್ತು ಮತ್ತು ಆಧುನಿಕ ಸನ್ನಿವೇಶದ ಒತ್ತಡದಿಂದ ಅದೀಗ ಒಡೆದುಹೋಗಲಾರಂಭಿಸಿದೆ. ಕುಟುಂಬದ ಎರಡು ಮೂಲಭೂತ ತತ್ವಗಳೆಂದರೆ: ಸಗೋತ್ರಜರೂ ಅವರ ಕುಟುಂಬಗಳೂ ಸಾಮುದಾಯಿಕವಾಗಿ ಆಸ್ತಿಯನ್ನಿಟ್ಟುಕೊಂಬುದು ಮತ್ತು ಸಾಧ್ಯವಿದ್ದಷ್ಟುಮಟ್ಟಿಗೆ ಕುಟುಂಬದ ಮುಖ್ಯಸ್ಥನ ಆಡಳಿತದಲ್ಲಿ ಅವಿಭಕ್ತ ಸಾಮೂಹಿಕ ಜೀವನವನ್ನು ಸಾಗಿಸುವುದು; ಎರಡನೆಯ ತತ್ವವೆಂದರೆ, ಬೇರೆ ಹೋಗುವ ಸಂದರ್ಭದಲ್ಲಿ ಆಸ್ತಿಯನ್ನು ವಿಭಜಿಸುವುದಾದರೆ ಬರುವಷ್ಟು ಪಾಲನ್ನು ತನ್ನ ತಂದೆಯ ಆಸ್ತಿಯಲ್ಲಿ ಪ್ರತಿಯೊಬ್ಬ ಗಂಡೂ ಪಡೆಯುವ ಹಕ್ಕುಳ್ಳವನಾಗಿರುವುದು. ವ್ಯಕ್ತಿಯ ಸತತ ಮುಂಬರಿಯುವ ಪ್ರತ್ಯೇಕ ಹಕ್ಕಿಂದೊಡಗೂಡಿದ ಈ ಸಾಮುದಾಯಿಕ ಐಕ್ಯವೆಂಬುದು ಭಾರತೀಯ ಬಾಳು-ಬಗೆಗಳ ಸಾಮರಸ್ಯೋನ್ಮುಖತೆಯ ಉದಾಹರಣೆ. ಅದು ಮೂಲಭೂತ ಪ್ರವೃತ್ತಿಗಳನ್ನು ಮಾನ್ಯಮಾಡುವುದು ಮತ್ತು ಅವನ್ನು ಸಮರಸಗೊಳಿಸುವ ಪ್ರಯತ್ನವೆಸಗುವುದು—ಅವು ತಮ್ಮ ವ್ಯವಹಾರಮಾನದಲ್ಲಿ ಎಷ್ಟೇ ವಿರುದ್ಧವಾಗಿ ತೋರಿದರೂ ಆ ಯತ್ನವನ್ನು ಬಿಡದಿರುವುದು ಅದರ ಲಕ್ಷಣ. ಇದೇ ಸಮರಸಪ್ರವೃತ್ತಿಯು ಭಾರತದ ಸಾಮಾಜಿಕ ರಾಜಕೀಯ ಪದ್ಧತಿಯ ಎಲ್ಲ ಅಂಗಗಳಲ್ಲೂ ಕಂಡುಬರುವುದಲ್ಲದೆ, ಇದು ಅನೇಕ ಬಗೆಗಳಿಂದ ದೇವಸತ್ತೆ, ರಾಜಸತ್ತೆ, ಧನಿಕಸತ್ತೆ, ಶ್ರೀಮಂತರ ಸತ್ತೆ ಮತ್ತು ಪ್ರಜಾಸತ್ತೆಗಳ ಪ್ರವೃತ್ತಿಗಳನ್ನು ಒಟ್ಟಿಗೆ ಸಮರಸಗೊಳಿಸಲುಜ್ಜುಗಿಸಿ, ಆ ಯಾವ ಒಂದರ ಲಕ್ಷಣವನ್ನೂ ಪ್ರಧಾನವಾಗಿ ತಳೆಯದೆ, ಎಲ್ಲವಕ್ಕೂ ಸ್ಥಳ ಕೊಡುವ ಬಗೆಯನ್ನಳವಡಿಸಿಕೊಳ್ಳದೆ, ನಿರೋಧ ಸಮತೋಲಗಳ ಬಗೆಯಿಂದಾಗಲಿ ಬೌದ್ಧಿಕ ರಚನಾವಿಧಾನದಿಂದಾಗಲಿ ಎಲ್ಲವನ್ನೂ ಒಟ್ಟುಗೂಡಿಸಹೋಗದೆ ನಾನಾಪ್ರಕಾರ ಸಮನ್ವಿತವಾದ ಸಾಮಾಜಿಕ ಬಗೆ ಮತ್ತು ಭಾವಗಳ ಮೂಲ ಪ್ರವೃತ್ತಿಗಳ ನೈಸರ್ಗಿಕ ಜಟಿಲರೂಪವನ್ನು ತಾಳಿತು.

ಪ್ರತ್ಯೇಕ ಧಾರ್ಮಿಕ ಸಮುದಾಯದ ಹುಟ್ಟು:

ಮತ್ತೊಂದು ಬದಿಗೆ ಭಾರತೀಯ ಜೈವಿಕ ಚೇತನೆಯ ತುತ್ತತುದಿಯಾದ ತಪೋಮಯ, ಶುದ್ಧ ಆಧ್ಯಾತ್ಮಿಕ ರೂಪ ಸಾಗಿತ್ತು. ಈ ಧಾರ್ಮಿಕ

ಸಮಷ್ಟಿಯೂ ಸಾಮುದಾಯಿಕ ಸ್ವರೂಪದ್ದಾಗಿತ್ತು. ಆದಿಯ ವೈದಿಕ ಸಮಷ್ಟಿಯಲ್ಲಿ ಚರ್ಚೆಗಾಗಲಿ, ಧಾರ್ಮಿಕ ಸಮುದಾಯಕ್ಕಾಗಲಿ ಎಡೆಯಿರ ಲಿಲ್ಲ. ಏಕೆಂದರೆ ಅದರ ಪದ್ಧತಿಯಲ್ಲಿ ಜನನಿಕಾಯವು ಒಂದೇ ಒಂದಾದ ಸಾಮಾಜಿಕ-ಧಾರ್ಮಿಕ ಒಟ್ಟಾಗಿತ್ತಲ್ಲದೆ, ಅಲ್ಲಿ ಧಾರ್ಮಿಕ-ಲೌಕಿಕ, ಸಾಮಾನ್ಯ ಮನುಷ್ಯ-ದೇವಕುಲಿಕ ಎಂಬಂತಹ ಭೇದವಿರಲಿಲ್ಲ. ಅನಂತರ ಯಾವ ವಿಧವಾಗಿ ಬೆಳೆದರೂ ಹಿಂದುಧರ್ಮವು ಇಡಿಯಲ್ಲಿ ಅಥವಾ ಅಡಿ ಯಲ್ಲಿ ಈ ತತ್ವವನ್ನು ಹಿಡಿದೇ ನಡೆದುಬಂದಿದೆ. ತದ್ವಿರುದ್ಧವಾಗಿ ಹೊತ್ತಿಗೆ ಸರಿಯಾಗಿ ಬಂದ ಇಹ-ಪರ ಜೀವನಗಳನ್ನು ಪ್ರತ್ಯೇಕಿಸುವ ವರ್ಧಮಾನ ತಾಪಸ ಪ್ರವೃತ್ತಿ ಪ್ರತ್ಯೇಕವಾದ ಧಾರ್ಮಿಕ ಸಮಷ್ಟಿಯನ್ನು ನಿರ್ಮಿಸಲು ಪ್ರವರ್ತಿಸಿದ್ದಕ್ಕೆ ಬೌದ್ಧ-ಜೈನ ಮತಗಳೂ ಆಚಾರಗಳೂ ಉದಿಸಿದ್ದು ನಿದ ರ್ಶನವಾಗಿದೆ. ಬೌದ್ಧ ಮತಸಂಪ್ರದಾಯವು ಸಂಘಟಿತ ಧಾರ್ಮಿಕ ಸಮ ಷ್ಟಿಯ ಪೂರ್ಣರೂಪದ ಮೊದಲ ಬೆಳವಣಿಗೆ. ಇಲ್ಲಿ ಬುದ್ಧನು ಸರಳವಾಗಿ ಭಾರತೀಯ ಸಮಾಜ ಹಾಗೂ ರಾಜ್ಯಪದ್ಧತಿಗಳ ಜ್ಞಾತ ತತ್ವಗಳನ್ನು ತಾಪಸ ಜೀವನಕ್ಕೆ ಅನ್ವಯಿಸಿದನು. ಆತ ಸೃಜಿಸಿದ ವರ್ಗವ್ಯವಸ್ಥೆ ಧರ್ಮಸಂಘ ವಾಗುವ ಗುರಿಯುಳ್ಳದ್ದಾಗಿತ್ತು ಮತ್ತು ಪ್ರತಿಯೊಂದು ಮಠವೂ ತನ್ನ ಜೀವನದ ಎಲ್ಲ ನಿಯಮ, ಲಕ್ಷಣ, ರಚನೆಗಳಲ್ಲೂ ಬೌದ್ಧರು ತಿಳಿದುಕೊಂಡ ಧರ್ಮವನ್ನು ಕಾಯ್ದುಕೊಳ್ಳುವುದರ ಮೇಲೆ ನಿಂತ ಹಾಗೂ ಅದರ ವ್ಯಕ್ತ ರೂಪವಾದ ಸಂಯುಕ್ತ ಸಾಮಷ್ಟಿಕ ನಿಕಾಯವಾಗುವ ಉದ್ದೇಶವುಳ್ಳದ್ದಾ ಗಿತ್ತು. ಸಮಸ್ತ ಹಿಂದುಸಮಾಜದ ತತ್ವ ಹಾಗೂ ಸಿದ್ಧಾಂತ ಇದೇ; ಆದರೆ ಆ ತತ್ವ-ಸಿದ್ಧಾಂತಗಳಿಗೆ ಆಧ್ಯಾತ್ಮಿಕ ಜೀವನಕ್ಕೆ ಮತ್ತು ಶುದ್ಧ ಧಾರ್ಮಿಕ ನಿಕಾಯಕ್ಕೆ ಮಾತ್ರ ಸಾಧ್ಯವಾದ ಹೆಚ್ಚಿನ ತೀವ್ರತೆಯನ್ನು ಕೊಡಲಾಗಿತ್ತು. ಅದು ತನ್ನ ವ್ಯವಹಾರಗಳನ್ನು ಕೂಡ ಭಾರತೀಯ ಸಾಮಾಜಿಕ-ರಾಜ ಕೀಯ ಸಾಮುದಾಯಿಕ ಏಕತೆಗಳಂತೆಯೇ ಸಾಗಿಸಿಕೊಂಡು ಹೋಗುತ್ತಿತ್ತು. ಅದರ ಸಭೆಯೊಂದು ಧರ್ಮ ಹಾಗೂ ಅದರ ಪ್ರಯೋಗದ ಚರ್ಚಾಸ್ಪದ ಪ್ರಶ್ನೆಗಳನ್ನು ಚರ್ಚಿಸಿ ಗಣರಾಜ್ಯದ ಸಭಾಭವನದಲ್ಲಿಯಂತೆ ಮತಗಣನೆಯ ಮೇಲೆ ಸಾಗುತ್ತಿತ್ತು; ಆದರೂ ಅತಿ ಶುದ್ಧ ಲೋಕತಂತ್ರಾತ್ಮಕ ಕ್ರಮದಲ್ಲಿಯ ದೋಷಗಳನ್ನು ದೂರವಿಡುವ ದೃಷ್ಟಿಯಿಂದ ಅದು ಒಂದು ಪರಿಮಾಪಕ

ನಿಯಂತ್ರಣಕ್ಕೊಳಗಾಗಿತ್ತು. ಹೀಗೆ ಒಮ್ಮೆ ಸುಧೃಢವಾಗಿ ಪ್ರತಿಷ್ಠಿತವಾದ ಮಠಪದ್ಧತಿಯನ್ನು-ಅದರ ವಿಸ್ತೃತ ಸಂಘಟನೆಯನ್ನು ಬಿಟ್ಟು-ಸನಾತನ ಧರ್ಮ ತೆಗೆದುಕೊಂಡುಬಿಟ್ಟಿತು. ಈ ಧಾರ್ಮಿಕ ಸಮಷ್ಟಿಗಳು ತಾವಿದ್ದಲ್ಲೆಲ್ಲ ಶಾಂಕರ ವ್ಯವಸ್ಥೆಯಂತೆ ಹಳೆಯ ಬ್ರಾಹ್ಮಣ ಪದ್ಧತಿಗಳ ವಿರುದ್ಧವಾಗಿ ಸಮಷ್ಟಿಯ ಸಾಮಾನ್ಯ ನಿಕಾಯಕ್ಕೆ ಒಂದು ಬಗೆಯ ಮಠೀಯ ಮುಖಂಡ ಎನಿಸಲು ಹೆಣಗಿದವು; ಆದರಿವು ಯಾವ ರಾಜಕೀಯ ಸ್ಥಾನವನ್ನೂ ಆಕ್ರಮಿಸಲಿಲ್ಲ. ಆದುದರಿಂದ ಭಾರತದ ರಾಜಕೀಯ ಇತಿಹಾಸದಲ್ಲಿ ಚರ್ಚೆ ಮತ್ತು ಸರಕಾರಗಳಲ್ಲಿಯ ಹೋರಾಟವೆಂಬುದು ಇಲ್ಲವೇ ಇಲ್ಲ.

ಸ್ವಯಂನಿರ್ಣಯ ಮತ್ತು ಸ್ವಯಂಶಾಸನಗಳ ಮೂಲತತ್ವ:

ಆದುದರಿಂದ ದೊಡ್ಡ ರಾಜ್ಯ ಸಾಮ್ರಾಜ್ಯಗಳ ಕಾಲವಲ್ಲೂ ಪ್ರಾಚೀನ ಭಾರತೀಯ ಸಮಗ್ರ ಜೀವನ ತನ್ನ ಪ್ರಾಥಮಿಕ ತತ್ವವನ್ನೂ ಸಾರಭೂತ ಆಚಾರವನ್ನೂ ಉಳಿಸಿಕೊಂಡಿತ್ತಲ್ಲದೆ ಅದರ ಸಾಮಾಜಿಕ ರಾಜ್ಯಪದ್ಧತಿಯು ಮೂಲತಃ ಸ್ವಯಂನಿರ್ಣಯಾಧಿಕಾರವುಳ್ಳ ಸ್ವಶಾಸಕವಾದ ನಾನಾಪ್ರಕಾರ ಪರಿಪುಷ್ಟ ಪದ್ಧತಿಯಾಗಿಯೇ ಉಳಿದಿತ್ತು. ಉಳಿದ ಕಡೆಯಂತೆಯೇ ಇಲ್ಲಾದರೂ ಅರ್ಧ ಹೆಚ್ಚು ನಿಯಮಬದ್ಧವೂ ವೈಜ್ಞಾನಿಕವಾಗಿ (ಶಿಥಿಲತರ ನೈಸರ್ಗಿಕ ಜೀವನ-ಸಮವಾಯವುಳ್ಳ ಕೆಲ ಸಣ್ಣ ಪ್ರದೇಶಗಳನ್ನುಳಿದು) ಮತ್ತಷ್ಟು ಸಮರ್ಪಕ ಸಮವಾಯವನ್ನೊಡರಿಸಬೇಕೆಂಬ ವ್ಯಾವಹಾರಿಕ ವಿಚಾರದ ಆವಶ್ಯಕತೆಯಿಂದ– ಮತ್ತರ್ಧ ಹೆಚ್ಚು ಒತ್ತಾಸೆಯಿಂದ ಏಕಮಾತ್ರ ಕೇಂದ್ರಾಧಿಕಾರದ ಅಂಕೆಯಲ್ಲಿ ವ್ಯವಸ್ಥಿತ ಸೈನಿಕ ಆಕ್ರಮಣ, ಸಂರಕ್ಷಣ ಹಾಗೂ ಅಂತಾರಾಷ್ಟ್ರೀಯ ಕಾರ್ಯಗಳು ಸಾಗಬೇಕೆಂಬ ಅಗತ್ಯದ ಮೂಲಕ ಈ ಪದ್ಧತಿಯು ಮೇಲ್ವಿಚಾರಣೆಗೆ ಸುಸಂಘಟಿತ ಸರಕಾರಿ ಪ್ರಾಧಿಕಾರ ವಿಕಾಸವಾಗುವುದು ಅವಶ್ಯವೆನಿಸಿತು. ಮೊದಲಿನ ಬೇಡಿಕೆಯನ್ನು ಪೂರಯಿಸಲು ಸ್ವತಂತ್ರ ಗಣರಾಜ್ಯ ಸರಕಾರದ ವಿಸ್ತರಣ ಸಾಕಾಗಿತ್ತು; ಏಕೆಂದರೆ, ಅದಕ್ಕೆ ಸುಪ್ತ ಶಕ್ತಿಯೂ ಆವಶ್ಯಕ ಸಂಸ್ಥೆಗಳೂ ಇದ್ದವು– ಆದರೆ ಹೆಚ್ಚು ಸಂಕ್ಷಿಪ್ತವೂ ಸುಲಭವಾಗಿ ಸ್ಥೈರ್ಯವೂ ಆದ ಕೇಂದ್ರೀಕರಣವುಳ್ಳ ರಾಜಪ್ರಭುತ್ವದ ಕ್ರಮವು ಸದ್ಯೋಲಭ್ಯವೂ ಸುವ್ಯವಸ್ಥಾಪನೀಯವೂ ಆದ ಉಪಾಯವನ್ನೂ ಹೆಚ್ಚು ಸುಗ್ರಹವೂ

ಆಪಾತತಃ ಹೆಚ್ಚು ಸಮರ್ಥವೂ ಆದ ರಾಜ್ಯಯಂತ್ರವನ್ನೂ ಒದಗಿಸಿ ಕೊಟ್ಟಿತು. ಮೊದಲಿಂದಲೂ ಆಗ ದೇಶಕ್ಕಿಂತ ಹೆಚ್ಚಾಗಿ ಖಂಡದಂತಿದ್ದ ಭಾರತದ ಸರ್ವೋಚ್ಚ ಜಟಿಲವಾದ, ಎಂದಿನಿಂದಲೂ ಇದ್ದ ರಾಜಕೀಯ ಏಕೀಕರಣವನ್ನೊಳಗೊಂಡ ಬಾಹ್ಯಸಿದ್ಧಿಗೆ ಆಕ್ರಮಣಕ್ಕಿಂತ ಹೆಚ್ಚಾಗಿ ಸಂರಕ್ಷಣೆಗೆ ಬೇಕಾದ ಸಾಮರ್ಥ್ಯ ಬೆಳೆಸಿಕೊಳ್ಳಲನುಗುಣವಾದ ಗಣರಾಜ್ಯ ಪದ್ಧತಿಯು, ಎಷ್ಟೇ ದಕ್ಷ ಸೈನಿಕ ಸಂಘಟನೆ ಇದ್ದರೂ, ಸಾಲದಾಯ್ತು. ಆದುದರಿಂದ ಉಳಿದೆಡೆಯಲ್ಲಿ ಹೇಗೋ ಹಾಗೇ ಭಾರತದಲ್ಲೂ ರಾಜಪ್ರಭುತ್ವದ ಸಮರ್ಥ ರೂಪವು ಮಿಕ್ಕೆಲ್ಲವನ್ನೂ ಕಬಳಿಸಿ ಕೊನೆಯದಾಗಿ ಉಳಿಯಿತು. ಅದೇ ವೇಳೆಗೆ ತನ್ನ ಮೂಲಭೂತ ಸಂಸ್ಥೆಗಳಿಗೂ ಆದರ್ಶಗಳಿಗೂ ನಿಷ್ಠವಾಗಿದ್ದ ಭಾರತಮನ ಜನಭಾವಾನುಗುಣವಾದ ಸಾಮುದಾಯಿಕ ಸ್ವಶಾಸನದ ತಳಹದಿಯನ್ನು ಉಳಿಸಿಕೊಂಡು, ರಾಜಪ್ರಭುತ್ವದ ಸರಕಾರವನ್ನು ನಿರಂಕುಶ ಪ್ರಭುತ್ವವಾಗಿ ಬೆಳೆಯಲು ಅಥವಾ ತನ್ನ ಯುಕ್ತ ಕೃತ್ಯಗಳನ್ನು ಮೀರಿ ಹೋಗಲು ಬಿಡದೆ, ಸಮಾಜ ಜೀವನವನ್ನದು ಜಡಯಂತ್ರವನ್ನಾಗಿ ಮಾಡುವುದರ ವಿರುದ್ಧವಾಗಿ ತಾನು ಜಯಪ್ರದವಾಗಿ ನಿಂತಿತು. ಸುದೀರ್ಘವಾದ ಅವನತಿಕಾಲದಲ್ಲಷ್ಟೇ ನಾವು ರಾಜಸರಕಾರಕ್ಕೂ ಸ್ವಯಂನಿರ್ಣಯಾಧಿಕಾರವುಳ್ಳ ಸಾಮುದಾಯಿಕ ಜನಜೀವನಕ್ಕೂ ನಡುವೆ ಇರುವ ಸ್ವತಂತ್ರ ಸಂಸ್ಥೆಗಳು ಅದೃಶ್ಯವಾಗಲು ಪ್ರವರ್ತಿಸುವ ಇಲ್ಲವೆ ತಮ್ಮ ಹಳೆಯ ಶಕ್ತ್ಯುತ್ಸಾಹಗಳನ್ನು ಬಹಳಮಟ್ಟಿಗೆ ಕಳೆದುಕೊಂಬ ದೃಶ್ಯವನ್ನೂ ವೈಯಕ್ತಿಕ ಆಳಿಕೆಯ, ನೌಕರಶಾಹಿಯ ಮತ್ತು ಎದ್ದುಕಾಣುವ ಕೇಂದ್ರೀಕೃತ ಪ್ರಾಧಿಕಾರದ ದುಷ್ಪರಿಣಾಮಗಳನ್ನೂ ಕೆಲಮಟ್ಟಿಗೆ ಕಾಣುತ್ತೇವೆ. ಭಾರತೀಯ ರಾಜ್ಯ ಪದ್ಧತಿಯ ಪ್ರಾಚೀನ ಪರಂಪರೆಗಳು ಎಲ್ಲಿಯವರೆಗೆ ಉಳಿದಿದ್ದವೋ, ಎಷ್ಟರ ಮಟ್ಟಿಗೆ ಅವು ಮುಖ್ಯವೂ ಪರಿಣಾಮಕರವೂ ಆಗಿ ಉಳಿದವೋ ಅಲ್ಲಿಯವರೆಗೆ ಮತ್ತು ಅಷ್ಟುಮಟ್ಟಿಗೆ ಈ ದುಷ್ಪರಿಣಾಮಗಳು ಆಕಸ್ಮಿಕವೂ ವಿರಲವೂ ಆಗಿದ್ದವು. ಇಲ್ಲವೆ ಅಳತೆಮೀರಿ ಹೋಗಿದ್ದಿಲ್ಲ. ಪರದೇಶೀಯ ಆಕ್ರಮಣ ಮತ್ತು ವಿಜಯ, ಹಾಗೂ ಭಾರತೀಯ ಪ್ರಾಚೀನ ಸಂಸ್ಕೃತಿಯ ಮಂದಗತಿಯಿಂದಾದ ಅವನತಿ ಮತ್ತು ಆತ್ಯಂತಿಕ ಕ್ಷಯ– ಇವುಗಳ ಸಂಯೋಗವೇ ಪ್ರಾಚೀನ ಕಟ್ಟಡದ ಗಣ್ಯ ಭಾಗಗಳು ಬಿದ್ದು ಉರುಳುವುದಕ್ಕೂ ಜನತೆಯ

ಸಾಮಾಜಿಕ– ರಾಜಕೀಯ ಜೀವನದ ಅಧಃಪಾತ, ವಿಘಟನಗಳು (ಪುನ ರುಜ್ಜೀವನಕ್ಕೆ ಅಥವಾ ಹೊಸ ಸೃಷ್ಟಿಗೆ ಸಾಕಷ್ಟು ಸಾಧನ ಸಾಮಗ್ರಿಗಳಿ ಲ್ಲವಂತೆ) ಸಂಭವಿಸಿದ್ದಕ್ಕೂ ಕಾರಣ.

ನ್ಯಾಯಾಲಯುಗಳು:

ವಿಕಾಸದ ಉಚ್ಛ್ರಾಯದಶೆಯಲ್ಲಿ ಮತ್ತು ಭಾರತೀಯ ನಾಗರಿಕ ತೆಯ ಮಹಾಸುದಿನಗಳಲ್ಲಿ ಅತಿ ದಕ್ಷವೂ ಸಾಮುಷ್ಟಿಕ ಸ್ವಶಾಸನವನ್ನು ಸ್ಥಿಮಿತತೆ ಸುವ್ಯವಸ್ಥೆಗಳೊಂದಿಗೆ ಅತಿ ಸಂಪೂರ್ಣವಾಗಿ ಜೋಡಿಸಿದ್ದೂ ಆದ ಪ್ರಶಂಸನೀಯ ರಾಜಕೀಯ ಪದ್ಧತಿಯಿದ್ದುದನ್ನು ನಾವು ಕಾಣುತ್ತೇವೆ. ಸರ ಕಾರವು ತನ್ನ ಪ್ರಶಾಸನೀಯ, ನ್ಯಾಯಿಕ, ವಿತ್ತೀಯ ಮತ್ತು ಸಂರಕ್ಷಕ ಕಾರ್ಯಗಳನ್ನು ಜನತೆಯ ಮತ್ತು ಒಂದೇ ಶಾಖೆಯಲ್ಲಿಯ ಅದರ ಅಂಗ ನಿಕಾಯಗಳ ಹಕ್ಕು ಹಾಗೂ ಸ್ವತಂತ್ರ ಚಟುವಟಿಕೆಗಳನ್ನು ನಾಶಮಾಡದೆ ಅಥವಾ ಅವುಗಳ ಮೇಲೆ ದಬ್ಬಾಳಿಕೆ ನಡೆಸದೆ ಸಾಗಿಸಿಕೊಂಡು ಹೋಗು ತ್ತಿತ್ತು. ರಾಜಧಾನಿಯಲ್ಲಿ ಮತ್ತು ಗ್ರಾಮಾಂತರಗಳಲ್ಲಿ ಇದ್ದ ರಾಜನ ನ್ಯಾಯಾಲಯುಗಳು ಸರ್ವೋಚ್ಚ ನ್ಯಾಯಿಕ ಪ್ರಾಧಿಕಾರವುಳ್ಳವಾಗಿದ್ದು ಇಡಿ ರಾಜ್ಯದ ನ್ಯಾಯಪ್ರಶಾಸನವನ್ನು ಸಮವೇತಗೊಳಿಸುವಲ್ಲಿ ಹಳ್ಳಿ ಪಟ್ಟಣಗಳ ಪ್ರಾದೇಶಿಕ ಸಮಷ್ಟಿಗಳು ತಮ್ಮ ಕೋರ್ಟುಗಳಿಗಿತ್ತಿದ್ದ ನ್ಯಾಯಶಕ್ತಿಗಳಲ್ಲಿ ಅನ್ಯಾಯವಾಗಿ ಕೈಹಾಕುತ್ತಿದ್ದಿಲ್ಲ. ರಾಜಪದ್ಧತಿ ಕೂಡ ಸಂಘ, ಜಾತಿ, ಕುಟುಂಬ ಗಳ ಕೋರ್ಟುಗಳೊಡನೆ ಸಂಬಂಧವಿಟ್ಟುಕೊಂಡು ಸಾಕಷ್ಟು ನ್ಯಾಯವಿತ ರಣ ಸಾಧನವಾಗಿತ್ತಲ್ಲದೆ, ಹೆಚ್ಚು ಗಂಭೀರವಾದ ದಂಡನೀಯ ಅಪರಾಧ ಗಳ ತೀರ್ಮಾನವನ್ನಷ್ಟನ್ನೇ ತನ್ನ ವಿಶಿಷ್ಟ ನಿಯಂತ್ರಣದಲ್ಲಿಟ್ಟುಕೊಂಡಿತ್ತು. ಹಳ್ಳಿ ಪಟ್ಟಣಗಳ ಪ್ರಾದೇಶಿಕ ಘಟಕಗಳ ಪ್ರಶಾಸನೀಯ ಮತ್ತು ವಿತ್ತೀಯ ಶಕ್ತಿ ಗಳಿಗೆ ಅದೇ ಮೇರೆಗೆ ಮನ್ನಣೆ ಕೊಡಲಾಗಿತ್ತು. ಗ್ರಾಮ ಪಟ್ಟಣಗಳಲ್ಲಿಯ ರಾಜ ನಿಯುಕ್ತ ರಾಜ್ಯಪಾಲರೂ ಅಧಿಕಾರಿಗಳೂ ಜನತೆ ಹಾಗೂ ಅದರ ಸಭೆಗಳು ನೇಮಿಸಿದ ನಾಗರಿಕ ರಾಜ್ಯಪಾಲ, ನೌಕರ ಮತ್ತು ಸಮಷ್ಟಿಮುಖ್ಯಸ್ಥ ರೊಡನೆಯೇ ಇರುತ್ತಿದ್ದರು. ರಾಷ್ಟ್ರದ ಧಾರ್ಮಿಕ ಸ್ವಾತಂತ್ರ್ಯ, ಸುಪ್ರತಿಷ್ಠಿತ ಆರ್ಥಿಕ ಮತ್ತು ಸಾಮಾಜಿಕ ಜೀವನಗಳಲ್ಲಿ ಸರಕಾರ ಹಸ್ತಕ್ಷೇಪ ಮಾಡು

ತ್ತಿದ್ದಿಲ್ಲ.; ಸಾಮಾಜಿಕ ವ್ಯವಸ್ಥೆಯ (ಚಾತುರ್ವರ್ಣ್ಯದ) ಸಂರಕ್ಷಣೆ ಹಾಗೂ ರಾಷ್ಟ್ರದ ಎಲ್ಲ ಚಟುವಟಿಕೆಗಳೂ ಸರಿಯಾಗಿ ನಡೆಯಲು ಬೇಕಾದ ಆವಶ್ಯಕ ಮೇಲ್ವಿಚಾರಣೆ, ಬೆಂಬಲ, ಸಮವಾಯ ಮತ್ತು ಅನುಕೂಲಗಳನ್ನು ಒದಗಿಸುವಷ್ಟಕ್ಕೇ ತನ್ನ ಕರ್ತವ್ಯವನ್ನದು ಪರಿಮಿತಗೊಳಿಸಿಕೊಂಡಿತ್ತು. ಅದು ಯಾವಾಗಲೂ ತಿಳಿದುಕೊಂಡು ತನಗಿದ್ದ ಸದವಕಾಶಗಳನ್ನು ವೈಭವಪೂರ್ಣವಾಗಿ ಉಪಯೋಗಿಸಿಕೊಂಡು ಭಾರತದ ಸಾಮುದಾಯಿಕ ಮನ ಆಗಲೇ ನಿರ್ಮಿಸಿದ್ದ ವಾಸ್ತುಶಿಲ್ಪ, ಕಲೆ, ಸಂಸ್ಕೃತಿ, ಪಾಂಡಿತ್ಯ, ಸಾಹಿತ್ಯಗಳಿಗೆ ಒಳ್ಳೆಯ ಉದಾರ ಪ್ರೋತ್ಸಾಹವೀಯುವ ಸದಾಕರವಾಯಿತು. ರಾಜನ ವ್ಯಕ್ತಿತ್ವದಲ್ಲಿ ಗಂಭೀರ ಮತ್ತು ಸಮರ್ಥ ಮುಖ್ಯಸ್ಥಚಿಹ್ನವೂ ಅವನ ಪ್ರಶಾಸನ ಪದ್ಧತಿಯಲ್ಲಿ (ಸ್ವೇಚ್ಛಾವರ್ತನೆಯ ನಿರಂಕುಶ ಪ್ರಭುತ್ವವಾಗಲಿ, ನೌಕರಶಾಹಿಯಾಗಲಿ, ಜೀವನವನ್ನು ದಮಿಸುವ ಅಥವಾ ಬದಲಿಸುವ ಯಾಂತ್ರಿಕ ಜಡದರ್ಪವಾಗಲಿ ಇಲ್ಲದೆ) ಉನ್ನತವೂ ಸ್ತಿಮಿತವೂ ಆದ ನಾಗರಿಕತೆಯ ಮತ್ತು ಸ್ವತಂತ್ರವೂ ಸಚೇತನವೂ ಆದ ಜನತೆಯ ನಿರ್ಮಾಣದ ಸರ್ವೋಚ್ಚ ಸಾಧನವತ್ತೆಯೂ ಕಂಡುಬರುತ್ತಿದ್ದವು.

ನಾಲ್ಕನೆಯ ಅಧ್ಯಾಯ

ರಾಷ್ಟ್ರೀಯ ಹಾಗೂ ರಾಜಕೀಯ ಐಕ್ಯದ ಅಭಾವ:

ವಿಷಯಗಳ ಸರಿಯಾದ ತಿಳಿವಳಿಕೆ ಮತ್ತು ಪ್ರಾಚೀನ ಭಾರತೀಯ ಸಾಮಾಜಿಕ-ರಾಜಕೀಯ ಪದ್ಧತಿಯ ಲಕ್ಷಣ ಹಾಗೂ ತತ್ವಗಳ ಸರಿಯಾದ ಅರ್ಥ ಆದರೆ ಅತಿಭೌತತತ್ವಜ್ಞಾನ, ಧರ್ಮ, ಕಲೆ ಹಾಗೂ ಸಾಹಿತ್ಯಗಳಲ್ಲಿ ಗಣ್ಯತೆವೆತ್ತರೂ ಭಾರತೀಯ ಬುದ್ಧಿಯು ಜೀವನದ ಸಂಘಟನೆಯಲ್ಲಿ ಅಯುಕ್ತ, ವ್ಯಾವಹಾರಿಕ ಚಾತುರ್ಯದ ಕಾರ್ಯಗಳಲ್ಲಿ ಕೀಳು ಮತ್ತು ವಿಶೇಷತಃ ರಾಜಕೀಯ ಪ್ರಯೋಗ ವಿಜ್ಞಾನದಲ್ಲಿ ಬಂಜೆ, ಅದರ ಅಭಿಲೇಖವು ಯೋಗ್ಯ ರಾಜಕೀಯ ರಚನಾವಿಧಾನ–ವಿಚಾರ–ಕಾರ್ಯ ಇಲ್ಲದ್ದು ಎಂಬ ಪಾಶ್ಚಾತ್ಯ ವಿಮರ್ಶಕರ ವಾದಕ್ಕೆ ಉತ್ತರದೊರಕುತ್ತದೆ. ತದ್ವಿರುದ್ಧವಾಗಿ, ಭಾರತೀಯ ನಾಗರಿಕತೆಯು ಒಂದು ಪ್ರಶಂಸನೀಯ ರಾಜಕೀಯ ಪದ್ಧತಿಯನ್ನು ವಿಕಾಸಗೊಳಿಸಿತು; ತನ್ನ ನಾಗರಿಕ ವ್ಯವಹಾರ ರಚನೆಯ ಪ್ರಯತ್ನದಲ್ಲಿ ಮಾನವ ಮನ ಅಂತ ರಾಜಸತ್ತೆಯ, ಪ್ರಜಾಸತ್ತೆಯ ಮತ್ತು ಇತರ ತತ್ವಗಳನ್ನೂ ಪ್ರವೃತ್ತಿಗಳನ್ನೂ ಬಹಳ ಬುದ್ಧಿವಂತಿಕೆಯಿಂದ ಸುದೃಢವಾಗಿಯೂ ಚಿರಸ್ಥಾಯಿಯಾಗಿಯೂ ರೂಪಿಸಿತ್ತು; ಮತ್ತು ಆಧುನಿಕ ಯೌರೋಪ್ಯ ಸರಕಾರದ ದೋಷವೆನಿಸಿರುವ ಅತಿ ಯಾಂತ್ರೀಕರಣದಿಂದ ತಪ್ಪಿಸಿಕೊಂಡಿತ್ತು. ಪಾಶ್ಚಾತ್ಯರ ವಿಕಾಸವಾದದ ದೃಷ್ಟಿಯಿಂದ ಮತ್ತು ಅವರ ಪ್ರಗತಿಕಲ್ಪನೆಯ ನಿಲುಮೆಯಿಂದ ಎತ್ತಬಹುದಾದ ಆಕ್ಷೇಪಗಳನ್ನು ಅನಂತರದಲ್ಲಿ ವಿವೇಚಿಸಲಾಗುತ್ತದೆ.

ಆದರೆ ರಾಜನೀತಿಯ ಇನ್ನೊಂದು ಮುಖದಲ್ಲಿ ಭಾರತದ ರಾಜಕೀಯ ಮನ ಸಂಪೂರ್ಣ ಅಪಜಯ ಹೊಂದಿದ ದಾಖಲೆಯನ್ನು ತೋರಿಸಿದೆ ಎನ್ನಬಹುದು. ಅದು ಸಂವರ್ಧಿಸಿದ ಸಂಘಟನೆ ಸ್ಥಿಮಿತತೆಗೂ ಪರಿಣಾಮಕರ ಆಡಳಿತಕ್ಕೂ ಪ್ರಾಚೀನ ಪರಿಸ್ಥಿತಿಯಲ್ಲಿ ಜನತೆಯ ಸಾಮುಷ್ಟಿಕ ವ್ಯವಸ್ಥೆ, ಸ್ವಾತಂತ್ರ್ಯ ಹಾಗೂ ಸುಸ್ಥಿತಿಗಳನ್ನು ಸಾಧಿಸಿಕೊಂಬುದಕ್ಕೂ ಪ್ರಶಸ್ತವಾಗಿರಬಹುದಾದರೂ ಅದರ ಜನಾಂಗಗಳಲ್ಲಿ ಪ್ರತಿಯೊಂದೂ ಪ್ರತ್ಯೇಕವಾಗಿಯೂ

ಚೆನ್ನಾಗಿಯೂ ಆಳಲ್ಪಡುತ್ತಿದ್ದರೂ ಸಮೃದ್ಧವಾಗಿದ್ದರೂ ಇಡಿ ದೇಶದಲ್ಲಿ ಉಚ್ಚ ಮಟ್ಟದ ಸಂಸ್ಕೃತಿ-ನಾಗರಿಕತೆಗಳ ಕೃತ್ಯನಿರ್ವಾಹಕ್ಕೆ ಸುರಕ್ಷಿತ ಆವರಣ ನಿರ್ಮಿತವಾಗಿದ್ದರೂ ಭಾರತದ ರಾಷ್ಟ್ರೀಯ ಮತ್ತು ರಾಜಕೀಯ ಏಕೀಕರಣ ವನ್ನು ಒಡರಿಸುವುದರಲ್ಲೂ ಕೊನೆಯಲ್ಲಿ ವಿದೇಶೀಯ ದಾಳಿಯ ವಿರುದ್ಧ ಅದನ್ನು ಸಾಧಿಸುವುದರಲ್ಲೂ ಸೋತು, ತನ್ನ ಸಂಸ್ಥೆಗಳ ನಾಶಕ್ಕೂ ದೇಶದ ಸುದೀರ್ಘ ಕಾಲದ ದಾಸ್ಯಕ್ಕೂ ಕಾರಣವಾಯಿತು. ಒಂದು ಸಮಾಜದ ರಾಜಕೀಯ ಪದ್ಧತಿಯನ್ನು ಮೊಟ್ಟಮೊದಲು ಅದು ಒದಗಿಸಿದ ಸ್ತಿಮಿತತೆ, ಸಮಭಿವೃದ್ಧಿ, ಜನತೆಗದು ಕೊಟ್ಟ ಆಂತರಿಕ ಸ್ವಾತಂತ್ರ್ಯ ಮತ್ತು ಸುವ್ಯವಸ್ಥೆಗಳ ಮೇಲಿಂದ ಲ್ಲದೆ ಇತರ ಸರಕಾರಗಳ ವಿರುದ್ಧ ಸ್ಥಾಪಿಸಿದ ಸುರಕ್ಷಿತತೆ, ಹೊರಗಿನ ಸ್ಪರ್ಧಾ ಲುಗಳ ಹಾಗೂ ಶತ್ರುಗಳ ವಿರುದ್ಧ ಅದು ಕಟ್ಟಿದ ಒಕ್ಕಟ್ಟು, ಸಂರಕ್ಷಣ ಹಾಗೂ ಆಕ್ರಮಣಶಕ್ತಿ-ಇವುಗಳ ಮೇಲಿಂದಲೂ ಅದನ್ನಳೆಯಬೇಕಾಗುತ್ತದೆ. ಅದು ಹೀಗಿರುವುದು ಎಲ್ಲ ದೃಷ್ಟಿಯಿಂದಲೂ ಮಾನವ್ಯಕ್ಕೆ ಹೆಮ್ಮೆಯುಂಟುಮಾಡು ವಂಥದೆನ್ನಲು ಬರದು; ಈ ಬಗೆಯ ರಾಜಕೀಯ ಶಕ್ತಿಯಲ್ಲಿ ಕೀಳಾದ ರಾಷ್ಟ್ರ ಅಥವಾ ಜನತೆ ಪ್ರಾಚೀನ ಗ್ರೀಕರಂತೆಯೂ ಮಧ್ಯಯುಗೀನ ಇಟಾಲಿಯ ನ್ನರಂತೆಯೂ ತನ್ನನ್ನು ಗೆದ್ದವರಿಗಿಂತ ಆಧ್ಯಾತ್ಮಿಕವಾಗಿಯೂ ಸಾಂಸ್ಕೃತಿಕ ವಾಗಿಯೂ ಅತ್ಯಂತ ಮೇಲ್ತರಗತಿಯದಾಗಿರಬಲ್ಲುದಲ್ಲದೆ, ಜಯವಡೆದ ಸೈನಿಕ ಸರಕಾರಗಳು, ಆಕ್ರಾಮಕ ಸಮಷ್ಟಿಗಳು ಮತ್ತು ಲೂಟಿಗಾರ ಚಕ್ರಾಧಿಪತ್ಯ ಗಳಿಗಿಂತ ನಿಜವಾದ ಮಾನವಪ್ರಗತಿಗೆ ಹೆಚ್ಚು ಕೊಡುಗೆಗಳನ್ನು ನೀಡಿರ ಬಹುದಾಗಿರುತ್ತದೆ. ಆದರೆ ಮಾನವ ಜೀವನವಿನ್ನೂ ಗಣ್ಯವಾಗಿ ಜೈವಿಕ ವಾಗಿದೆ; (ಪ್ರಾಣಶಕ್ತಿಪ್ರೇರಿತವಾಗಿದೆ, ಪ್ರಾಣಮಯಕೋಶಪ್ರಧಾನವಾಗಿದೆ;) ವಿಸ್ತರಣ, ಧಾರಣ, ಆಕ್ರಮಣ, ಪರಸ್ಪರ ಸ್ವಾಹಾಕಾರಕ್ಕಾಗಿ ಮಾಡುವ ಹೋರಾಟ, ಸ್ವಪ್ರತಿಷ್ಠೆಯ ಜೀವನ ಎಂಬ ಜೀವನದ ಪ್ರಾಥಮಿಕ ನಿಯ ಮದ ಪ್ರವೃತ್ತಿಗಳಿಂದ ಪ್ರೇರಿತವಾಗಿ ಹರಿಯುತ್ತಿದೆ. ಆದುದರಿಂದ ಆಕ್ರಮಣ ಸಂರಕ್ಷಣಗಳಲ್ಲಿ ಅಶಕ್ತಿಯು, ಸ್ವರಕ್ಷಣೆಗೆ ಅಗತ್ಯವಾದ ಕೇಂದ್ರೀಕೃತವೂ ದಕ್ಷವೂ ಆದ ಐಕ್ಯವನ್ನು ಸಂಘಟಿಸುವುದರಲ್ಲಿ ಅಸಮರ್ಥತೆಯು ಸಾಕ್ಷಿಗಳನ್ನು ಸತತ ಕೊಡುವ ಸಾಮೂಹಿಕ ಮನ ಮತ್ತು ಚೇತನೆ ಸ್ಪಷ್ಟವಾಗಿ ರಾಜ ಕೀಯ ಕ್ಷೇತ್ರದಲ್ಲಿ ಹಿಮ್ಮೆಟ್ಟುವ ಎರಡನೆಯ ವರ್ಗಕ್ಕೆ ಸೇರಿದ್ದೇ ಸರಿ. ಭಾರತ

ವೆಂದೂ ರಾಷ್ಟ್ರೀಯವಾಗಿಯೂ ರಾಜಕೀಯವಾಗಿಯೂ ಒಂದಾಗಿದ್ದಿಲ್ಲ. ಅದು ಸುಮಾರು ಒಂದು ಸಾವಿರ ವರ್ಷ ಅನಾಗರಿಕ ಜನರ ದಾಳಿಗೀಡಾಗಿದ್ದರೆ ಮತ್ತೊಂದು ಸಾವಿರ ವರ್ಷ ಮೇಲಿಂದಮೇಲೆ ಬಂದ ವಿದೇಶೀಯ ಒಡೆಯರಿಗೆ ಆಳಾಗಿತ್ತು. ಆದುದರಿಂದ ರಾಜಕೀಯ ಅಸಾಮರ್ಥ್ಯ ಭಾರತದಲ್ಲಿತ್ತೆಂದು ತೀರ್ಪುಕೊಡುವುದು ಸಹಜವೇ ಆಗಿದೆ; ಭಾರತೀಯರು ರಾಜನೀತಿಯಲ್ಲಿ ಹಿಂದುಳಿದಿದ್ದರೆಂಬುದು ನ್ಯಾಯವೇ ಆಗಿದೆ.

ಇಲ್ಲಿ ಪುನಃ ಮೊಟ್ಟಮೊದಲಿನ ಆವಶ್ಯಕತೆ ಎಂದರೆ ಅತಿಶಯೋಕ್ತಿಗಳಿಂದ ದೂರ ಉಳಿಯುವುದು, ನಿಜಸ್ಥಿತಿಯನ್ನು ಸರಿಯಾಗಿ ತಿಳಿದುಕೊಂಬುದು, ಅದರ ಅರ್ಥವನ್ನು ಸರಿಯಾಗಿ ಮಾಡಿಕೊಂಬುದು ಮತ್ತು ಭಾರತದ ಸುದೀರ್ಘ ಇತಿಹಾಸದಲ್ಲಿ ಸರಿಯಾದ ತರಣೋಪಾಯ ಸಿಗದೆ ಇರುವ ಸಮಸ್ಯೆಯಲ್ಲಿಯ ಪ್ರವೃತ್ತಿಗಳನ್ನೂ ತತ್ವಗಳನ್ನೂ ಅರಿತುಕೊಂಬುದು ಪ್ರಥಮ ಆವಶ್ಯಕತೆ. ಮೊದಲನೆಯದಾಗಿ ಒಂದು ಜನದ ಹಾಗೂ ನಾಗರಿಕತೆಯ ಮಹತ್ವವನ್ನು ಅದರ ಸೈನಿಕ ಆಕ್ರಾಮಕತೆ, ವಿದೇಶ ವಿಜಯ ಪ್ರಮಾಣ, ಮಿಕ್ಕ ರಾಷ್ಟ್ರಗಳ ವಿರುದ್ಧ ಮಾಡಿದ ಯುದ್ಧಗಳಲ್ಲಿ ಅದರ ಗೆಲುವು, ಅದರ ಸಂಘಟಿತವಾದ ಸಂಗ್ರಾಹಕ ಹಾಗೂ ಅಪಹಾರಕ ಮೂಲ ಪ್ರವೃತ್ತಿಗಳು, ಪರರಾಜ್ಯ ಸ್ವಾಧೀನೀಕರಣ ಮತ್ತು ಶೋಷಣಗಳತ್ತ ಅದರ ಅಪ್ರತಿಹತ ಮುನ್ನಡೆ—ಇವುಗಳಿಂದ ಅಳೆಯುವುದಾದರೆ ಜಗತ್ತಿನ ಮಹಾಜನಗಳಲ್ಲಿ ಭಾರತ ಅತ್ಯಂತ ಕೀಳೆನಿಸುವುದೆಂಬುದನ್ನು ಒಪ್ಪಿಕೊಳ್ಳಲೇಬೇಕು. ಯಾವ ಕಾಲದಲ್ಲೂ ತನ್ನ ಗಡಿಮೀರಿ ಆಕ್ರಾಮಕ, ಸೈನಿಕ ಹಾಗೂ ರಾಜಕೀಯ ವಿಸ್ತರಣಕ್ಕೆ ಭಾರತ ಹೊರಟದ್ದು ಕಂಡುಬರುವುದಿಲ್ಲ; ಭಾರತೀಯ ಮಹಾಸಿದ್ಧಿಗಳನ್ನು ಹೇಳುವ ಕತೆಗಳಲ್ಲೆಲ್ಲೂ ಜಗತ್ತನ್ನಾಳುವ ಮಹಾಕಾವ್ಯ, ದೂರದೇಶಗಳ ಮೇಲೆ ದಂಡೆತ್ತಿ ಹೋದ ಮಹಾಕಥೆ ಅಥವಾ ವಿಕಸ್ವರ ಔಪನಿವೇಶಿಕ ಚಕ್ರಾಧಿಪತ್ಯವನ್ನು ಕಟ್ಟಿದ ಮಹಾಖ್ಯಾನ ಬರೆಯಲ್ಪಟ್ಟದ್ದು ಕಾಣಿಸುವುದಿಲ್ಲ. ಭಾರತ ನಡೆಸಿದ ವಿಸ್ತರಣ, ವಿಜಯ, ದಂಡಯಾತ್ರೆಗಳ ಒಂದೇ ಒಂದು ಮಹಾಪ್ರಯತ್ನವೆಂದರೆ ತನ್ನ ಸಂಸ್ಕೃತಿಯ ವಿಸ್ತರಣ—ಬೌದ್ಧಕಲ್ಪನೆಯಿಂದ ಪೌರಸ್ತ್ಯ ಪ್ರಪಂಚವನ್ನು ದಾಳಿಮಾಡಿ ಗೆದ್ದು ತನ್ನ ಆಧ್ಯಾತ್ಮಿಕತೆ, ಕಲೆ ಮತ್ತು ವಿಚಾರ-ಬಲ

ಗಳನ್ನು ಅಲ್ಲಿನುಗ್ಗಿಸಿದ್ದೇ ಆಗಿದೆ. ಈ ದಂಡಯಾತ್ರೆಯಾದರೋ ಶಾಂತಿಯಾತ್ರೆಯಾಗಿತ್ತಲ್ಲದೆ, ಯುದ್ಧಯಾತ್ರೆಯಾಗಿದ್ದಿಲ್ಲ; ಏಕೆಂದರೆ, ಆಧುನಿಕ ಸಾಮ್ರಾಜ್ಯಸತ್ತೆ ಹೆಮ್ಮೆ ಇಲ್ಲವೆ ಸೇವಮಾಡಿಕೊಂಬಂತೆ ಬಲಪ್ರಯೋಗ ಮತ್ತು ಭೌತಿಕ ವಿಜಯಗಳಿಂದ ಒಂದು ಆಧ್ಯಾತ್ಮಿಕ ನಾಗರಿಕತೆಯನ್ನು ಹರಡುವುದು ಭಾರತದ ಬಗೆಯ ಹಾಗೂ ಭಾವದ ಪ್ರಾಚೀನ ಎರಕಕ್ಕೂ ಧರ್ಮಬುದ್ಧಿಗೂ ಅಹಿತಕರವಾಗಿತ್ತು. ಸುತ್ತುಮುತ್ತಲಿನ ನಡುಗಡ್ಡೆಗಳಿಗೆ ಭಾರತೀಯ ರಕ್ತವನ್ನೂ ಸಂಸ್ಕೃತಿಯನ್ನೂ ಮೇಲಿಂದ ಮೇಲೆ ಸಾಲುಸಾಲಾಗಿ ಸಾಗಿದ ಔಪನಿವೇಶಿಕ ದಂಡಯಾತ್ರೆಗಳು ಒಯ್ದುವೆಂಬುದೇನೋ ನಿಜ; ಆದರೆ ಪೂರ್ವ ಪಶ್ಚಿಮ ಕರಾವಳಿಗಳಿಂದ ಹೊರಟ ಹಡಗುಗಳು ಭಾರತೀಯ ಸಾಮ್ರಾಜ್ಯಕ್ಕೆ ಆ ಹೊರನಾಡುಗಳನ್ನು ಸೇರಿಸಲು ನಿಯುಕ್ತರಾದ ದಾಳಿಗಾರರ ಹಡಗುಗಳಾಗಿರದೆ ಇನ್ನೂ ಸುಸಂಸ್ಕೃತರಾಗದಿದ್ದ ಜನಗಳಿಗಾಗಿ ಭಾರತೀಯ ಧರ್ಮ, ವಾಸ್ತುಶಿಲ್ಪ, ಕಲೆ, ಪದ್ಯ, ವಿಚಾರ, ಜೀವನ, ರೀತಿನೀತಿಗಳನ್ನು ಒಯ್ಯುತ್ತಿದ್ದ ದೇಶಭ್ರಷ್ಟರ ಅಥವಾ ಸಾಹಸಿಕರ ಹಡಗುಗಳಾಗಿದ್ದವು. ಸಾಮ್ರಾಜ್ಯದ ಮತ್ತು ಅದಕ್ಕೂ ಹೆಚ್ಚಾಗಿ ಜಾಗತಿಕ ಚಕ್ರಾಧಿಪತ್ಯದ ಕಲ್ಪನೆ ಭಾರತ ಮನಕ್ಕೆ ಹೊಳೆಯದೆ ಇರಲಿಲ್ಲ; ಆದರೆ ಅದರ ಜಗತ್ತೆಂದರೆ ಭಾರತೀಯ ಜಗತ್ತು ಮತ್ತು ಅದರ ಗುರಿಯೆಂದರೆ ಭಾರತೀಯರ ಸಾಮ್ರಾಜ್ಯಕ ಐಕ್ಯವನ್ನು ಸ್ಥಾಪಿಸುವುದೇ ಆಗಿತ್ತು.

ಈ ಕಲ್ಪನೆ, ಈ ಆವಶ್ಯಕತೆಯ ಪ್ರಜ್ಞೆ, ಅದರ ಸಿದ್ಧಿಗಾಗಿ ಸತತವೂ ಇದ್ದ ಪ್ರೇರಣೆ ಭಾರತೇತಿಹಾಸದ ಉದ್ದಕ್ಕೂ ಕಂಡುಬರುತ್ತದೆ; ಪ್ರಾಚೀನ ವೈದಿಕ ಯುಗದಿಂದ ರಾಮಾಯಣ–ಮಹಾಭಾರತಗಳಲ್ಲಿ ಕಾಣುವ ವೀರ ಪರಂಪರೆಯ ಯುಗದ ಮೂಲಕ ಅಂಥ ಅಂತಃಪ್ರೇರಣೆ ಸಾಮ್ರಾಜ್ಯಕ ಮೌರ್ಯ–ಗುಪ್ತರ ಪ್ರಯತ್ನದಿಂದ ಹಿಡಿದು ಮೊಗಲ ಏಕೀಕರಣದ ವರೆಗೂ ಪೇಷ್ವೆಗಳ ಕೊನೆಯ ಮಹತ್ವಾಕಾಂಕ್ಷೆಯನಕವೂ–ಕೊನೆಯ ಅಪಜಯದವರೆಗೆ, ವಿದೇಶೀಯ ನೊಗದಡಿಯಲ್ಲಿ ಪರಸ್ಪರ ಹೋರುತ್ತಿದ್ದ ಎಲ್ಲಬಲಗಳೂ ಸಮುತಟ್ಟಾಗಿ, ಸ್ವತಂತ್ರಜನರ ಸ್ವತಂತ್ರ ಐಕ್ಯದ ಬದಲು ಸಮರೂಪದ ಸಾರ್ವತ್ರಿಕ ದಾಸ್ಯ ಹಿಡಿಯುವವರೆಗೂ ಅಂತರ್ವಾಹಿನಿಯಾಗಿ ಸಾಗುತ್ತಲೇ ಇತ್ತು.

ಆ ಸುದೀರ್ಘ ಪ್ರಯತ್ನದ ಮಂದಗತಿ, ತೊಂದರೆ, ವಿಧಾನದ ವಿರೀತಗಳು ಮತ್ತು ಉರುಳುವಿಕೆ ಇವು ನಾಗರಿಕತೆಯಲ್ಲಿಯ ಮೂಲಭೂತ ದೌರ್ಬಲ್ಯದಿಂದ ಹುಟ್ಟಿದವೋ ಅಥವಾ ಜನರ ರಾಜಕೀಯ ಜಾಗ್ರತಿ ಹಾಗೂ ಶಕ್ತಿಯಲ್ಲಿಯ ನ್ಯೂನತೆಯಿಂದಾದವೋ ಅಥವಾ ಇತರ ಕಾರಣಗಳಿಂದ ಸಂಭವಿಸಿದವೋ ಎಂಬುದು ನಮ್ಮೆದುರಿರುವ ಪ್ರಶ್ನೆ. ಭಾರತೀಯರ ಐಕ್ಯ ಸಾಧಿಸಲಾಗದ ದೌರ್ಬಲ್ಯದ ಬಗ್ಗೆ, ಸರ್ವಸಾಧಾರಣ ದೇಶಪ್ರೇಮದ ಅಭಾವದ ಬಗ್ಗೆ, ಅದು ಈಗ ತಾನೇ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಹುಟ್ಟಿದ ಬಗ್ಗೆ, ಮತ್ತು ಧರ್ಮ ಹಾಗೂ ಜಾತಿಗಳು ಹೇರಿಪ್ಪ ವಿಭಜನೆಯ ಬಗ್ಗೆ ಬಹಳವಾಗಿ ಹೇಳಲಾಗಿದೆ, ಬರೆಯಲಾಗಿದೆ. ಈ ಶಾಪೋಕ್ತಿಗಳೆಲ್ಲವನ್ನೂ ಅವುಗಳ ಸಂಪೂರ್ಣ ವ್ಯಾಪಕತೆಯಲ್ಲಿ ಒಪ್ಪಿಕೊಂಡರೂ ಅವೆಲ್ಲವೂ ಪೂರ್ಣಸತ್ಯಗಳಲ್ಲ, ಇಲ್ಲವೆ ಸಮರ್ಪಕವಾಗಿ ವಿವೃತವಾಗಿಲ್ಲ ಅಥವಾ ವಿಷಯಕ್ಕೆ ಮುಖ್ಯವಾಗಿ ಅನ್ವಯಿಸುವುದಿಲ್ಲ–ಅವೆಲ್ಲ ಕೇವಲ ಬಾಹ್ಯಚಿಹ್ನಗಳಷ್ಟೇ; ಆಳವಾದ ಕಾರಣಗಳನ್ನು ನಾವಿನ್ನು ಹುಡುಕಬೇಕಾಗಿದೆ.

ಯುರೋಪಿಯನ್ನರ ಐಕ್ಯಕಲ್ಪನೆಯ ಕಾಲ್ಪನಿಕತೆ:

ಭಾರತದ ರಾಜಕೀಯ ಅನೈಕ್ಯಕ್ಕೆ ಸಾಮಾನ್ಯವಾಗಿ ಒಂದು ಉತ್ತರವನ್ನು ಕೊಡುತ್ತಾರೆ. ಅದೆಂದರೆ, ಭಾರತ ವಸ್ತುತಃ ಯುರೋಪಿನಷ್ಟೇ ವಿಸ್ತೃತವಾದ ಒಂದು ಖಂಡ; ಅದರಲ್ಲಿ ಅನೇಕ ಜನಾಂಗಗಳಿವೆ ಮತ್ತು ಐಕ್ಯದ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಯುರೋಪಿನಲ್ಲಿದ್ದಷ್ಟೇ ಹೆಚ್ಚು ಅಥವಾ ತಕ್ಕ ಮಟ್ಟಿನ ತೊಂದರೆಗಳಿವೆ. ಹೀಗಿರುವಾಗ ಯುರೋಪಿನ ಐಕ್ಯಕಲ್ಪನೆ ಆದರ್ಶ ಮಟ್ಟದಲ್ಲಿ ಇನ್ನೂ ಅಪರಿಣಾಮಕ ಭೂತಚ್ಛಾಯೆಯಾಗಿರುವುದು, ವ್ಯವಹಾರದಲ್ಲಿ ಇಂದಿಗೂ ಅಸಾಧ್ಯವಾಗಿರುವುದು ಪಾಶ್ಚಾತ್ಯ ನಾಗರಿಕತೆಯ ಅಪರಿಪೂರ್ಣತೆಗಾಗಲಿ ಯೌರೋಪ್ಯರ ರಾಜಕೀಯ ಅಪಾಟವಕ್ಕಾಗಲಿ ಪ್ರಮಾಣವಲ್ಲವೆಂದಾಗ–ಭಾರತ ಜನಾಂಗಗಳ ಇತಿಹಾಸವನ್ನು ಮುದ್ರಿಸಿದ ಅದಕ್ಕೂ ಹೆಚ್ಚು ಸ್ಪಷ್ಟವಾದ ಐಕ್ಯ ಅಥವಾ ಕೊನೆಯ ಪಕ್ಷ ಏಕೀಕರಣದ ಆದರ್ಶಕ್ಕೆ ಅದರ ಸಿದ್ಧಿಗಾಗಿ ಎಡೆಬಿಡದೆ ಮಾಡಿದ ಪ್ರಯತ್ನಕ್ಕೆ ಮತ್ತು ಇನ್ನೇನು ಜಯ ಅತಿ ಸಮೀಪದಲ್ಲಿದೆ ಎನ್ನುವ ಸ್ಥಿತಿ ಪದೇ ಪದೇ ಉಂಟಾದುದಕ್ಕೆ ತದ್ಭಿನ್ನ

ಮೂಲ್ಯಪದ್ಧತಿಯನ್ನು, ಮಾನದಂಡವನ್ನು ಅನ್ವಯಿಸುವುದು ನ್ಯಾಯವಲ್ಲ. ಈ ವಾದದಲ್ಲಿ ಕೆಲಮಟ್ಟಿಗೆ ಬಲವಿದೆ; ಆದರೆ ಅದು ಸ್ವರೂಪತಃ ಸಾಕಷ್ಟು ಸಮರ್ಪಕವಾಗಿಲ್ಲ–ಏಕೆಂದರೆ, ಕೊಟ್ಟ ಉದಾಹರಣೆ ಅಸಂಪೂರ್ಣ ಹಾಗೂ ಪರಿಸ್ಥಿತಿ ಅದೇ ತರಹದ್ದಲ್ಲ. ಯೌರೋಪ್ಯ ಜನಾಂಗಗಳು ತಮ್ಮ ಸಾಮೂಹಿಕ ವ್ಯಕ್ತಿತ್ವದಲ್ಲಿ ಪರಸ್ಪರ ಅತಿ ಹರಿತವಾದ ಭೇದವುಳ್ಳಂಥವು; ಮತ್ತು ಕ್ರೈಸ್ತ ಧರ್ಮದಲ್ಲಿ ಅವುಗಳ ಆಧ್ಯಾತ್ಮಿಕ ಐಕ್ಯ ಅಥವಾ ಸರ್ವಸಾಧಾರಣವಾದ ಯೌರೋಪ್ಯ ನಾಗರಿಕತೆಯಲ್ಲಿ ಅವುಗಳ ಸಾಂಸ್ಕೃತಿಕ ಏಕತ್ವವು ಭಾರತದ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಐಕ್ಯದಷ್ಟು ನಿಜವೂ ಪೂರ್ಣವೂ ಆಗಿರಲಿಲ್ಲ; ಅದು ಅವುಗಳ ಬಾಳಿನ ಕೇಂದ್ರವೂ ಎನಿಸಿರಲಿಲ್ಲ, ಅದರ ತಳಹದಿ ಅಥವಾ ಆಧಾರವೂ ಆಗಿರಲಿಲ್ಲ; ಅದರ ಹೊರ ಆವರಣ ಇಲ್ಲವೆ ಮೇಲ್ಪೊರೆಯಷ್ಟೇ ಆಗಿತ್ತು. ಅವುಗಳ ಅಸ್ತಿತ್ವದ ಅಡಿ ರಾಜಕೀಯ ಮತ್ತು ಆರ್ಥಿಕ ಜೀವನದ ಲ್ಲಿತ್ತು. ಆ ಜೀವನ ಪ್ರತಿ ದೇಶದಲ್ಲೂ ಬೇರೆ ಬೇರೆಯಾಗಿತ್ತಲ್ಲದೆ, ಯುರೋಪನ್ನು ವಿಭಕ್ತವನ್ನಾಗಿಯೂ ಪದೇ ಪದೇ ಯುದ್ಧಮಾಡುವ ರಾಷ್ಟ್ರಗಳನ್ನಾಗಿಯೂ ಮಾಡಿದ್ದು ಈ ರಾಜಕೀಯ ಜಾಗೃತಿಯ ಸಾಮರ್ಥ್ಯವೇ. ಈಗಷ್ಟೇ ರಾಜಕೀಯ ಚಟುವಟಿಕೆಗಳ ಸಮಷ್ಟಿಯಿಂದ, ಇಡಿ ಯುರೋಪಿನ ಸಾರ್ವತ್ರಿಕ ಆರ್ಥಿಕ ಪರಾವಲಂಬನದಿಂದ ಕಟ್ಟಕಡೆಗೆ ಉದಯೋನ್ಮುಖವೂ ಅಪರಿಣಾಮಕರವೂ ಆದ ರಾಷ್ಟ್ರಸಂಘ ಹುಟ್ಟಿಕೊಂಡು ಯೌರೋಪ್ಯ ಜನಾಂಗಗಳ ಸಾಧಾರಣ ಹಿತಗಳ ಸಾಧನೆಗಾಗಿ ದೀರ್ಘಕಾಲಿಕ ಪ್ರತ್ಯೇಕತೆಯಿಂದ ಹುಟ್ಟಿದ ಬುದ್ಧಿಯನ್ನು ವ್ಯರ್ಥವಾಗಿ ಅನ್ವಯಿಸುತ್ತಿದೆ. ಆದರೆ ಭಾರತದಲ್ಲಿ ಬಹಳ ಪೂರ್ವಕಾಲದಲ್ಲೇ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಐಕ್ಯವನ್ನು ಪೂರ್ಣಗೊಳಿಸಿ ಹಿಮಾಲಯದ ಮತ್ತು ಎರಡು ಮಹಾಸಾಗರಗಳ ನಡುವಣ ಎಲ್ಲ ಮಾನವ್ಯ ಮಹಾಸೃಷ್ಟಿಯ ಬಾಳಿನ ಅಂತಃಸತ್ವವನ್ನಾಗಿ ಮಾಡಲಾಗಿತ್ತು. ಭಾರತದ ಪ್ರಾಚೀನ ಜನಗಳು ಎಂದೂ ಅಷ್ಟು ಭಿನ್ನ ರಾಷ್ಟ್ರಗಳೆನಿಸಿರಲಿಲ್ಲ, ಅಷ್ಟು ತೀವ್ರವಾಗಿ ರಾಜಕೀಯ ಹಾಗೂ ಆರ್ಥಿಕ ಜೀವನದಲ್ಲಿ ಪ್ರತ್ಯೇಕರಾಗಿದ್ದಿಲ್ಲ. ಅವರು ಒಂದು ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಮಹಾರಾಷ್ಟ್ರದ ಉಪಜನಗಳಾಗಿ, ತಮ್ಮ ಬಲವಾದ ಭೇದಮತಿಯಿಂದಲೂ ಭೌತಿಕವಾಗಿ ಸಾಗರ-ಪರ್ವತಗಳಿಂದಲೂ ಬೇರೆಯ ದೇಶದವರಿಂದ ಭಿನ್ನರಾಗಿ, ತಮ್ಮಿಲ್ಲೇ

ಆದ ವಿಲಕ್ಷಣವೂ ಸಾಧಾರಣವೂ ಆದ ಧರ್ಮ-ಸಂಸ್ಕೃತಿಗಳನ್ನು ಬೆಳೆಸಿಕೊಂಡಿದ್ದರು. ಹೀಗಿರುವುದರಿಂದ ದೇಶ ವಿಸ್ತಾರ ಎಷ್ಟೇ ಇದ್ದರೂ ವ್ಯಾವಹಾರಿಕ ತೊಂದರೆಗಳೆಷ್ಟೇ ಇದ್ದರೂ ಯುರೋಪಿನ ಐಕ್ಯ ಸಾಧನೆಗಿಂತ ಹೆಚ್ಚು ಸುಲಭವಾಗಿ ರಾಜಕೀಯ ಐಕ್ಯವನ್ನು ಸಾಧಿಸಿಕೊಳ್ಳಬಹುದಾಗಿತ್ತು. ಈ ಕಾರ್ಯದಲ್ಲಾದ ಅಪಜಯದ ಕಾರಣವನ್ನು ಹುಡುಕಲು ಬಹಳ ಆಳ ಮುಳುಗಬೇಕು; ಅದು ಆ ಸಮಸ್ಯೆಯ ಅವಲೋಕನದ ರೀತಿಗೂ ಅದರ ಪ್ರಯತ್ನಕ್ಕೆ ವ್ಯಾವಹಾರಿಕವಾಗಿ ಕೊಟ್ಟ ರೂಪಕ್ಕೂ ಪರಸ್ಪರ ಇರುವ ವಿರೋಧದಲ್ಲೇ ಇದೆ; ಆ ಪ್ರಯತ್ನ ಪಡೆದ ವಾಸ್ತವಿಕ ಸ್ವರೂಪದಲ್ಲಿ ಜನರ ವಿಲಕ್ಷಣ ಮನೋಧರ್ಮದ ವ್ಯಾಹತಿಯಿರುವುದು ಕಂಡುಬರುತ್ತದೆ.

ಭಾರತ ಭಾರತವೇ ಆಗಿ ಉಳಿದಿರುವುದರ ಗುಟ್ಟು:

ಭಾರತೀಯ ಮನದ ಇಡಿ ಬುಡವೇ ಆಧ್ಯಾತ್ಮಿಕ ಹಾಗೂ ಅಂತರ್ಮುಖ. ಆತ್ಮಾಂತರಾತ್ಮಗಳ ಅಂಶಗಳನ್ನು ಮೊಟ್ಟಮೊದಲು ಹುಡುಕುವುದೂ ಉಳಿದೆಲ್ಲವನ್ನೂ ಗೌಣವೆಂದು ಗಣಿಸುವುದೂ ಅದರ ಸಹಜಪ್ರವೃತ್ತಿ. ಆತ್ಮೇತರ ಪದಾರ್ಥಗಳು ಪರಾವಲಂಬಿಗಳು, ಉಚ್ಚಜ್ಞಾನದ ದೃಷ್ಟಿಯಲ್ಲಿ ಹಿಡಿದು ಅಳೆದು ನೋಡಲ್ಪಡತಕ್ಕವು; ಅವು ಕೇವಲ ಸಾಧನರೂಪದವು, ಪ್ರಾಥಮಿಕ ಆವಶ್ಯಕತೆಗಳು, ಮೊದಲು ತೊಡಲುವ ಕ್ಷೇತ್ರಗಳು ಅಥವಾ ಊರುಗೋಲುಗಳು—ಗಭೀರತರವಾದ ಆಧ್ಯಾತ್ಮಿಕ ಗುರಿಗೆ ಜೋತುಬಿದ್ದಂಥವುಗಳು. ತನ್ನಲ್ಲಿಯ ಸತ್ವದಿಂದ ಯಾವುದನ್ನು ನಿರ್ಮಿಸುವಾಗಲೂ ಮೊದಲು ಭಾರತ ತನ್ನ ಒಳವಗೆಯಲ್ಲಿ ಅದನ್ನು ಸೃಜಿಸಿಕೊಂಡು ಬಳಿಕ ಅದರ ಇತರ ಅಂಗಗಳ ಸೃಷ್ಟಿಗೆ ಕೈಹಾಕುವ ಪ್ರವೃತ್ತಿಯುಳ್ಳದ್ದಾಗಿದೆ. ಈ ಮನೋಧರ್ಮ, ಒಳಗಿಂದ ಹೊರಮುಖವಾಗಿ ನಿರ್ಮಿಸಲುಜ್ಜುಗಿಸುವ ತತ್ಸಹಜವಾದ ಈ ಪ್ರವೃತ್ತಿ ಭಾರತಕ್ಕೆ ಸ್ವಾಭಾವಿಕವೆಂದೊಪ್ಪಿದ ಬಳಿಕ ಅದು ಮೊಟ್ಟಮೊದಲು ಸಾಧಿಸಿದ ಒಕ್ಕಟ್ಟು ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕವೇ ಆಗಿರುವುದು ಸಹಜ. ಅದೆಂದೂ ರೋಂ ಅಥವಾ ಪ್ರಾಚೀನ ಪರ್ಶಿಯದಲ್ಲಿಯಂತೆ ಒಂದು ಜೈತ್ರರಾಜ್ಯದಿಂದಾಗಲಿ, ಸೈನಿಕ ಹಾಗೂ ಸಂಘಟಕ ಜನರ ಪ್ರತಿಭೆಯಿಂದಾಗಲಿ ಹೊರಗಿಂದ ಹೇರಿದ, ಕೇಂದ್ರೀಕರಿಸಿದ ಅಥವಾ ನಿರ್ಮಿಸಿದ ಶಾಸನ ಬಲದಿಂದಲಾಗಲಿ

ಸಾಧಿಸಬಲ್ಲ ರಾಜಕೀಯ ಐಕ್ಯವಾಗಲಾರದು. ಇದೊಂದು ತಪ್ಪೆಂದಾಗಲಿ, ಭಾರತೀಯ ಬಗೆಯ ಅವ್ಯವಹಾರ್ಯ ಮುಖಕ್ಕಿದೊಂದು ಸಾಕ್ಷಿಯೆಂದಾಗಲಿ ಒಂದೇ ಒಂದು ರಾಜಕೀಯ ನಿಕಾಯವನ್ನು ಮೊದಲು ನಿರ್ಮಿಸಿಕೊಂಡಿದ್ದರೆ ಅನಂತರ ಅದನ್ನಾಧರಿಸಿ ಆಧ್ಯಾತ್ಮಿಕ ಐಕ್ಯವು ಸುದೃಢವಾಗಿ ಭಾರತೀಯ ರಾಷ್ಟ್ರೀಯ ಸಾಮ್ರಾಜ್ಯದಲ್ಲಿ ಬೆಳೆದು ನಿಲ್ಲುತ್ತಿತ್ತೆಂದಾಗಲಿ ಹೇಳಿದರೆ, ನ್ಯಾಯವಾಗಲಾರದು. ಮೊದಲು ಎದುರಾದ ಸಮಸ್ಯೆಯೆಂದರೆ– ವಿಶಾಲ ದೇಶವೊಂದರಲ್ಲಿ ನೂರಾರು ರಾಜ್ಯಗಳು, ಕುಲಗಳು, ಜನಾಂಗಗಳು, ಕುಲ ಪುಂಜಗಳು, ಗೋತ್ರಜರು ನೆಲಸಿದ್ದು. ಈ ಅಂಶದಲ್ಲಿ ಪ್ರಾಚೀನ ಭಾರತ ಮತ್ತೊಂದು ಗ್ರೀಸ್ ಎನ್ನಬಹುದು; ಆದರೆ ಇಂದಿನ ಯುರೋಪಿನಷ್ಟು ವಿಸ್ತೃತವಾದ ಗ್ರೀಸ್ ಆಗಿತ್ತದು. ಮೂಲಭೂತ ಏಕಭಾವವನ್ನು ಹುಟ್ಟಿಸಲು ಗ್ರೀಸಿನಲ್ಲಿಯಂತೆ ಇಲ್ಲಿಯೂ ಸಾಂಸ್ಕೃತಿಕ ಹೆಲೆನೀಯ ಐಕ್ಯವನ್ನು ಸಾಧಿಸಿಕೊಂಬುದು ಆವಶ್ಯಕ. ಅದರಲ್ಲೂ ಅತಿ ಪ್ರಮುಖವಾಗಿ ಈ ಎಲ್ಲ ಜನಗಳ ಉದ್ದೇಶಪೂರ್ವಕವಾದ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಐಕ್ಯವು ಮೊದಲು ಬೇಕಾದದ್ದು. ಇದು ಸ್ಥಾಯಿಯಾದ ಯಾವ ಐಕ್ಯಕ್ಕಾದರೂ ಬೇಕೇ ಬೇಕಾದ ಅಪರಿಹಾರ್ಯ ಶರ್ತ. ಈ ವಿಷಯದಲ್ಲಿ ಭಾರತೀಯ ಬಗೆಯ ಮತ್ತು ಅದರ ಋಷಿಗಳ ಮೂಲಭಾವ ಸಮರ್ಪಕವಾದುದಾಗಿತ್ತು. ಸೈನಿಕ ಹಾಗೂ ರಾಜಕೀಯ ಸಾಧನಗಳಿಂದ ಪ್ರಾಚೀನ ಭಾರತದ ಜನಾಂಗಗಳಲ್ಲಿ ರೋಮಿನಲ್ಲಿ ಸಾಧಿಸಿದಂತೆ ಬಾಹ್ಯ ಸಾಮ್ರಾಜ್ಯಿಕ ಐಕ್ಯವನ್ನು ಸಂಸ್ಥಾಪಿಸಬಹುದಾಗಿತ್ತೆಂದು ಒಮ್ಮೆ ನಾವು ಭಾವಿಸಿದರೂ ರೋಮಿನ ಐಕ್ಯ ಚಿರಂಜೀವಿಯಾಗಲಿಲ್ಲ, ರೋಮನ್ನರ ವಿಜಯ ಸಂಘಟನೆಗಳಿಂದ ಸ್ಥಾಪಿಸಲ್ಪಟ್ಟ ಪ್ರಾಚೀನ ಇಟಲಿಯ ಐಕ್ಯ ಬಹುಕಾಲ ಬದುಕಲಿಲ್ಲ ಮತ್ತು ಅದೇ ಪ್ರಕಾರ ವಿಶಾಲ ಭಾರತದಲ್ಲಿ ಪೂರ್ವಸಿದ್ಧವಾದ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಐಕ್ಯವಿಲ್ಲದೆ ಪ್ರಯತ್ನಿಸಿದ್ದರೆ ಹಾಗೆ ಸಾಧಿಸಿದ ರಾಜಕೀಯ ಐಕ್ಯ ತಾಳುತ್ತಿದ್ದಿಲ್ಲವೆಂಬುದನ್ನೂ ನಾವು ಮರೆಯುತಕ್ಕದ್ದಲ್ಲ. ಹಾಗಲ್ಲದೆ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಐಕ್ಯವನ್ನು ಅತಿ ಮುಖ್ಯವೆಂದೂ ರಾಜಕೀಯ ಹಾಗೂ ಬಾಹ್ಯ ಐಕ್ಯ ಬಹಳ ಕ್ಷುಲ್ಲಕವೆಂದೂ ತಿಳಿದಿದ್ದರೆ ಒಳಿತಾಗುತ್ತಿತ್ತೆಂಬುದೂ ಸರಿಯಲ್ಲ; ಏಕೆಂದರೆ, ಅಂಥ ಪರಿಸ್ಥಿತಿಯಲ್ಲಿ ಅದರ ಪರಿಣಾಮ ಪೂರ ವಿನಾಶಕವೂ

ಲಾಭರಹಿತವೂ ಆಗುತ್ತಿತ್ತು. ಈ ಅನುಚ್ಛೇದ್ಯ ಆಧ್ಯಾತ್ಮ ಮುದ್ರಾಂಕದ ಮೂಲಭೂತ ವೈಲಕ್ಷಣ್ಯದ ದೆಸೆಯಿಂದಲೇ, ಈ ನಾನಾ ಪ್ರಕಾರಗಳ ಅಂತರ್ಗತ ಏಕತೆಯ ದೆಸೆಯಿಂದಲೇ– ಇನ್ನೂ ಒಂದೇ ಒಂದಾದ ಸಂಘಟಿತ ರಾಜಕೀಯ ರಾಷ್ಟ್ರವೆನಿಸದೆ ಹೋದರೂ–ಭಾರತ ಬದುಕಿ ಉಳಿದಿದೆ ಮತ್ತು ಭಾರತ ಭಾರತವಾಗಿಯೇ ಇದೆ.

ಪಾಶ್ಚಾತ್ಯ ಬಗೆ ಅರಿಯಲೊಪ್ಪದ ಸತ್ಯ:

ಏನ್ಟೇ ಹೇಳಿದರೂ ಚಿರಂಜೀವಿಯಾಗಿ ಉಳಿಯುವ ಐಕ್ಯವೆಂದರೆ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಐಕ್ಯವೊಂದೇ. ಅದನ್ನು ಉಳಿಸಿಕೊಳ್ಳುವುದು ಸತತ ಪ್ರಯತ್ನಮುಖವಾದ ಬಗೆ ಮತ್ತು ಆತ್ಮಗಳಿಂದ ಸಾಧ್ಯವಾದಷ್ಟು ಚಿರಂಜೀವಿಯಾದ ಶರೀರ ಮತ್ತು ಬಾಹ್ಯ ಸಂಘಟನಗಳಿಂದ ಸಾಧ್ಯವಾಗದು. ಒಂದು ಜನದ ಆತ್ಮ ಬದುಕಿ ಉಳಿಯುವುದು ಅಂಥ ಚೇತನ– ಚೇತಸ್ಸುಗಳಿಂದಲೇ. ಪಾಶ್ಚಾತ್ಯರ ಭಾವನಿಷ್ಠ ಮನ ಈ ಸತ್ಯವನ್ನು ಅರಿಯಲು ಅಥವಾ ಒಪ್ಪಲು ಸಿದ್ಧವಾಗಲಾರದು; ಆದರೂ ಅದರ ಪ್ರಮಾಣಗಳು ಮಾತ್ರ ಯುಗಯುಗಗಳ ಇಡಿ ಕತೆಯ ಉದ್ದಕ್ಕೂ ಬರೆಯಲ್ಪಟ್ಟಿವೆ. ಹಳೆಯ ರಾಷ್ಟ್ರಗಳೂ ಭಾರತ ಸಮಕಾಲೀನ ರಾಷ್ಟ್ರಗಳೂ ಕಿರಿಯ ರಾಷ್ಟ್ರಗಳೂ ಸತ್ತುಹೋಗಿ ಅವುಗಳ ಸ್ಮಾರಕಗಳು ಮಾತ್ರ ಈಗ ಉಳಿದಿವೆ. ಗ್ರೀಸ್- ಈಜಿಪ್ತ್‌ಗಳು ಭೂಪಟ ಹಾಗೂ ಹೆಸರಿನಲ್ಲಿ ಮಾತ್ರ ಉಳಿದಿವೆ. ಕೈರೋ ಅಥವಾ ಆಥೆನ್ಸಿನಲ್ಲಿ ನಾವು ಈಗ ಕಾಣುವ ಮೆಂಫಿಸ್ಸನ್ನು ಕಟ್ಟಿದ್ದು ಹೆಲಾಸಿನ ಆತ್ಮವಾಗಲಿ ಗಭೀರತರವಾದ ರಾಷ್ಟ್ರಾತ್ಮವಾಗಲಿ ಅಲ್ಲ. ಮೆಡಿಟರೇನಿಯನ್ ಜನಾಂಗಗಳ ಮೇಲೆ ರೋಂ ರಾಜಕೀಯ ಹಾಗೂ ಕೇವಲ ಬಾಹ್ಯವೆನಿಸಿದ ಸಾಂಸ್ಕೃತಿಕ ಐಕವನ್ನು ಹೇರಿತು, ಆದರೆ ಅವುಗಳ ಸಚೇತನ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಐಕ್ಯವನ್ನದು ನಿರ್ಮಿಸಲಾರದಾಯಿತು; ಆದುದರಿಂದಲೇ ಪೂರ್ವವು ಪಶ್ಚಿಮದ ತಳಿಕೆಯನ್ನು ಹರಿದುಕೊಂಡಿತು, ಆಫ್ರಿಕವು ರೋಮಿನ ಆಳಿಕೆಯ ಕುರುಹನ್ನು ಉಳಿಸಿಕೊಳ್ಳದಾಯಿತು; ಈಗಲೂ ಲ್ಯಾಟಿನ್ ಎಂದು ಕರೆಯಲ್ಪಡುವ ಪಾಶ್ಚಾತ್ಯ ರಾಷ್ಟ್ರಗಳು ಕೂಡ ಅನಾಗರಿಕ ದಾಳಿಗಾರರನ್ನು ಎದುರಿಸಲಾರದಾಗಿ, ಆಧುನಿಕ ಇಟಲಿ, ಸ್ಪೇನ್ ಮತ್ತು ಫ್ರಾನ್ಸ್ ಆಗಲು ಬಿಟ್ಟ

ಶೀಯ ಚೈತನ್ಯವನ್ನು ಬಳಸಿಕೊಂಡು ಹೊಸದಾಗಿ ಹುಟ್ಟಬೇಕಾಯಿತು. ಆದರೆ ಭಾರತವು ಇನ್ನೂ ಬದುಕುತ್ತಿದೆ; ತನ್ನ ಆಂತರಿಕ ಮನ, ಆತ್ಮ, ಚೈತನ್ಯ ಗಳ ಮುಂದೋಟವನ್ನುಳಿಸಿಕೊಂಡೇ ಪ್ರಾಚೀನ ಭಾರತದೊಡನೆ ತಳೆಯುತ್ತ ನಿಂತಿದೆ. ಗ್ರೀಕ್, ಪಾರ್ಥಿಯನ್ ಮತ್ತು ಹೂಣ ದಾಳಿ ಹಾಗೂ ವಿದೇಶೀಯ ಆಳಿಕೆ, ಇಸ್ಲಾಮಿನ ಬಲಿಷ್ಠ ಸತ್ವ, ಬ್ರಿಟಿಷ್ ಆಕ್ರಮಣದ ಹಾಗೂ ಬ್ರಿಟಿಷ್ ಪದ್ಧತಿಯ ತಲೆಹೊಡೆದು ಆಳೆಯುವ ಭಾರವಡೆ, ಅಲ್ಲದೆ ಇತರ ಪಾಶ್ಚಾತ್ಯ ಶಕ್ತಿಗಳ ಬೃಹತ್ಪ್ರಮಾಣದ ಒತ್ತಡ ಈ ಯಾವುದೂ ವೈದಿಕ ಋಷಿಗಳು ಭಾರ ತಕ್ಕೆ ತಯಾರಿಸಿ ಕೊಟ್ಟ ಶರೀರದಿಂದ ಅವರ ಹಳೆಯ ಆತ್ಮವನ್ನು ಹೊರಡಿ ಸಲು ಅಥವಾ ಅದುಮಲು ಸಮರ್ಥವಾಗಲಿಲ್ಲ; ಪ್ರತಿಯೊಂದು ಹೆಜ್ಜೆ ಯಲ್ಲೂ ಪ್ರತಿಯೊಂದು ದುಃಖ, ಆಘಾತ ಹಾಗೂ ಆಕ್ರಮಣದಲ್ಲೂ ಸಕ್ರಿಯ ಅಥವಾ ನಿಷ್ಕ್ರಿಯ ಪ್ರತೀಕಾರದಿಂದ ಎದುರಿಸಿ ಬದುಕಿ ಉಳಿಯಲು ಅದಕ್ಕೆ ಸಾಧ್ಯವಾಯಿತು. ಈ ಕಾರ್ಯವನ್ನದು ತನ್ನ ಆಧ್ಯಾತ್ಮಿಕ ಘನತೆಯ ಮಹಾ ದಿನಗಳಲ್ಲಿ, ಆ ಜರಣ ಹಾಗೂ ಪ್ರತಿಕ್ರಿಯೆಗಳ ಸುದಿನಗಳಲ್ಲಿ ಅಜೀರ್ಣಾಂಶ ಗಳೆಲ್ಲವನ್ನೂ ದೂರ ಒತ್ತಿ, ದೂರೀಕರಿಸಲಾರದ ಎಲ್ಲ ಅಂಶಗಳನ್ನೂ ಜೀರ್ಣ ಮಾಡಿಕೊಂಡು ಸಾಧಿಸಿತು. ಆ ಮೇಲೆ ಅಳಿಗಾಲ ಪ್ರಾಪ್ತವಾದಾಗಲೂ ಅದೇ ಬಲದಿಂದ, ಹಿಮ್ಮೆಟ್ಟಿದರೂ ವಧ್ಯವಾಗದೆ, ದಕ್ಷಿಣದಲ್ಲಿ ಹಿಂಗಾಲಿಟ್ಟು ಕೆಲಕಾಲ ತನ್ನ ಪ್ರಾಕ್ತನ ರಾಜಕೀಯ ಪದ್ಧತಿಯನ್ನುಳಿಸಿಕೊಂಡು, ತನ್ನ ಹಳೆಯ ಆತ್ಮವನ್ನೂ ಕಲ್ಪನೆಯನ್ನೂ ಸಂರಕ್ಷಿಸಿಕೊಳ್ಳಲು ಇಸ್ಲಾಂ, ರಾಜಪೂತ ಹಾಗೂ ಮರಾಠ ಒತ್ತಡದೆದುರು ಬಿದ್ದು, ಸಕ್ರಿಯವಾಗಿ ಎದುರಿಸಲಾರದಲ್ಲೆಲ್ಲ ನಿಷ್ಕ್ರಿಯವಾಗಿ ಎಡೆಬಿಡದೆ ಪ್ರತೀಕಾರವೆಸಗುತ್ತ, ತನ್ನ ಸಮಸ್ಯೆಯನ್ನು ತ್ರರಿಸ ಲಾರದ ಅಥವಾ ತನ್ನೊಡನೆ ಒಪ್ಪಂದಕ್ಕೆ ಬರಲಾರದ ಪ್ರತಿಯೊಂದು ಸಾಮ್ರಾಜ್ಯವನ್ನೂ ವಿನಾಶಕ್ಕೆ ಶಪಿಸಿ ಒಗೆದು, ತನ್ನ ಪುನರುತ್ಥಾನದ ದಿನ ವನ್ನು ನಿರೀಕ್ಷಿಸುತ್ತ ಬದುಕಿ ಉಳಿಯಲು ಶಕ್ತವಾಯಿತು. ಈಗಲೂ ನಮ್ಮ ಕಣ್ಣೆದುರೇ ಅಂಥ ಶಕ್ತಿ ಕಾರ್ಯಾಸಕ್ತವಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಅದ್ಭುತವನ್ನು ಸಾಧಿಸಿದ ನಾಗರಿಕತೆಯ ಅತ್ಯಗಾಧ ಚೈತನ್ಯದ ಬಗೆ ಗಾಗಲಿ; ಅದರ ಬುನಾದಿಯನ್ನು ಅಬಾಹ್ಯವಾದ ಆತ್ಮ-ಅಂತರ್ ಮನಗಳ ಮೇಲೆ ಕಟ್ಟಿ, ಅದರ ಅಸ್ತಿತ್ವದ ಬೇರು-ಜೊಡ್ಡೆಯನ್ನಾಗಿ ಆಧ್ಯಾತ್ಮಿಕ ಹಾಗೂ

ಸಾಂಸ್ಕೃತಿಕ ಏಕತೆಯನ್ನು ತೆಗೆದುಕೊಂಡ ಪ್ರಾಚೀನ ಮಹರ್ಷಿಯರ ಬುದ್ಧಿವಂತಿಕೆಯ ಬಗೆಗಾಗಲಿ ಏನುಹೇಳಲಾದೀತು! ಆ ಮಹರ್ಷಿಯರು ತೆಗೆದುಕೊಂಡದ್ದು ಅಂಥ ಏಕತೆಯ ಬರಿ ದುರ್ಬಲ ಪುಷ್ಪವನ್ನಲ್ಲ, ವಿನಾಶಿಯಾದ ಮೇಲ್ಗಟ್ಟಡವನ್ನಲ್ಲ—ಅದರ ಅಮರ ಅಡಿಗಟ್ಟನ್ನು !

ಕೇಂದ್ರೀಕರಣ ಹಾಗೂ ಸಾರೂಪ್ಯಗಳ ಗೌಣತ್ವ:

ಆದರೆ ಆಧ್ಯಾತ್ಮಿಕ ಐಕ್ಯವೆಂಬುದು ಬಹುವಿಸ್ತೃತವೂ ಶಿಥಿಲವೂ ಆದ ವಸ್ತು ಮತ್ತು ರಾಜಕೀಯ ಹಾಗೂ ಬಾಹ್ಯ ಐಕ್ಯದಂತೆ ಕೇಂದ್ರೀಕರಣ ಹಾಗೂ ಸಾರೂಪ್ಯ ತರಲು ಒತ್ತಾಯಿಸುವಂಥದಲ್ಲ; ತದ್ವಿರುದ್ಧವಾಗಿ ಅದು ಪದ್ಧತಿಯಲ್ಲಿ ಅತ್ತಿತ್ತ ಹರಡಿರುತ್ತದೆ ಮತ್ತು ಬಹುಸುಲಭವಾಗಿ ಅಸಂಖ್ಯ ಪ್ರಕಾರಗಳಿಗೂ ಸ್ವತಂತ್ರ ಜೀವನಕ್ಕೂ ಅವಕಾಶಕೊಡುತ್ತದೆ. ಪ್ರಾಚೀನ ಭಾರತದ ಏಕೀಕರಣದ ಹಾದಿಯಲ್ಲಿದ್ದ ತೊಂದರೆಯ ಗುಟ್ಟನ್ನಿಲ್ಲಿ ನಾವು ಭೇದಿಸುವೆವು. ಭಾರತೈಕ್ಯವನ್ನು ಸಾಮಾನ್ಯ ಸಾಧನವಾದ ಕೇಂದ್ರೀಕೃತ, ಸರೂಪ, ಸಾಮ್ರಾಜ್ಯಕ ಸರಕಾರವು ಸ್ವತಂತ್ರ ಭಿನ್ನಮಾರ್ಗಗಮನ, ಸ್ಥಳೀಯ ಸ್ವಾಯತ್ತ ಶಾಸನ, ಪ್ರತಿಷ್ಠಿತ ಸಾಮಷ್ಟಿಕ ಸ್ವಾಧಿಕಾರಗಳನ್ನು ದಮನಮಾಡಿ ಸಾಧಿಸಲಾರದು; ಮತ್ತು ಈ ದಿಶೆಯಲ್ಲಿ ಪ್ರಯತ್ನಮಾಡಿದ ಪ್ರತಿಯೊಂದು ಸಲವೂ ಎಷ್ಟೇ ದೀರ್ಘಕಾಲಿಕ ಆಭಾಸಿಕ ಜಯದೊರೆತರೂ ಕೊನೆಯಲ್ಲಿ ಅಪಜಯವೇ ಉಂಟಾಯಿತು. ಇಷ್ಟಲ್ಲದೆ, ಭಾರತದ ಭವಿಷ್ಯವಿಧಾತರು ವಿವೇಕದಿಂದ ಅಂಥ ಪ್ರಯತ್ನ ಸೋಲುವಂತೆ ಮಾಡಿದರೆನ್ನಬೇಕು—ಏಕೆಂದರೆ ಭಾರತದ ಅಂತರಾತ್ಮ ಸಾಯದಿರಲಿ, ಅದು ತನ್ನ ಜೀವನದ ಆಳವಾದ ಆಕಾರಗಳನ್ನು ತಾತ್ಕಾಲಿಕ ಸುರಕ್ಷಿತತೆಯ ಯಂತ್ರಕ್ಕಾಗಿ ಮಾರಿಕೊಳ್ಳದಿರಲಿ ಎಂದು. ಭಾರತದ ಪುರಾತನ ಚೇತಸ್ಸಿಗೆ ಆವಶ್ಯಕ ಪ್ರತಿಭೆಯಿತ್ತು. ಅದರ ಸಾಮ್ರಾಜ್ಯಕಲ್ಪನೆಯೆಂದರೆ ಅಸ್ತಿತ್ವದಲ್ಲಿದ್ದ ಎಲ್ಲ ಬಗೆಯ ಪ್ರಾದೇಶಿಕ ಹಾಗೂ ಸಾಮುದಾಯಿಕ ಸ್ವಾತಂತ್ರ್ಯವನ್ನು ಮಾನಿಸುವ, ಬದುಕಿದ್ದ ಯಾವ ಸ್ವಾಯತ್ತ ಆಳಿಕೆಯನ್ನೂ ಅನವಶ್ಯಕವಾಗಿ ದಮನಮಾಡದ, ಯಾಂತ್ರಿಕ ಒಂದುತನವನ್ನಲ್ಲದ ತನ್ನ ಬಾಳಿನ ಸಾಮರಸ್ಯವನ್ನು ಸಾಧಿಸುವ ಶಾಸನ. ಆ ಬಳಿಕ ಸಮಸ್ಯಾಪರಿಹಾರವನ್ನು ಸುರಕ್ಷಿತವಾಗಿ ಸಾಧಿಸಲು ಮತ್ತು ಹಾಗೆ ಸಾಧಿ

ಸಲ್ಪಟ್ಟು ಅದು ತನ್ನ ನಿಜವಾದ ಮಾರ್ಗರೂಪ ತಳಹದಿಗಳನ್ನು ಪಡೆಯಲು ಬೇಕಾದ ಸನ್ನಿವೇಶವೇ ಹೊರಟುಹೋಗಿಬಿಟ್ಟಿತ್ತು; ಅದರ ಬದಲು ಅಲ್ಲಿ ಏಕಪ್ರಶಾಸಕ ಚಕ್ರಾಧಿಪತ್ಯವನ್ನು ಸ್ಥಾಪಿಸುವ ಪ್ರಯತ್ನ ನಡೆಯಿತು. ತತ್ಕಾಲದ ಬಾಹ್ಯ ಆವಶ್ಯಕತೆಯಿಂದ ಎಸಗಿದ ಆ ಪ್ರಯತ್ನ, ಎಷ್ಟೇ ಮಹತ್ವ ಹಾಗೂ ವೈಭವದಿಂದ ನಡೆದರೂ, ನಿಷ್ಫಲವಾಯಿತು. ಅದು ಸೋಲಲು ಕೂಡಲೇ ಭಾರತೀಯ ಚೇತನೆಯ ನಿಜವಾದ ಭಾವಕ್ಕೆ ಅನನುಗುಣವಾದ ಪ್ರವೃತ್ತಿ ಪೇಶದಲ್ಲಿದ್ದದ್ದೇ ಕಾರಣ. ಸಾಮುದಾಯಿಕ ಸ್ವಾಯತ್ತ ಆಳಿಕೆಗಳ ಸಾಮರಸ್ಯವೇ ಭಾರತೀಯ ರಾಜಕೀಯ– ಸಾಮಾಜಿಕ ಪದ್ಧತಿಯ ಅಡಿಯಿರುವ ತತ್ವವೆಂಬುದನ್ನು ಆಗಲೇ ನಾವು ಅರಿತಿದ್ದೇವೆ; ಗ್ರಾಮಸ್ವಾಯತ್ತತೆ, ಪಟ್ಟಣ– ರಾಜಧಾನಿ– ನಗರ– ಜಾತಿ– ಸಂಘ-ಕುಟುಂಬ– ಕುಲ– ಧಾರ್ಮಿಕ ಬಣ, ಪ್ರಾದೇಶಿಕ ಘಟಕಗಳ ಸ್ವಾಯತ್ತತೆ ಇವುಗಳ ಸಾಮರಸ್ಯವೇ ಅದರ ಒಳಸೂತ್ರ. ಈ ಸ್ವಾಯತ್ತತೆಗಳನ್ನು ಒಂದು ಅನಿರ್ಬದ್ಧ, ಸಚೇತನ, ಸಾವಯವ ಪದ್ಧತಿಯಲ್ಲಿ ಸಮರಸಗೊಳಿಸುವ ಮತ್ತು ಒಟ್ಟಿಗೆಕೂಡಿಸಿ ಇಡುವ ಸಾಧನವೆಂದರೆ ಸರಕಾರ, ರಾಜ್ಯ ಅಥವಾ ಸಂಯುಕ್ತ ಗಣರಾಜ್ಯವಾಗಿತ್ತು. ಈ ಸರಕಾರ– ಜನ– ರಾಷ್ಟ್ರಗಳನ್ನು ಅವುಗಳ ಸ್ವಾಯತ್ತತೆಯನ್ನು ಮಾನಿಸಿಯೇ ಹೆಚ್ಚು ವಿಸ್ತೃತ ಅನಿರ್ಬದ್ಧ, ಚೈತನ್ಯ ಪೂರ್ಣ ಅವಯವಿಯನ್ನಾಗಿ ಏಕೀಕರಿಸುವುದೇ ಸಾಮ್ರಾಜ್ಯಕ ಸಮಸ್ಯೆಯಾಗಿತ್ತು. ತನ್ನ ಸದಸ್ಯರಲ್ಲಿ ಐಕ್ಯ– ಶಾಂತಿಗಳನ್ನುಳಿಸಿಕೊಂಡು, ಹೊರಗಿನ ದಾಳಿಯಿಂದ ಸುರಕ್ಷಿತವಾಗಿ ಇಡುವ ಮತ್ತು ತನ್ನ ಅಂಗಭೂತ ಸಾಮುದಾಯಿಕ ಹಾಗೂ ಪ್ರಾದೇಶಿಕ ಘಟಕಗಳಿಲ್ಲವುಗಳ ಬಲಾತ್ಕಾರರಹಿತವಾದ ಚಟುವಟಿಕೆಯ ಜೀವನದಲ್ಲಿಯ ಏಕತಾನ– ಅನೇಕತಾನಗಳಲ್ಲಿ ಸಾಗುವ ಅನಾಹತ ವ್ಯವಹಾರ ಮತ್ತು ವಿಕಾಸಗಳನ್ನು ಸಮಷ್ಟೀಕರಿಸುವ ಒಂದು ಪದ್ಧತಿಯನ್ನು ಪ್ರಸ್ಥಾಪಿಸಬೇಕಾಗಿತ್ತು. ಆ ಪದ್ಧತಿ ಭಾರತೀಯ ಸಂಸ್ಕೃತಿ– ನಾಗರಿಕತೆಗಳ ಶರೀರ- ಆತ್ಮಗಳ ಅಪ್ರತಿಹತವೂ ಸಕ್ರಿಯವೂ ಆದ ಬದುಕಿಗೆ ಅವಕಾಶ ಕಲ್ಪಿಸಿಕೊಡುವಂಥದಲ್ಲದೆ, ಧರ್ಮದ ಅಖಿಲ ವಿಭವಯುಕ್ತ ಕರ್ತವ್ಯ ನಿರ್ವಹಣವನ್ನು ಸಾಧಿಸುವಂಥದೂ ಆಗಿರಬೇಕಾಗಿತ್ತು.

ಭಾರತದ ಪುರಾಣದ ಉಕ್ತ ಸಮಸ್ಯೆಯನ್ನು ಈ ಅರ್ಥದಲ್ಲಿ

ಅರಿತುಕೊಂಡಿತ್ತು. ಆ ಮೇಲಿನ ಪ್ರಶಾಸಕ ಚಕ್ರಾಧಿಪತ್ಯ ಕೇವಲ ಪಾಕ್ಷಿಕವಾಗಿ ಅದನ್ನೊಪ್ಪಿಕೊಂಡಿತ್ತು. ಆದರೆ ಕೇಂದ್ರೀಕರಣ ಪ್ರವೃತ್ತಿ ಯಾವಾಗಲೂ ಇರುವಂತೆ ಅದರ ಪ್ರವೃತ್ತಿಯಾದರೂ ನಿಧಾನವಾಗಿ, ತಿಳಿಯದಂತೆಯೋ ಎಂಬಂತೆ, ಪಟುತರವಾಗಿ ಅಲ್ಲದಿದ್ದರೂ ತನ್ನ ಆಧೀನದಲ್ಲಿದ್ದ ಸ್ವಾಯತ್ತತೆಗಳ ಬಲವನ್ನು ಕಡಿಮೆಮಾಡುವುದೇ ಆಗಿತ್ತು. ಇದರ ಪರಿಣಾಮವಾಗಿ ಕೇಂದ್ರ ಪ್ರಾಧಿಕಾರ ದುರ್ಬಲವಾಗಿದ್ದಾಗಲೆಲ್ಲ ಭಾರತೀಯ ಬಾಳಿಗೆ ಮುಖ್ಯವಾಗಿ ಬೇಕಾದ ಪ್ರಾದೇಶಿಕ ಸ್ವಾಯತ್ತತೆಯ ಅಸ್ಖಲಿತ ತತ್ವವು ಪುನಃ ಉದಯವಾಗಿ ಪ್ರಸ್ಥಾಪಿಸಿದ ಕೃತಕ ಐಕ್ಯಕ್ಕೆ ಭಂಗವುಂಟುಮಾಡಿತಲ್ಲದೆ, ನಿರೀಕ್ಷೆಯಂತೆ ಅಖಿಲ ಜೀವನದ ಸ್ವತಂತ್ರತರ ಆದರೂ ಏಕೀಕೃತ ನಡೆಗೆ ಮತ್ತು ಸಾಮಾಜಿಕ ತೀವ್ರತಾಸಿದ್ಧಿಗೆ ಅನುಕೂಲವಾಗಲಿಲ್ಲ. ಇದರ ಮೇಲೆ ಸಾಮ್ರಾಜ್ಯಕ ರಾಜ್ಯಪ್ರಭುತ್ವವು ಸ್ವತಂತ್ರ ಸಭೆಗಳ ಬಲವನ್ನು ಕುಂದಿಸುವ ಪ್ರವೃತ್ತಿಯನ್ನು ತಾಳಿದ್ದರಿಂದ ಸಮಷ್ಟಿ ಘಟಕಗಳು ಏಕೀಕೃತ ಶಕ್ತಿಯ ಅಂಗಗಳಾಗಿ ಉಳಿಯುವುದನ್ನು ಬಿಟ್ಟು ಪ್ರತ್ಯೇಕವಾಗಿ ವಿಭಾಜಕಕಾರಕಗಳಾದವು. ಗ್ರಾಮಸಮಷ್ಟಿ ತನ್ನ ಬಲದಲ್ಲಿ ಸ್ವಲ್ಪ ಉಳಿಸಿಕೊಂಡಿತು; ಆದರೆ ಸರ್ವೋಚ್ಚ ಪ್ರಾಧಿಕಾರದೊಡನೆ ಸಚೇತನ ಸಂಬಂಧ ಕಡಿದುಕೊಂಡು, ವಿಶಾಲತರ ರಾಷ್ಟ್ರೀಯ ಭಾವನೆಯನ್ನು ಕಳೆದುಕೊಂಡು, ತನ್ನ ಸ್ವಯಂಪೂರ್ಣ ಸಂಕುಚಿತ ಬಾಳನ್ನು ಪಾಲಿಸುವ ಯಾವ ವಿದೇಶೀಯ ಅಥವಾ ಸ್ವದೇಶೀಯ ಶಾಸನವನ್ನಾದರೂ ಸ್ವೀಕರಿಸಲು ಸಿದ್ಧವಾಯಿತು, ಧಾರ್ಮಿಕ ಸಮುದಾಯಗಳೂ ಅದೇ ಭಾವನೆಯನ್ನು ತಾಳಿದವು. ನಿಜವಾದ ಆವಶ್ಯಕತೆಯಿಲ್ಲದೆ ಜಾತಿಗಳು ಗುಣಿತ ಸಂಖ್ಯೆಯಲ್ಲಿ ಹೆಚ್ಚಿ, ದೇಶದ ಆಧ್ಯಾತ್ಮಿಕ ಇಲ್ಲವೆ ಆರ್ಥಿಕ ಆವಶ್ಯಕತೆಗೆ ಏನೂ ಸಂಬಂಧಿಸದಂತೆ ಬೆಳೆದು, ಬರಿ ಪವಿತ್ರ ಸಾಮಾಯಿಕ ವಿಭಾಗಗಳಾದವಲ್ಲದೆ, ಮೂಲತಃ ತಾವಿದ್ದಂತೆ ಜೀವನ- ಸಾಮರಸ್ಯದ ಸಮುಗತಿಯ ವ್ಯವಹಾರದ ಕಾರಕಗಳಾಗುವುದನ್ನುಳಿದು ಪ್ರತ್ಯೇಕೀಕರಣದ ಒಂದು ಶಕ್ತಿಯಾಗಿ ಪರಿಣಮಿಸಿದವು. ಪ್ರಾಚೀನ ಭಾರತದಲ್ಲಿ ಜಾತಿ ವಿಭಾಗಗಳು ಜನತೆಯ ಸಂಯುಕ್ತ ಜೀವನಕ್ಕೆ ಅಡ್ಡಿಗಳಾಗಿದ್ದವೆಂಬುದೂ ಆಮೇಲೆ ಕೂಡ ರಾಜಕೀಯ ಕಲಹ ಹಾಗೂ ಒಡಕುಗಳನ್ನು ಪ್ರೇರಿಸುವ ಪಟುತರ ಶಕ್ತಿಯಾದವೆಂಬುದೂ ಸತ್ಯ- ಅವು ಹಾಗೇನಾದರೂ ಆಗಿದ್ದರೆ ಅದು ಕಟ್ಟಕಡೆಗೆ,

ಕೊನೆಯ ಅವನತಿಯಲ್ಲಿ, ಮರಾಠ ಸಂಯುಕ್ತರಾಜ್ಯದ ಅನಂತರದ ಇತಿಹಾಸದಲ್ಲಿ ಅಷ್ಟೆ; ಆದರೆ ಅವು ಸಾಮಾಜಿಕ ವಿಭಜನೆಯ ಹಾಗೂ ಸ್ವತಂತ್ರವೂ ಸಕ್ರಿಯವಾಗಿ ಸಂಯುಕ್ತವೂ ಆದ ಬಾಳಿನ ಪುನಃ ಸಂವಿಧಾನಕ್ಕೆ ವಿಘ್ನವಾದ ನಾರುವ ವರ್ಗೀಕರಣದ ನಿಷ್ಕ್ರಿಯ ಬಲವಾದವೆಂಬುದೇನೋ ನಿಜ.

ಪಠಾನ ಮತ್ತು ಮೊಗಲರ ಕಾಲದ ನಿರಂಕುಶ ಸಾಮ್ರಾಜ್ಯಗಳು:

ಮಹಾಮದೀಯರ ದಾಳಿಗೆ ಪೂರ್ವದಲ್ಲಿ ಭಾರತೀಯ ಪದ್ಧತಿಗೆ ಮುತ್ತಿಗೆ ಹಾಕಿದ ದುಷ್ಪರಿಣಾಮಗಳೆಲ್ಲವೂ ಸಶಕ್ತವಾಗಿ ಪ್ರಕಟವಾಗಲಿಲ್ಲ; ಆದರೆ ಅವೆಲ್ಲವೂ ಆಗಲೇ ತಮ್ಮ ಆರಂಭದಶೆಯಲ್ಲಿದ್ದಿರಬೇಕು ಮತ್ತು ಪಠಾನ ಹಾಗೂ ಮೊಗಲ ಸಾಮ್ರಾಜ್ಯಗಳು ನಿರ್ಮಿಸಿದ ಆವರಣದಲ್ಲಿ ಅವು ಮತ್ತಷ್ಟು ಬೇಗ ಹೆಚ್ಚಿ ಪ್ರಕಟವಾಗತೊಡಗಿದವು. ಎಷ್ಟೇ ರಾರಾಜಿಸುವವೂ ಬಲಿಷ್ಠವಾದವೂ ಆಗಿದ್ದರೂ ಈ ಅನಂತರದ ಸಾಮ್ರಾಜ್ಯಕ ಪದ್ಧತಿಗಳು ತಮ್ಮ ಹಿಂದಿನವುಗಳಿಗಿಂತ ಹೆಚ್ಚಾಗಿ (ತಮ್ಮ ಸ್ವೇಚ್ಛಾಧಿಕಾರದ ಫಲವಾಗಿ) ಕೇಂದ್ರೀಕರಣದ ದುಷ್ಪರಿಣಾಮಗಳಿಂದ ನರಳಿದವು; ಮತ್ತು ಭಾರತೀಯ ಪ್ರಾದೇಶಿಕ ಜೀವನದ ಕೃತಕ ಏಕೀಕೃತ ರಾಜ್ಯಭಾರದ ವಿರುದ್ಧ ನಿಲ್ಲುವ ಅಪೇಪ್ರವೃತ್ತಿಯ ದೆಸೆಯಿಂದ ಅವು ಪದೇ ಪದೇ ಮುರಿದುಬೀಳುತ್ತಿದ್ದವು. ಅವಕ್ಕೆ ನಿಜವಾದ ಬದುಕೂ ಜನಜೀವನದಲ್ಲಿ ಅನಿರ್ಬದ್ಧ ಸಂಬಂಧವೂ ಇಲ್ಲದಿದ್ದರಿಂದ ವಿದೇಶೀಯ ದಾಳಿಗಾರರ ವಿರುದ್ಧವಾಗಿ ತಮ್ಮನ್ನು ಪರಿಣಾಮಕರವಾಗಿ ಸಂರಕ್ಷಿಸುವ ಸರ್ವಸಾಧಾರಣ ದೇಶಪ್ರೇಮವನ್ನು ಹುಟ್ಟಿಸಲು ಅಸಮರ್ಥವಾದವು. ಕೊನೆಯಲ್ಲಿ ಯಾಂತ್ರಿಕವಾದ ಪಾಶ್ಚಾತ್ಯ ಆಳಿಕೆ ಬಂದು ಬದುಕಿ ಉಳಿದಿದ್ದ ಎಲ್ಲ ಸಾಮುದಾಯಿಕ ಅಥವಾ ಪ್ರಾದೇಶಿಕ ಸ್ವಾಯತ್ತತೆಗಳನ್ನೂ ಮೆಟ್ಟಿ ತುಳಿದು ಯಂತ್ರಸಹಜ ಮೃತಐಕ್ಯವನ್ನು ಆದೇಶವಾಗಿ ಇಟ್ಟಿತು. ಆದರೆ ತದ್ವಿರುದ್ಧ ಪ್ರತೀಕಾರದಲ್ಲಿ ಅದೇ ಹಳೆಯ ಪ್ರವೃತ್ತಿಗಳು ಪುನರುಜ್ಜೀವಿಸುವುದನ್ನು ನಾವು ಕಾಣುತ್ತೇವೆ; ಭಾರತೀಯ ಜನಾಂಗಗಳ ಪ್ರಾದೇಶಿಕ ಜೀವನದ ಪುನಃ ಸಂವಿಧಾನದತ್ತಣ ಒಲವು, ಕುಲ– ಭಾಷೆಗಳ ನಿಜವಾದ ಉಪಭೇದಗಳ ಮೇಲೆ ನಿಂತ ಪ್ರಾಂತೀಯ ಸ್ವಾಯತ್ತತೆಯ ಬೇಡಿಕೆ, ರಾಷ್ಟ್ರೀಯ ನಿಕಾಯದ ನೈಸರ್ಗಿಕ ಬಾಳಿಗೆ ಅಗತ್ಯವಾದ ಸಚೇತನ ಘಟಕ

ವೆನಿಸಿದ ವಿನಷ್ಟ ಗ್ರಾಮಸಮಷ್ಟಿಯ ಆದರ್ಶ ಮತ್ತೆ ಬೇಕೆಂಬ ಭಾರತೀಯ ಮನ–ಅಲ್ಲದೆ, ಇನ್ನೂ ಪುನರುದಯಿಸದ ಆದರೂ ಮುಂಬರಿದ ಮನಗಳ ಮೇಲೆ ಮೂಡುತ್ತಿರುವ ಭಾರತೀಯ ಬಾಳಿಗೆ ಯುಕ್ತವಾದ ಸಾಮಷ್ಟಿಕ ತಳಹದಿಯ ಸತ್ಯತರವಾದ ಕಲ್ಪನೆ ಮತ್ತು ಆಧ್ಯಾತ್ಮಿಕ ನೆಲಗಟ್ಟಿನ ಮೇಲೆ ಭಾರತೀಯ ಸಮಾಜ ಹಾಗೂ ರಾಜಕೀಯಗಳನ್ನು ಹೊಸದಾಗಿಸಿ ಪುನಾ ರಚಿಸುವ ಆಲೋಚನೆಗಳು ಪುನಃ ಉದಯಿಸುತ್ತಿವೆ.

ಭಾರತೀಯ ಐಕ್ಯಸಾಧನೆ ಅಪಜಯಕ್ಕೀಡಾದುದರಿಂದ ಪರ ರಾಜರ ದಾಳಿ ಮತ್ತು ವಿದೇಶೀಯರಿಗೆ ಕೊನೆಯದಾಗಿ ಅಡಿಯಾಳಾಗುವುದು ಪ್ರಾಪ್ತವಾಯಿತು. ಅಂಥ ಅಪಜಯವುಂಟಾಗಲು ಐಕ್ಯ ಸಾಧನಾಕಾರ್ಯದ ವ್ಯಾಪ್ತಿ ಮತ್ತು ವೈಲಕ್ಷಣಗಳೇ ಕಾರಣ. ಸುಲಭೋಪಾಯವಾದ ಕೇಂದ್ರೀ ಕೃತ ಸಾಮ್ರಾಜ್ಯ ನಿಜವಾಗಿ ಭಾರತದಲ್ಲಿ ಜಯಹೊಂದಲಾರದೆ ಹೋಯಿತು. ಆದರೆ ಅದೊಂದೇ ಸಾಧ್ಯವಾದ ಉಪಾಯವೆಂದು ತೋರಿದ್ದರಿಂದ ಅದನ್ನು ಸ್ಥಾಪಿಸಲು ಪುನಃ ಪುನಃ ಪ್ರಯತ್ನಿಸಿ ಅರ್ಧಮರ್ಧ ಕೃತಕೃತ್ಯವಾಗಿ, ಹಾಗೆ ಕೃತಕೃತ್ಯವಾದ್ದರಿಂದ ತತ್ಕಾಲದಲ್ಲಿಯೂ ಹಾಗೇ ಬಹಳ ಕಾಲದವರೆಗೂ ಅದೇ ನ್ಯಾಯವೆಂದು ತೋರಿದರೂ ಕೊನೆಯಲ್ಲಿ ಅದಕ್ಕೆ ಅಪಜಯ ಒದ ಗಿಯೇ ತೀರುತ್ತಿತ್ತು. ಭಾರತದ ಪುರಾಣಮನ ಸಮಸ್ಯೆಯ ಮುಖ್ಯ ಲಕ್ಷಣ ವನ್ನು ಇದಕ್ಕೂ ಚೆನ್ನಾಗಿ ಅರಿತುಕೊಂಡಿತ್ತೆಂದು ಆಗಲೇ ಹೇಳಲಾಗಿದೆ. ವೈದಿಕ ಋಷಿಗಳೂ ಅವರ ಬಳಿಕ ಬಂದ ಋಷಿಗಳೂ ಭಾರತೀಯ ಜೀವನ ಕ್ಕೊಂದು ಆಧ್ಯಾತ್ಮಿಕ ತಳಪಾಯವನ್ನು ನಿರ್ಮಿಸಿ ಈ ಪರ್ಯಾಯ ದ್ವೀಪದ (ದ್ವೀಪಕಲ್ಪದ) ಕುಲಗಳ ಹಾಗೂ ಜನಾಂಗಗಳ ಆಧ್ಯಾತ್ಮಿಕ ಹಾಗೂ ಸಾಂಸ್ಕೃ ತಿಕ ಐಕ್ಯವನ್ನು ಸ್ಥಾಪಿಸುವುದು ತಮ್ಮ ಮುಖ್ಯ ಕರ್ತವ್ಯವೆಂದು ಬಗೆದಿದ್ದರು. ಆದರವರು ರಾಜಕೀಯ ಏಕೀಕರಣದ ಆವಶ್ಯಕತೆಯನ್ನು ಅರಿಯದವರಾಗಿರ ಲಿಲ್ಲ. ವೈರಾಜ್ಯ, ಸಾಮ್ರಾಜ್ಯ ಮುಂತಾದ ಭಿನ್ನ ಭಿನ್ನ ಪ್ರಮಾಣದ ಅಧಿ ರಾಜ್ಯ, ಸಂಯುಕ್ತ ರಾಜ್ಯಗಳ ಬಾವುಟದಡಿಯಲ್ಲಿ ಸುಸ್ಥಾಪಿತವಾಗಬಯ ಸುವ ಆರ್ಯ ಜನಾಂಗಗಳ ಕುಲ–ಜೀವನದ ಸತತ ಪ್ರವೃತ್ತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ, ಈ ಮಾರ್ಗವನ್ನು ಅದರ ಕೊನೆವರೆಗೆ ಅನುಸರಿಸುವುದೇ ಸರಿ ಯಾದ ಮಾರ್ಗವೆಂದು ತಿಳಿದು, ಆ ಪ್ರಕಾರ ಆ ಸಮುದ್ರದಿಂದ ಈ ಸಮುದ್ರದ

ವರೆಗಿನ ಭಾರತೀಯ ರಾಜ್ಯಗಳ ಹಾಗೂ ಜನಾಂಗಗಳ ಸ್ವಾಯತ್ತತೆಯನ್ನು ನಾಶವಾಗಗೊಡದಂತೆ ಒಂದುಗೂಡಿಸುವ ಸಾಮ್ರಾಜ್ಯಕ ಶಾಸನದ ಚಕ್ರವರ್ತಿಯ ಆದರ್ಶವನ್ನು ಆ ಋಷಿಗಳು ವಿಕಾಸಗೊಳಿಸಿದರು. ಭಾರತೀಯ ಜೀವನದಲ್ಲಿಯ ಇತರ ಆದರ್ಶಗಳನ್ನು ಹೇಗೋ ಹಾಗೆ ಇದಕ್ಕೂ ಅವರು ಆಧ್ಯಾತ್ಮಿಕ ಹಾಗೂ ಧಾರ್ಮಿಕ ಮಂಜೂರಿಯನ್ನು ಕೊಟ್ಟರು; ಅಶ್ವಮೇಧ-ರಾಜಸೂಯ ಯಾಗಗಳು ಅದರ ಬಾಹ್ಯ ಪ್ರತೀಕಗಳೆನಿಸಿದವು. ಅವನ್ನು ಮಾಡುವುದು ಸಮರ್ಥ ಅರಸನ ಧರ್ಮ; ರಾಜೋಚಿತ ಧಾರ್ಮಿಕ ಕರ್ತವ್ಯವೆಂದರೆ ಆ ಆದರ್ಶವನ್ನು ಪಾಲಿಸಲು ಯತ್ನಿಸುವುದೇ ಆಗಿದೆ ಎಂದು ಅವರು ವಿಧಿಸಿದರು. ಆ ಧರ್ಮದ ಪ್ರಕಾರ ಆತನ ಆಳಿಕೆಗೊಳಗಾದ ಜನಾಂಗಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗಲಿ, ಅವರ ಅರಸುಮನೆತನಗಳನ್ನು ಸಿಂಹಾಸನಚ್ಯುತಗೊಳಿಸುವುದು ಇಲ್ಲವೆ ಅವುಗಳ ಆಳರಸರ ಬದಲು ತನ್ನ ಅಧಿಕಾರಿಗಳನ್ನೂ ರಾಜ್ಯಪಾಲರನ್ನೂ ಗದ್ದುಗೆಗೇರಿಸುವುದಾಗಲಿ ಸಾಧ್ಯವಿದ್ದಿಲ್ಲ. ಆಂತರಿಕ ಶಾಂತಿಯನ್ನು ಉಳಿಸಿಕೊಳ್ಳಬಲ್ಲ ಮತ್ತು ದೇಶದ ಎಲ್ಲ ಬಲಗಳನ್ನು ಬೇಕಾದಾಗ ಒಟ್ಟುಗೂಡಿಸಬಲ್ಲ ಸೈನಿಕ ಶಕ್ತಿಯನ್ನುಳ್ಳ ಆಧಿರಾಜ್ಯಕ ಶಕ್ತಿಯನ್ನು ಸ್ಥಾಪಿಸುವುದೇ ಅವನ ಕರ್ತವ್ಯವಾಗಿತ್ತು. ಈ ಪ್ರಾಥಮಿಕ ಕರ್ತವ್ಯದ ಜೊತೆಗೆ ಬಲವಾದ ಹಸ್ತಗ್ರಾಹದಲ್ಲಿ ಭಾರತೀಯ ಧರ್ಮದ ಪಾಲನೆ ಹಾಗೂ ಧಾರಣೆಯ ಆದರ್ಶ-ಅಂದರೆ ಭಾರತದ ಆಧ್ಯಾತ್ಮಿಕ, ಧಾರ್ಮಿಕ, ನೈತಿಕ ಮತ್ತು ಸಾಮಾಜಿಕ ಸಂಸ್ಕೃತಿಯ ಸರಿಯಾದ ಪ್ರವರ್ತನೆ ಸಾಗುವಂತೆ ನೋಡಿಕೊಂಬುದನ್ನು ಸೇರಿಸಲಾಯಿತು.

ಇತಿಹಾಸ-ಪುರಾಣಗಳಲ್ಲಿಯ ಧರ್ಮರಾಜ್ಯ:

ಈ ಆದರ್ಶ ಪೂರ್ಣವಾಗಿ ಅರಳಿದ್ದನ್ನು ಮಹಾರ್ಘ ಇತಿಹಾಸ-ಪುರಾಣಗಳಲ್ಲಿ ಕಾಣಬಹುದು. ಮಹಾಭಾರತವು ಧರ್ಮರಾಜ್ಯ-ಸ್ಥಾಪನೆಯ ಆಖ್ಯಾನಿಕ ಅಥವಾ ಐತಿಹಾಸಿಕ ಪ್ರಾಮುಖ್ಯವುಳ್ಳ ಪ್ರಯತ್ನದ ಅಭಿಲೇಖ. ಸಿಡಿವಗೆಯ ಶಿಶುಪಾಲ ಕೂಡ ಯುಧಿಷ್ಠರನು ಧರ್ಮಕಾರ್ಯ ಮಾಡುತ್ತಿದ್ದನೆಂಬ ಕಾರಣದಿಂದ ರಾಜಸೂಯ ಯಾಗದಲ್ಲಿ ತಲೆವಾಗಿ ಉಪಸ್ಥಿತನಾಗಿದ್ದನೆಂದು ಹೇಳಿ ಈ ಆದರ್ಶ ಅಷ್ಟು ಅನಿವಾರ್ಯ ಹಾಗೂ ಸರ್ವಸಂಮತ ಎಂದು

ಅವರಲ್ಲಿ ಚಿತ್ರಿಸಲಾಗಿದೆ. ಅಂಥ ಧರ್ಮರಾಜ್ಯದ ಸುಸ್ಥಿತ, ಸಾರ್ವತ್ರಿಕ ಸಾಮ್ರಾಜ್ಯದ ಆದರ್ಶ ಚಿತ್ರ ರಾಮಾಯಣದಲ್ಲಿದೆ. ಇವರಲ್ಯಾದರೂ ನಿರಂಕುಶ ಶೋಷಕ ಪ್ರಭುತ್ವವನ್ನು ಉಲ್ಲೇಖಿಸಿಲ್ಲ; ನಗರ, ಪ್ರಾಂತ ಮತ್ತು ಇತರ ಎಲ್ಲ ವರ್ಗಗಳ ಬೆಂಬಲವನ್ನು ಪಡೆದ ಸಾರ್ವತ್ರಿಕ ರಾಜಪ್ರಭುತ್ವವನ್ನೇ ಆದರ್ಶವೆಂದು ಹೇಳಲಾಗಿದೆ. ಈ ಬಗೆಯ ಪ್ರಭುತ್ವವು ಭಾರತೀಯ ಪದ್ಧತಿಯ ಸಾಮುದಾಯಿಕ ಸ್ವಾಯತ್ತತೆಗಳನ್ನು ಸಂಯೋಜಿಸಿ, ಧರ್ಮೋಕ್ತ ಸಂವಿಧಾನ ಹಾಗೂ ಕಾಯಿದೆಗಳನ್ನು ಎತ್ತಿಹಿಡಿಯುವ ರಾಜಪ್ರಭುತ್ವದ ವಿಸ್ತರಣವಾಗಿದೆ. ಇಲ್ಲಿ ಹೇಳಿದ ದಿಗ್ವಿಜಯದ ಆದರ್ಶವಾದರೂ ಸಂಘಟಿತ ಸ್ವಾತಂತ್ರ್ಯವನ್ನೂ ರಾಜಕೀಯ ಹಾಗೂ ಸಾಮಾಜಿಕ ಸಂಸ್ಥೆಗಳನ್ನೂ ನಾಶಗೊಳಿಸಿ, ಪರಾಜಿತ ಜನಾಂಗಗಳ ಆರ್ಥಿಕ ಸಂಪತ್ತನ್ನು ಶೋಷಿಸುವ ವಿಘಾತಕ ಹಾಗೂ ಲೂಟಿಗಾರ ದಾಳಿಯಲ್ಲ; ಅದೊಂದು ಯಾಜ್ಞಿಕ ಪ್ರಗಮನ. ಅದರಲ್ಲಿ ಸೈನಿಕ ಶಕ್ತಿಯ ಪರೀಕ್ಷೆಯಿರುತ್ತಿತ್ತು. ಅದರ ಪರಿಣಾಮವನ್ನು ಸುಲಭವಾಗಿ ಎಲ್ಲರೂ ಒಪ್ಪಿಕೊಂಡುಬಿಡುತ್ತಿದ್ದರು. ಏಕೆಂದರೆ, ಅಪಜಯ ಅದರಲ್ಲಿ ಅವಮಾನ–ದುಃಖಗಳನ್ನಾಗಲಿ ದಾಸ್ಯವನ್ನಾಗಲಿ ಒಡರಿಸುತ್ತಿದ್ದಿಲ್ಲ. ಧರ್ಮ ಮತ್ತು ರಾಷ್ಟ್ರಗಳ ಪ್ರತ್ಯಕ್ಷ ಐಕ್ಯಸ್ಥಾಪನೆಯಲ್ಲಷ್ಟೇ ಸಂಬಂಧವಿಟ್ಟುಕೊಂಡ ಆಧಿರಾಜ್ಯಕ ಶಕ್ತಿಯೊಂದಿಗೆ ಬಲವರ್ಧಕ ಅಂಟುಸಂಟನ್ನಷ್ಟೇ ಉಂಟುಮಾಡುತ್ತಿತ್ತು. ಹಳೆಯ ಋಷಿಗಳ ಆದರ್ಶ– ಉದ್ದೇಶಗಳು ಹೀಗೆ ಸ್ಪಷ್ಟವಾಗಿವೆ. ವಿಭಕ್ತವಾಗಿ ಹೋರಾಡುತ್ತಿದ್ದ ಜನಾಂಗಗಳ ಐಕ್ಯದ ಆವಶ್ಯಕತೆಯನ್ನೂ ಸೈನಿಕ ಹಾಗೂ ರಾಜಕೀಯ ಪ್ರಯೋಜನವನ್ನೂ ಅವರು ಕಂಡಿದ್ದರೆಂಬುದು ಸ್ಫುಟವಾಗಿದೆ; ಆದರೆ ಪ್ರಾದೇಶಿಕ ಜನಾಂಗಗಳ ಸ್ವತಂತ್ರ ಜೀವನವನ್ನು ಹಾಳು ಮಾಡಿಯಾಗಲಿ ಸಾಮುದಾಯಿಕ ಅಧಿಕಾರಗಳನ್ನು ನಷ್ಟಗೊಳಿಸಿಯಾಗಲಿ– ಮತ್ತು ಆ ಕಾರಣಕ್ಕಾಗಿ ನಿರ್ಮಿಸಿದ ಕೇಂದ್ರೀಕೃತ. ರಾಜಪ್ರಭುತ್ವ ಇಲ್ಲವೆ ಬಿಗಿಯಾದ ಏಕಛತ್ರಾಧಿಪತ್ಯದ ಸರಕಾರದಿಂದಾಗಲಿ ಅವನ್ನು ಸಾಧಿಸಕೂಡದೆಂಬುವನ್ನು ಅವರು ಅರಿತಿದ್ದರು. ಜನತೆಯ ಮನದ ಮೇಲೆ ಅಚ್ಚೊತ್ತಲೆಸಿದ ಅವರ ಆ ಕಲ್ಪನೆ ಪಾಶ್ಚಾತ್ಯ ನಿದರ್ಶನವಾದ ಆಧಿರಾಜ್ಯಕ ಅಥವಾ ಸಾಮ್ರಾಜ್ಯಕ ಅಧಿಪತಿಯ ಅಂಕೆಗೊಳಗಾದ ಸಂಯುಕ್ತ ರಾಜ್ಯಕ್ಕೆ ಹತ್ತಿರವಾಗಬಹುದು.

ವಾಯುವ್ಯದ ದುರ್ಬಲ ಸ್ಥಾನಗಳು:

ಯುಧಿಷ್ಠಿರನ ಧರ್ಮರಾಜ್ಯಕ್ಕೆ ಹಿಂದೆ ಅಂಥ ಎಷ್ಟೋ ಸಾಮ್ರಾಜ್ಯಗಳಿದ್ದವೆಂದು ಇತಿಹಾಸ– ಪುರಾಣ ಪರಂಪರೆ ಉಲ್ಲೇಖಿಸಿದರೂ ಎಂದಾದರೂ ಈ ಆದರ್ಶವನ್ನು ಜಯಪ್ರದವಾಗಿ ಕಾರ್ಯರೂಪಕ್ಕೆ ತಂದುದಕ್ಕೆ ಐತಿಹಾಸಿಕ ಸಾಕ್ಷಿಯಿಲ್ಲ. ಬುದ್ಧನ ಕಾಲದಲ್ಲೂ ಅನಂತರ ಚಂದ್ರಗುಪ್ತ ಚಾಣಕ್ಯರು ಮೊಟ್ಟಮೊದಲಿನ ಇತಿಹಾಸಪ್ರಸಿದ್ಧ ಭಾರತೀಯ ಸಾಮ್ರಾಜ್ಯವನ್ನು ಕಟ್ಟುತ್ತಿದ್ದಾಗಲೂ ದೇಶದ ತುಂಬ ಸ್ವತಂತ್ರ ರಾಜ್ಯಗಳೂ ಗಣರಾಜ್ಯಗಳೂ ಇದ್ದವಲ್ಲದೆ, ಅಲೆಕ್ಸಾಂಡರನ ದಾಳಿಯನ್ನೆದುರಿಸಲು ಏಕೀಕೃತ ಸಾಮ್ರಾಜ್ಯವಾವುದೂ ಇರಲಿಲ್ಲ. ಆದಕ್ಕೂ ಮೊದಲು ಯಾವುದಾದರೂ ಅಧಿರಾಜ್ಯವಿದ್ದಿದ್ದರೂ ಬಹಳ ಕಾಲ ಬಾಳುವ ಪದ್ಧತಿಯನ್ನಾಗಲಿ ಅಥವಾ ಸಾಧನವನ್ನಾಗಲಿ ಕಂಡುಹಿಡಿಯಲು ಶಕ್ತವಾಗಿರಲಿಲ್ಲ ಎಂಬುದು ಸುಸ್ಪಷ್ಟ. ಕಾಲಾವಕಾಶ ದೊರೆತಿದ್ದರೆ ಇದು ವಿಕಾಸಹೊಂದುತ್ತಿತ್ತು; ಆದರೆ ಈ ನಡುವೆ ಗಂಭೀರವಾದೊಂದು ಪರಿವರ್ತನ ನಡೆದುದರಿಂದ ಅದಕ್ಕಾಗಿ ಒಂದು ಸದ್ಯಃಕಾಲಿಕ ಪರಿಹಾರವನ್ನು ಹುಡುಕಬೇಕಾಯಿತು. ಇಂದಿನವರೆಗೂ ವಾಯುವ್ಯದ ದ್ವಾರಗಳ ಮೂಲಕವಾದ ದುರ್ಬಲಸ್ಥಾನವತ್ತೆಯೇ ಭಾರತ ದ್ವೀಪಕಲ್ಪದ ಇತಿಹಾಸಪ್ರಸಿದ್ಧ ಅಶಕ್ತಿ ಎನಿಸಿದೆ. ಹಳೆಯ ಭಾರತವು ಸಿಂಧುನದಿಯಿಂದ ಅತಿದೂರವಾಗಿ ಉತ್ತರಕ್ಕೆ ಹರಡಿಕೊಂಡಿರುವವರೆಗೆ ಈ ಅಶಕ್ತಿ ಇರಲಿಲ್ಲ; ಬಲಿಷ್ಠವಾದ ಗಾಂಧಾರ– ವಾಹ್ಲೀಕ ರಾಜ್ಯಗಳು ವಿದೇಶೀಯ ದಾಳಿಯ ವಿರುದ್ಧವಾಗಿ ನಿಂತ ಸುದೃಢ ದುರ್ಗವಾಗಿದ್ದವು. ಅಷ್ಟರಲ್ಲಿ ಸಂಘಟಿತ ಪಾರಸೀಕ ಸಾಮ್ರಾಜ್ಯದೆದುರು ನಿಲ್ಲಲಾರದೆ ಅವು ಅಳಿಸಿಹೋಗಿದ್ದವು. ಅಂದಿನಿಂದ ಮುಂದೆ ಸಿಂಧೂತ್ತರ ದೇಶಗಳು ಭಾರತದ ಭಾಗವಾಗುವುದನ್ನುಳಿದವಷ್ಟೇ ಅಲ್ಲದೆ, ಅದರ ಸಂರಕ್ಷಕಗಳಾಗುವುದನ್ನೂ ಬಿಟ್ಟು ಅದರ ಬದಲು ಉತ್ತರೋತ್ತರ ದಾಳಿಗಾರರಲ್ಲಿ ಪ್ರತಿಯೊಬ್ಬನಿಗೂ ಸುರಕ್ಷಿತ ಠಾಣ್ಯಗಳಾದವು. ಅಲೆಕ್ಸಾಂಡರನ ಅಂತಃಪ್ರವೇಶವು ಭಾರತೀಯ ರಾಜಕೀಯ ಬುದ್ಧಿಗೆ ಆ ಅಪಾಯದ ಪರಿಣಾಮವನ್ನು ಮನವರಿಕೆ ಮಾಡಿಕೊಟ್ಟಿತು ಮತ್ತು ಆ ಕಾಲದಿಂದ ಕವಿಗಳೂ ಲೇಖಕರೂ ರಾಜಕೀಯ ಚಿಂತಕರೂ ಸತತವಾಗಿ ಸಾಮ್ರಾಜ್ಯಕ ಆದರ್ಶವನ್ನು ಅಥವಾ

ಅವನ್ನು ಪಡೆಯುವ ಸಾಧನವನ್ನು ವಿವೇಚಿಸುತ್ತ ನಡೆದುದು ಕಂಡುಬರುತ್ತದೆ. ಅದರ ಸದ್ಯಃಕಾಲದ ವಾಸ್ತವಿಕ ಪರಿಣಾಮವೆಂದರೆ: ಚಾಣಕ್ಯನ ರಾಜತಂತ್ರ ಜ್ಞತೆಯಿಂದ ಬಹುಬೇಗ ಸ್ಥಾಪಿಸಲ್ಪಟ್ಟ ಸಾಮ್ರಾಜ್ಯ ಉದಯಿಸಿದ್ದು; ಪದೇ ಪದೇ ಅದನ್ನು ಉಳಿಸಿಕೊಂಡದ್ದು ಅಥವಾ ಅದು ಎಂಟೊಂಬತ್ತು ಶತಮಾನಗಳ ವರೆಗೆ ಪುನರುಜ್ಜೀವಿಸಲ್ಪಟ್ಟದ್ದು– ನಡುನಡುವೆ ಅಶಕ್ತತೆಯ ಅವಧಿಗಳು ಒದಗಿದರೂ ಒಡೆದುಹೋಗುವ ಸಂದರ್ಭಗಳು ಪ್ರಾಪ್ತವಾದರೂ ಒಂದಾದ ಮೇಲೊಂದರಂತೆ ಮೌರ್ಯ, ಸುಂಗ, ಕಣ್ವ, ಆಂಧ್ರ ಮತ್ತು ಗುಪ್ತ ಮನೆತನಗಳು ಅದನ್ನು ಎತ್ತಿಹಿಡಿದದ್ದು. ಈ ಸಾಮ್ರಾಜ್ಯದ ಚರಿತ್ರೆ, ಇದರ ಗಣನೀಯ ಸಂಘಟನೆ, ಆಡಳಿತ, ಲೋಕೋಪಯೋಗದ ಕಾರ್ಯ, ಐಶ್ವರ್ಯ, ರಮ್ಯಸಂಸ್ಕೃತಿ ಮತ್ತು ಓಜಸ್ಸು, ತೇಜಸ್ಸು ಹಾಗೂ ಚೆನ್ನಾದ ಕೃತಕೃತ್ಯತೆಗಳ ಚರಿತ್ರೆ ಇದರ ಆಶ್ರಯದಲ್ಲಿ ಬೆಳೆದ ಈ ಪರ್ಯಾಯ ದ್ವೀಪದ ಬಾಳಿನ ಅಲ್ಲಿ ಇಲ್ಲಿ ಹರಿದು ಹಂಚಿ ಹೋದ ಅಸಮಗ್ರ ಅಭಿಲೇಖಗಳಿಂದಷ್ಟೇ ಲಭ್ಯವಾಗಿದೆ; ಆದರೂ ಇದು ಭೂವಲಯದ ಮಹಾ ಜನತೆಗಳ ಪ್ರತಿಭೆ ಕಟ್ಟಿ ನೆಲೆನಿಲ್ಲಿಸಿದ ಶ್ರೇಷ್ಠ ಸಾಮ್ರಾಜ್ಯಗಳ ಸಾಲಿಗೆ ಸೇರತಕ್ಕದ್ದಾಗಿದೆ. ಈ ದೃಷ್ಟಿಯಿಂದ ನೋಡಿದರೆ, ಸಾಮ್ರಾಜ್ಯ ನಿರ್ಮಾಣದಲ್ಲಿಯ ತನ್ನ ಪ್ರಾಚೀನ ಸಿದ್ಧಿಯಬಗ್ಗೆ ಹೆಮ್ಮೆಪಡಲೂ ಅದರ ಹಳೆಯ ನಾಗರಿಕತೆಗೆ ಬಲಿಷ್ಠ ವ್ಯವಹಾರ ಪ್ರತಿಭೆ ಅಥವಾ ಉನ್ನತ ರಾಜಕೀಯ ಗುಣವಿದ್ದಿಲ್ಲೆಂಬ ಗಡಿಬಿಡಿಯ ತೀರ್ಮಾನಕ್ಕೆ ಬಗ್ಗದಿರಲೂ ಬೇಕಾದಷ್ಟು ಕಾರಣಗಳಿವೆ.

ಅಲೆಕ್ಸಾಂಡರನ ದಾಳಿಯ ಅನಂತರದ ಆಧ್ಯಾತ್ಮಿಕ ವಿಸಂಧಿ:

ಅದೇ ವೇಳೆಗೆ ಪರಿಸ್ಥಿತಿಯ ಒತ್ತಾಯದ ಆವಶ್ಯಕತೆಯನ್ನು ಪೂರಯಿಸಲೆಂದು ಮಾಡಿದ ಅದರ ಮೊದಲ ರಚನೆಯು ಅನಿವಾರ್ಯವಾದ ತ್ವರೆ, ಒಂಸೆ ಮತ್ತು ಕೃತಕತೆಗಳಿಂದ ಈ ಸಾಮ್ರಾಜ್ಯವು ಕಷ್ಟನಷ್ಟಗಳಿಗೀಡಾಯಿತು. ಏಕೆಂದರೆ, ತನ್ನ ಗಭೀರತಮ ಆದರ್ಶದ ಸತ್ಯದ ಹಳೆಯ, ಘನ ಭಾರತೀಯ ಬಗೆಯಿಂದ ಇಚ್ಛಾಪೂರ್ವಕವಾಗಿ, ಸ್ವಾಭಾವಿಕವಾಗಿ ಹಾಗೂ ಸ್ಥಿಮಿತಗತಿವಡೆದು ವಿಕಾಸಹೊಂದಲು ಅದಕ್ಕೆ ಉಕ್ತ ಅಂಶಗಳು ಅವಕಾಶ ಕೊಡಲಿಲ್ಲ. ಕೇಂದ್ರೀಕೃತ ಸಾಮ್ರಾಜ್ಯಕ ರಾಜಪ್ರಭುತ್ವವನ್ನು ಸ್ಥಾಪಿಸಲು

ಮಾಡಿದ ಪ್ರಯತ್ನವು ಸ್ವತಂತ್ರ ಸಂಯೋಗ ಅಥವಾ ಸಾಮರಸ್ಯವನ್ನು ತಾರದೆ ಪ್ರಾದೇಶಿಕ ಸ್ವಾಯತ್ತತೆಗಳ ವಿಘಟನೆಯನ್ನು ತಂದಿತು. ಭಾರತೀಯ ತತ್ವದಂತೆ ಅವುಗಳ ಸಂಸ್ಥೆ ಮತ್ತು ರೂಢಿ ಸಂಪ್ರದಾಯಗಳಿಗೆ ಮಾನ್ಯತೆ ದೊರೆತರೂ ಮೊಟ್ಟಮೊದಲು ಅನೇಕ ಸಂದರ್ಭಗಳಲ್ಲಿ ಅವುಗಳ ರಾಜಕೀಯ ಸಂಸ್ಥೆಗಳನ್ನು ಸಹ ಪೂರ್ಣವಾಗಿ ನಿರ್ನಾಮಗೊಳಿಸದೆ ಸಾಮ್ರಾಜ್ಯಕ ಪದ್ಧತಿಯೊಳಗೆ ಅಳವಡಿಸಿದರೂ ಇವಾವುವೂ ಸಾಮ್ರಾಜ್ಯಕ ಕೇಂದ್ರೀಕರಣದ ನೆರಳಿನಡಿಯಲ್ಲಿ ನಿಜವಾಗಿ ವೃದ್ಧಿಹೊಂದಲಾರದಾದವು. ಪ್ರಾಚೀನ ಭಾರತೀಯ ಪ್ರಪಂಚದ ಸ್ವತಂತ್ರ ಜನಾಂಗಗಳು ಅದೃಶ್ಯನಾಗಲಾರಂಭಿಸಿದವು; ಅವುಗಳ ಭಿನ್ನಭಿನ್ನ ಸಾಮಗ್ರಿಗಳು ಅನಂತರ ಈಗಿನ ಭಾರತೀಯ ಗೋತ್ರಜರ ನಿರ್ಮಾಣಕ್ಕೆ ಪ್ರಯೋಜಕವಾದವು. ಮಹಾಜನ ಸಭೆಗಳು ಅನಂತರ ಬಹುಕಾಲ ಶಕ್ತವಾಗಿ ಉಳಿದುಕೊಂಡುಬಂದರೂ ಅವುಗಳ ಕರ್ತವ್ಯ ಕೊನೆಯಲ್ಲಿ ಹೆಚ್ಚು ಯಾಂತ್ರಿಕವಾಗಲು ಅಲ್ಲದೆ ಅವುಗಳ ಚೈತನ್ಯ ಕ್ಷಯಿಸಲೂ ಅಳಿಯಲೂ ಪ್ರವೃತ್ತವಾದವು. ನಗರದ ಗಣರಾಜ್ಯಗಳು ಕೂಡ ಹೆಚ್ಚು ಹೆಚ್ಚಾಗಿ ಸಂಘಟಿತ ರಾಜ್ಯದ ಅಥವಾ ಸಾಮ್ರಾಜ್ಯದ ನಗರಪಾಲಿಕೆಗಳಾಗಲು ಆರಂಭಿಸಿದವು. ಸಾಮ್ರಾಜ್ಯಕ ಕೇಂದ್ರೀಕರಣ ಸೃಜಿಸಿದ ಶಾಸನ ಅಭ್ಯಾಸಗಳೂ ಹಿಂದಿನ ಹೆಚ್ಚು ಗಾಂಭೀರ್ಯವತ್ತಾದ ಸ್ವತಂತ್ರ ಜನಸಂಸ್ಥೆಗಳ ಶಕ್ತಿನಾಶ ಅಥವಾ ಅದರ್ಶನವೂ ಒಂದು ಬಗೆಯ ಆಧ್ಯಾತ್ಮಿಕ ವಿಸಂಧಿಯನ್ನು ಉಂಟುಮಾಡಿದವು. ಆ ವಿಸಂಧಿಯು ಒಕ್ಕಡೆ ತಮ್ಮ ಧರ್ಮ, ಜೀವನ ಮತ್ತು ರೂಢಿ ಸಂಪ್ರದಾಯಗಳಲ್ಲಿ ಬಹಳವಾಗಿ ಕೈಹಾಕದೆ ತಮಗೆ ಸುರಕ್ಷಿತತೆಯನ್ನಿತ್ತ ಯಾವ ಸರಕಾರವಾದರೂ ಸರಿಯೆಂಬ ಪ್ರಶಾಸಿತ ತೃಪ್ತಿಯಿದ್ದರೆ, ಮತ್ತೊಂದೆಡೆ, ಹಿಂದಿನ ನಿಜವಾದ ಭಾರತೀಯ ರಾಜಕೀಯ ಚೇತಸ್ಸು ಪ್ರಣಿಧಾನಿಸಿದ ಸ್ವತಂತ್ರ ಸಚೇತನ ಜನತೆಯ ಸಚೇತನ ಪ್ರಭುವಾಗದ, ಆದರೆ ನಿಃಸಂಶಯವಾಗಿ ಉಪಕಾರಿಯೂ ರಮ್ಯವೂ ಆದ, ಸಾಮ್ರಾಜ್ಯಕ ಪ್ರಶಾಸನವಿತ್ತು. ಈ ಫಲಗಳು ಕ್ಷೀಣಕಾಲದಲ್ಲಷ್ಟೇ ಎದ್ದುಕಂಡವು ಹಾಗೂ ಆತ್ಯಂತಿಕವೆನಿಸಿದವು; ಆದರೆ ಅವು ಮೊದಲೇ ಬೀಜರೂಪದಲ್ಲಿದ್ದವು ಮತ್ತು ಏಕೀಕರಣದ ಆ ಒಂದು ಬಗೆಯ ಯಾಂತ್ರಿಕ ಕ್ರಮದ ದೆಸೆಯಿಂದ ಅವುಗಳ ಉಪಸ್ಥಿತಿ ಅನಿವಾರ್ಯವೇ ಆಯಿತೆಂದು ಹೇಳಬೇಕು.

ಬಲವತ್ತರವೂ ಸಂಗತತರವೂ ಆದ ಸೈನಿಕ ಕಾರ್ಯಾಚರಣೆ ಮತ್ತು ಹೆಚ್ಚು ಕ್ರಮಬದ್ಧವೂ ಏಕರೂಪವೂ ಆದ ಆಡಳಿತಗಳು ಅದರಿಂದಾದ ಲಾಭಗಳು; ಆದರೆ ಇವು ಕೊನೆಯಲ್ಲಿ ಜನರ ಮನ-ಭಾವಗಳ ನಿಜವಾದ ಅಭಿವ್ಯಕ್ತಿಯೆನಿಸಿದ ಸ್ವತಂತ್ರ ಸಂಘಟಿತ ವೈವಿಧ್ಯಪೂರ್ಣ ಜೀವನದ ಭಂಗವನ್ನು ತುಂಬಿ ಕೊಡಲಾರದಾದವು.

ಅಧರ್ಮದ ಅಭ್ಯುತ್ಥಾನ:

ಆ ಸಮಯದಲ್ಲಿ ಧರ್ಮದ ಉಚ್ಚ ಆದರ್ಶದಿಂದ ಒಂದು ಅಧಃಪಾತ ಸಂಭವಿಸಿದ್ದು ಅತ್ಯಂತ ದುಸ್ಸಹ ದುರ್ವಿಪಾಕವೆನ್ನಬೇಕು. ಆಧಿಪತ್ಯಕ್ಕಾಗಿ ರಾಜ್ಯರಾಜ್ಯಗಳೊಡನೆ ಉಂಟಾಗುತ್ತಿದ್ದ ಹೋರಾಟದಲ್ಲಿ ಹಿಂದಿನ ಉದಾತ್ತತರ ನೈತಿಕ ಆದರ್ಶಗಳ ಬದಲು ಆಸುರ ರಾಜತಂತ್ರ ತಲೆದೋರಿತು; ಆಕ್ರಾಮಕ ಮಹತ್ವಾಕಾಂಕ್ಷೆಗೆ ಸಾಕಷ್ಟು ಆಧ್ಯಾತ್ಮಿಕ ಅಥವಾ ನೈತಿಕ ಹಿಡಿತ ವಿಲ್ಲವಾಯಿತು; ಮೌರ್ಯಕಾಲೀನ ಉಗ್ರದಂಡ ಸಂಬಂಧಿ ವಿಧಾನದಲ್ಲೂ ಅಶೋಕನ ರಕ್ತಮಯ ಓಡಿಸ್ಸ ವಿಜಯದಲ್ಲೂ ಆಗಲೇ ಕಂಡಂತೆ ರಾಜನೀತಿಯ ಹಾಗೂ ಸರಕಾರದ ನೀತಿಧರ್ಮದಲ್ಲಿ ರಾಷ್ಟ್ರಮನ ಭ್ರಷ್ಟತೆಗಿಳಿದಿತ್ತು. ಧಾರ್ಮಿಕ ಭಾವನೆಯಿಂದಲೂ ಉಚ್ಚ ವಿವೇಕ ವಿಜ್ಞಾನದಿಂದಲೂ ತಡೆಹಿಡಿಯಲ್ಪಟ್ಟ ಅಧೋಗಮನವು ಅನಂತರ ಸುಮಾರು ಒಂದುಸಾವಿರ ವರ್ಷಗಳವರೆಗೆ ವಿಕೋಪವನ್ನು ಮುಟ್ಟಲಿಲ್ಲ; ಹಾಗೆ ವಿಕೋಪಹೊಂದಿದ್ದನ್ನು ಅಧೋಗತಿಯ ನೀಚತಮ ಅವಸ್ಥೆಯಲ್ಲಿ ನಾವು ಕಾಣಬಹುದು. ಆಗ ಅನಿರುದ್ಧವಾದ ಪರಸ್ಪರ ಆಕ್ರಮಣ, ಕಡಿವಾಣ ಕಾಣದ ಹಮ್ಮು ಅರಸರಲ್ಲೂ ನೇತೃಗಳಲ್ಲೂ ತಾಂಡವಿಸಿತು; ರಾಜಕೀಯ ತತ್ವನಿಷ್ಠೆ ಎಳ್ಳಷ್ಟೂ ಇಲ್ಲವಾಯಿತು; ದೇಶವು ಫಲಪ್ರದ ಏಕೀಕರಣಕ್ಕೆ ತೀರ ಅಶಕ್ತವಾಯಿತು; ಅಲ್ಲಿ ಸರ್ವಸಾಧಾರಣ ದೇಶಪ್ರೇಮ ಒಡಮೂಡಲಿಲ್ಲ; ಸಾಮಾನ್ಯ ಜನತೆಯು 'ರಾಯರಿಗೆ ರಾಜ್ಯವಾದರೆ ರಾಗಿ ಬೀಸುವುದು ತಪ್ಪುವುದೇ!' ಎಂಬ ಶಾಸಕ ಪರಿವರ್ತನ ಪರವಾದ ಔದಾಸೀನ್ಯ—ಇವು ಸಮುದ್ರದಾಚೆಯಿಂದ ಬಂದ ಬಿಳಿಕೊಡೆಯುಷ್ಟು ವ್ಯಾಪಾರಿಗಳಿಗೆ ಈ ಪರ್ಯಾಯದ್ವೀಪವನ್ನು ವಶಪಡಿಸಿದವು. ಆದರೆ ದುಷ್ಟತಮ ಪರಿಣಾಮಗಳ ಆಗಮನ ಎಷ್ಟು ವಿಲಂಬಿತವಾದರೂ ಸಾಮ್ರಾಜ್ಯದ ರಾಜಕೀಯ

ಉನ್ನತಿಯಿಂದಲೂ ರಮ್ಯವಾದ ಬೌದ್ಧಿಕ ಹಾಗೂ ಕಲಾತ್ಮಕ ಸಂಸ್ಕೃತಿಯಿಂದಲೂ ಪದೇ ಪದೇ ನಡೆದ ಆಧ್ಯಾತ್ಮಿಕ ಪುನರುಜ್ಜೀವನದಿಂದಲೂ ಅದು ಎಷ್ಟೇ ಪ್ರತಿರುಷ್ಟವಾದರೂ ಸುಸ್ಥಿತಿಪುನರಾಗಮನ ಎಷ್ಟೋಸಲ ಸಂಭವಿಸಿದರೂ ಅನಂತರದ ಗುಪ್ತರ ಕಾಲದಲ್ಲಿಯೇ ಭಾರತವು ತನ್ನ ಜನಾಂಗದ ರಾಜಕೀಯ ಜೀವನದಲ್ಲಿ ತನ್ನ ನಿಜಮನ ಮತ್ತು ಅಂತರ ಸಮಭಾವನೆಯು ಸ್ವಾಭಾವಿಕವೂ ಪರಿಪೂರ್ಣವೂ ಆಗಿ ವಿಕಾಸವಾಗುವ ಸಂಭವವನ್ನು ಕಳೆದುಕೊಂಡಿತ್ತು.

ಈ ಮಧ್ಯೆ ಸಾಮ್ರಾಜ್ಯವು ಸಂಪೂರ್ಣವಾಗಿ ಅಲ್ಲದಿದ್ದರೂ ಸಾಕಷ್ಟು ಮಟ್ಟಿಗೆ ತನ್ನ ಸ್ಥಾಪನೆಯ ಉದ್ದೇಶವನ್ನು ಸಫಲಗೊಳಿಸಿತ್ತು; ಹಳೆಯ ಸ್ತಿಮಿತ ಸಂಸ್ಕೃತಿಗಳೆಲ್ಲವನ್ನೂ ಉರುಳಿಸುವ ಹೆದರಿಕೆ ಹಾಕಿದ ಮತ್ತು ಕೊನೆಯಲ್ಲಿ ಅತ್ಯುನ್ನತವಾಗಿ ಪ್ರವೃದ್ಧವಾದ ಗ್ರೀಕ-ರೋಮಕ ನಾಗರಿಕತೆಗೂ ಪ್ರಬಲವಾದ ರೋಂ ಚಕ್ರಾಧಿಪತ್ಯಕ್ಕೂ ಅಜಯ್ಯ ಶತ್ರುವೆನಿಸಿದ ಅನಾಗರಿಕ ಆಂದೋಲನದ ಅಪಾರಪೂರದ ಆಕ್ರಮಣದಿಂದ ಭಾರತದ ನೆಲವನ್ನೂ ನಾಗರಿಕತೆಯನ್ನೂ ಸಂರಕ್ಷಿಸುವ ಕಾರ್ಯವನ್ನು ಅದು ಜಯಪ್ರದವಾಗಿ ನೆರವೇರಿಸಿತು. ಆ ಅನಾಗರಿಕ ಕ್ಷೋಭೆ ಟ್ಯೂಟನ, ಸ್ಲಾವ, ಹೂಣ ಹಾಗೂ ಸಿಥಿಯನ್ನರನ್ನು ರಾಶಿರಾಶಿಯಾಗಿ ಪಡುವಲು, ಮೂಡಲು ಮತ್ತು ತೆಂಕಲುಗಳಿಗಟ್ಟಿತು; ಅನೇಕ ಶತಮಾನಗಳ ತನಕ ಭಾರತದ್ವಾರಕ್ಕೆ ಬಡಿಯುತ್ತಲಿತ್ತು, ಕೆಲ ಅಂತಃ ಪ್ರವೇಶಗಳನ್ನು ಮಾಡಿತು; ಆದರೆ ಅದು ಮುಳುಗಿಸದೆದಾಗ ಭಾರತೀಯ ನಾಗರಿಕತೆಯನ್ನು ಮೊದಲಿನಂತೆಯೇ ಸುಸ್ಥಿರವೂ ಉನ್ನತವೂ ಸುರಕ್ಷಿತವೂ ಆಗಿ ಉಳಿಯುವಂತೆ ಬಿಟ್ಟಿತ್ತು. ಸಾಮ್ರಾಜ್ಯ ದುರ್ಬಲವಾದಾಗಲೆಲ್ಲ ಕ್ಷೋಭೆಯ ಉದ್ರೇಕ ಉಂಟಾಗುತ್ತಿತ್ತು; ಇಂಥ ಉದ್ರೇಕವಾಗುತ್ತಿದ್ದುದು ಯಾವಾಗಲಾದರೂ ಕೆಲ ಅವಧಿ ದೇಶ ಸುರಕ್ಷಿತತೆಯಲ್ಲಿದ್ದಾಗ ಯಾವ ಅಗತ್ಯದಿಂದ ನಿರ್ಮಿತವಾಯಿತೋ ಆ ಅಗತ್ಯ ಕೆಲಕಾಲ ಆಗಾಗ ಇಲ್ಲವಾದಾಗ ಸಾಮ್ರಾಜ್ಯ ದುರ್ಬಲಗೊಳಿಸಲ್ಪಡುತ್ತಿತ್ತು. ಏಕೆಂದರೆ ಆಗ ಅದರ ಐಕ್ಯವನ್ನು ಭಂಗಗೊಳಿಸುವ ಇಲ್ಲವೆ ಉತ್ತರದಲ್ಲಿಲ್ಲ ಹಬ್ಬಿದ ಅದರ ಮಹಾವಿಸ್ತಾರವನ್ನು ಖಂಡಿಸುವ ಪ್ರತ್ಯೇಕೀಕರಣದ ಚಳವಳಿಗಳಲ್ಲಿ ಪ್ರಾದೇಶಿಕಭಾವನೆ ಪುನಃಪುನಃ

ಉದಯವಾಗುತ್ತಿತ್ತು. ಹೊಸದೊಂದು ಅಪಾಯಬಂತೆಂದಕೂಡಲೇ ಆ ಸಾಮ್ರಾಜ್ಯದ ಶಕ್ತಿ ಹೊಸ ಅರಸೊತ್ತಿಗೆಯಲ್ಲಿ ಪುನಃ ಪ್ರರೂಢವಾಗುತ್ತಿತ್ತು; ಇಂಥ ಅಪಾಯ ಪದೇ ಪದೇ ಪುನರ್ಘವಿಸುತ್ತಿತ್ತು; ಆದರೆ ಕೆಲಮಟ್ಟಿನ ದೀರ್ಘಕಾಲದವರೆಗೆ ಅಂಥ ಅವಗಢ ಸಂಭವಿಸದೆ ಹೋಗಲು ಅಂಥ ಪ್ರಸಂಗಕ್ಕಾಗಿಯೇ ನಿರ್ಮಿತವಾಗಿದ್ದ ಆ ಸಾಮ್ರಾಜ್ಯ ನಾಮಶೇಷವಾಯಿತು. ಅದರ ಲಯ ಮೂಡಲು, ತೆಂಕಲು, ಮತ್ತು ನಡುವಲಿನಗಳಲ್ಲಿ ಕೆಲ ಮಹಾರಾಜ್ಯಗಳನ್ನು ಬಿಟ್ಟುಹೋಯಿತಲ್ಲದೆ, ಮೊದಲಿಗಿಂತ ಅಧಿಕ ಗಲಿಬಿಲಿಯ ಜನಾಂಗರಾಶಿಗಳನ್ನು ವಾಯುವ್ಯದಲ್ಲಿ ಉಳಿಸಿ ನಡೆಯಿತು. ಈ ಗೊಂದಲದ ವಾಯುವ್ಯ ಭಾರತದ ದುರ್ಬಲಸ್ಥಾನವೆನಿಸಿ ಆ ಮೂಲಕ ಮುಸಲ್ಮಾನರು ಒಳಹೊಕ್ಕು ಬಡಗಲಲ್ಲಿ ಅತ್ಯಲ್ಪ ಅವಧಿಯಲ್ಲೇ ಮಧ್ಯಏಶಿಯದ ಮಾದರಿಯ ಸಾಮ್ರಾಜ್ಯವನ್ನು ಯಥಾಪೂರ್ವ ಕಟ್ಟಿದರು.

ಪೌರಸ್ತ್ಯ ಪಂಡಿತರ ಅಪಸಿದ್ಧಾಂತ:

ಈ ಮೊದಮೊದಲಿನ ವಿದೇಶೀಯ ದಾಳಿಗಳನ್ನೂ ಅವುಗಳ ಫಲಗಳನ್ನೂ ಅವುಗಳ ನಿಜಪ್ರಮಾಣಗಳಲ್ಲೇ ಅಳೆದು ನೋಡಬೇಕು. ಪೌರಸ್ತ್ಯ ಪಂಡಿತರ ಅತಿಶಯೋಕ್ತಿನಿಬದ್ಧ ಸಿದ್ಧಾಂತಗಳಿಂದ ಅವು ಅನೇಕವೇಳೆ ಗೊಂದಲಕ್ಕೀಡಾದ್ದುಂಟು. ಅಲೆಕ್ಸಾಂಡರನ ದಾಳಿ ಹೆಲನಿಜಮ್ಮಿನ ಮೂಡುಮೊಗದ ಒತ್ತಡಕ್ಕೆ, ಪಾಶ್ಚಾತ್ಯ ಹಾಗೂ ಮಧ್ಯಏಶಿಯದಲ್ಲಿ ಅದಕ್ಕೆ ಕಾರ್ಯವಿತ್ತು, ಆದರೆ ಇಂಡಿಯದಲ್ಲಿ ಅದಕ್ಕೆ ಭವಿಷ್ಯವಿದ್ದಿಲ್ಲ. ಚಂದ್ರಗುಪ್ತನಿಂದ ಕೂಡಲೇ ಹೊರ ಹೊರಡಿಸಲ್ಪಟ್ಟ ಅದು ಯಾವ ಅವಶೇಷವನ್ನೂ ಇಲ್ಲಿ ಉಳಿಸಲಿಲ್ಲ. ಅನಂತರದ ಮೌರ್ಯರ ದುರ್ಬಲಾವಸ್ಥೆಯಲ್ಲಿ ಪ್ರವೇಶಿಸಿದ ಗ್ರೀಕ– ಬ್ಯಾಕ್ಟ್ರಿಯನರ ಪ್ರಾಬಲ್ಯ ಪುನರುಜ್ಜೀವಿತ ಮೌರ್ಯ ಸಾಮ್ರಾಜ್ಯದಿಂದ ನಿರ್ನಾಮಹೊಂದಿತು. ಹಾಗೆ ನಿರ್ನಾಮಹೊಂದಿದ್ದು ಆಗಲೇ ಭಾರತೀಯ ಸಂಸ್ಕೃತಿಯ ಗಾಢ ಪ್ರಭಾವಕ್ಕೊಳಗಾದ ಹೆಲ್ಲನೀಕೃತ ಜನಗಳದು. ಆಮೇಲಿನ ಪಾರ್ಥಿಯನ, ಹೂಣ ಮತ್ತು ಸಿಥಿಯನ ದಾಳಿಗಳು ಗಭೀರ ಪರಿಣಾಮಿಗಳಾಗಿದ್ದುದರಿಂದ ಭಾರತದ ಪೂರ್ಣತೆಗೆ ಅಪಾಯಕಾರಿಗಳಾಗಿ ಕಂಡವು. ಕೊನೆಗೆ ಅವು ಬಲವಾಗಿ ತಾಗಿದ್ದು ಪಂಜಾಬಿಗಷ್ಟೇ ಇನ್ನೂ ತೆಂಕಲಿಗೆ ಅವರು ತಮ್ಮ ಪ್ರಭಾವ

ತರಂಗಗಳನ್ನು ಬೀಸಿದ್ದರು, ಪಶ್ಚಿಮತೀರದ ಮೇಲೆ ಅವು ಅಪ್ಪಳಿಸುತ್ತ ಬಂದದ್ದು ನಿಜ. ತೆಂಕಣಕಡೆ ಬಹಳ ಕೆಳಗೂ ವಿದೇಶೀಯ ಅರಸೊತ್ತಿಗೆಗಳನ್ನವು ಕೆಲ ಕಾಲ ನೆಲೆಗೊಳಿಸಬಹುದಾಗಿತ್ತು. ಆದರೆ ಹಾಗಾಗಲಿಲ್ಲ. ಈ ಭಾಗಗಳ ಕುಲ ಗೋತ್ರ ಲಕ್ಷಣ ಅವುಗಳಿಂದ ಎಷ್ಟರಮಟ್ಟಿಗೆ ಮಾರ್ಪಾಟಿಗೀಡಾಯಿತೆಂಬುದು ಅಸ್ಪಷ್ಟ. ಪೌರಸ್ತ್ಯ ಪಂಡಿತರೂ ಕುಲಗೋತ್ರ ಶಾಸ್ತ್ರಜ್ಞರೂ ಪಂಜಾಬು ಪೂರ ಸಿಥಿಯನೀಕೃತವಾಯಿತು, ರಜಪೂತರು ಅದೇ ಕುಲದವರು, ಅವರ ಅಂತಃಪ್ರವೇಶದಿಂದ ದಕ್ಷಿಣದಲ್ಲಿಯೂ ಬಹಳ ದೂರದ ವರೆಗೆ ಕುಲ ಗೋತ್ರ ಪರಿವರ್ತನವಾಯಿತು ಎನ್ನುತ್ತಾರೆ. ಈ ತರ್ಕಗಳು ಪ್ರಮಾಣಗಳನ್ನು ಆಧರಿಸಿನಿಂತಿಲ್ಲ; ಮಿಕ್ಕ ಸಿದ್ಧಾಂತಗಳಿಂದ ಪ್ರತಿಹತವಾಗಿವೆ. ಅಂಥ ಗಣ್ಯ ಪರಿಣಾಮವನ್ನುಂಟು ಮಾಡುವಷ್ಟು ಸಂಖ್ಯೆಯಲ್ಲಿ ಆ ಅನಾಗರಿಕ ದಾಳಿಗಾರರು ಬಂದರೆಂಬುದು ತೀರ ಸಂಶಯಾಸ್ಪದ. ಒಂದೆರಡು ಮೂರು ತಲೆಮಾರುಗಳಲ್ಲಿಯೇ ಆ ದಾಳಿಗಾರರು ಭಾರತೀಯ ಧರ್ಮವನ್ನು ಸ್ವೀಕರಿಸಿ, ಭಾರತೀಯ ರೀತಿನೀತಿ ಸಂಸ್ಕೃತಿಗಳಲ್ಲಿ ಕರಗಿ ಭಾರತೀಯರೇ ಆಗಿ, ಭಾರತೀಯ ಜನರಾಶಿಯಲ್ಲಿ ಲೀನರಾದ ಸಂಗತಿ ಅಂಥ ತರ್ಕದ ಅವಾಸ್ತವತೆಯನ್ನು ಸಾರುತ್ತದೆ. ರೋಮಕ ಚಕ್ರಾಧಿಪತ್ಯದ ದೇಶಗಳಲ್ಲಾದಂತೆ ಅನಾಗರಿಕ ಕುಲಚಕ್ರಗಳು ಅವಕ್ಕಿಂತ ಹೆಚ್ಚಿನದಾದ ಒಂದು ನಾಗರಿಕತೆಯ ಮೇಲೆ ತಮ್ಮ ಕಾಯಿದೆಗಳು ರಾಜಕೀಯ ಪದ್ಧತಿ, ಅನಾಗರಿಕ ರೂಢಿಗಳು, ವಿದೇಶೀಯ ಶಾಸನಗಳನ್ನು ಹೇರಿದ ಪರಿಸ್ಥಿತಿ ಇಲ್ಲಿ ಸಂಭವಿಸಲಿಲ್ಲ. ಈ ಉದ್ರೇಕಗಳ ಸರ್ವಸಾಧಾರಣ ಗಣ್ಯಸಂಗತಿ ಇದೇ. ಹೀಗಾದದ್ದು ಉಕ್ತ ಒಂದು ಅಥವಾ ಮೂರೂ ಕಾರಣಗಳಿಂದ ಇರಬಹುದು. ದಾಳಿಗಾರರು ಕೇವಲ ಸೈನ್ಯಗಳಾಗಿದ್ದಿರಬಹುದಲ್ಲದೆ ಜನಗಳಾಗಿದ್ದಿರಲಿಕ್ಕಿಲ್ಲ: ಆಕ್ರಮಣವು ಅನವಚ್ಛಿನ್ನ ವಿದೇಶೀಯ ಆಡಳಿತವಾಗಿರಲಿಲ್ಲ. ಆದರಿಂದ ಅವಕ್ಕೆ ತನ್ನ ವಿದೇಶೀಯತೆಯನ್ನು ದೃಢಗೊಳಿಸಲಾಗಲಿಲ್ಲ; ಏಕೆಂದರೆ ಪ್ರತಿಯೊಂದು ಆಕ್ರಮಣವಾದ ಮೇಲೂ ಭಾರತೀಯ ಸಾಮ್ರಾಜ್ಯದ ಶಕ್ತಿ ಪುನರುಜ್ಜೀವಿತವಾಯಿತು ಮತ್ತು ನಿರ್ಜಿತ ಪ್ರಾಂತಗಳನ್ನು ಪುನಃ ಸ್ವಾಧೀನಪಡಿಸಿಕೊಂಡಿತು. ಕೊನೆಯದಾಗಿ, ಆಕ್ರಾಮಕರು ಮಾನಸಿಕವಾಗಿ ಲೀನಹೋದುದಕ್ಕೆ ವಿರೋಧತೋರಲು ಬಲಿಷ್ಠ ಚೇತನವುಳ್ಳ ಭಾರತೀಯ

ಸಂಸ್ಕೃತಿ ಸಾಧ್ಯವಾಗದಂತೆಮಾಡಿತು. ಹೇಗಿದ್ದರೂ ಈ ಉದ್ರೇಕಗಳೇನಾದರೂ ಗಣ್ಯಲಕ್ಷಣವುಳ್ಳವಾಗಿದ್ದುದೇ ಆದರೆ ತದ್ವಿರುದ್ಧಸಿಂತ ಭಾರತೀಯ ನಾಗರಿಕತೆ ತಾನು ಅವಕ್ಕೂ ಅಧಿಕ ಸುಭದ್ರ, ಸಚೇತನ, ಘನ ಎಂದು ತೋರಿಸಿಕೊಟ್ಟಿತಲ್ಲದೆ ಆ ತಮ್ಮನಾದ ಗ್ರೀಕ–ರೋಮಕ ನಾಗರಿಕತೆ ಟ್ಯೂಟನ ಅರಬರೆದುರು ನೆಲಕ್ಕಿಳಿದಿತು ಅಥವಾ ಗುಪ್ತಗಾಮಿನಿಯಾಗಿ ಉಳಿಯಿತು– ಅದೂ ಬಹಳ ಹೀನತೆಹೊಂದಿ ಅನಾಗರಿಕವಾಗಿ, ಭಿನ್ನಭಿನ್ನವಾಗಿ, ಅನಭಿಜ್ಞೇಯವಾಗಿ, ಮತ್ತು ಘನತೆ, ಉನ್ನತಿ ತನ್ನಲ್ಲಿದೆಯೆಂದು ಜಂಭಕೊಚ್ಚಿಕೊಂಡ ರೋಮಕ ಚಕ್ರಾಧಿಪತ್ಯಕ್ಕಿಂತ ಒಟ್ಟಿನಲ್ಲಿ ತಾನೇ ಉತ್ತಮ ಎಂಬುದನ್ನು ಭಾರತೀಯ ಸಾಮ್ರಾಜ್ಯ ಸಿದ್ಧಮಾಡಿ ತೋರಿಸಿತೆಂದು ಹೇಳಬಹುದು. ಏಕೆಂದರೆ, ಪಶ್ಚಿಮದಲ್ಲಿ ಗಾಯಹೊಂದಿದರೂ ಅದು ಈ ದ್ವೀಪಕಲ್ಪದ ಮಹಾಜನರಾಶಿಯ ಸುರಕ್ಷಿತತೆಯನ್ನು ಉಳಿಕೊಂಬುದರಲ್ಲಿ ಯಶಸ್ವಿಯಾಯಿತು.

ಮುಸಲ್ಮಾನರ ಭಾರತೀಯತೆ:

ಆ ಬಳಿಕ ಒದಗಿದ ಅಧಃಪಾತ– ಅರಬರ ಕೈಯಲ್ಲಿ ಪರಾಜಿತವಾದ ಮುಸಲಮಾನ ವಿಜಯ ಬಹಳ ಕಾಲಾನಂತರ ಜಯಪ್ರದವಾಗಿ ಪುನಃ ಪ್ರಯತ್ನದಿಂದ ನಡೆದದ್ದು ಮತ್ತು ಅದನನ್ನುಸರಿಸಿ ಸಂಭವಿಸಿದ ಎಲ್ಲ ಸಂಗತಿಗಳು– ಇವೇ ಭಾರತೀಯ ಜನಾಂಗಗಳ ಶಕ್ತಿಯಮೇಲೆ ಎಸೆದ ಸಂಶಯಾಸ್ತ್ರ ನ್ಯಾಯವೆಂದು ಸಿದ್ಧವಾಡತಕ್ಕಂಥವು. ಆದರೆ ಮೊಟ್ಟಮೊದಲು ನಿಜ ಸಂಗತಿಯನ್ನು ಮುಸುಕಿದ ಮೋಡಗಳನ್ನಷ್ಟು ನಾವು ದೂರಸರಿಸಿಇಡೋಣ. ಈ ವಿಜಯ ಸಂಭವಿಸಿದ್ದು ಎರಡುಸಾವಿರ ವರ್ಷಗಳ ಚಟುವಟಿಕೆ, ನಿರ್ಮಿತಿಗಳಿಂದ ಪ್ರಾಚೀನ ಭಾರತೀಯ ಜೀವನ ಸಂಸ್ಕೃತಿಗಳ ಪ್ರಾಣಶಕ್ತಿ ಆಗಲೇ ಕೆಲಕಾಲ ಸುಸ್ತಾಗಿ ನಿಂತಿದ್ದಾಗ ಅಥವಾ ಸುಸ್ತಾಗುವ ಸ್ಥಿತಿಗೆ ಮುಟ್ಟುತ್ತಿದ್ದಾಗ; ಅದಕ್ಕಾಗ ಸಂಸ್ಕೃತದಿಂದ ಜನಪ್ರಿಯ ಭಾಷೆಗಳಿಗೆ ವರ್ಗಾಯಿಸಿಕೊಂಡು, ಹೊಸದಾಗಿ ರೂಪಿತವಾಗುತ್ತಿದ್ದ ಪ್ರಾದೇಶಿಕ ಜನಾಂಗಗಳಿಗೆ ಹೊಂದಿಸಿಕೊಂಡು ತನ್ನ ಕಾಯಕಲ್ಪ ಸಾಗಿಸಿಕೊಳ್ಳಲು ಉಸಿರಿಡುವ ಅವಕಾಶಬೇಕಾಗಿತ್ತು. ಉತ್ತರದಲ್ಲಿ ಈ ವಿಜಯ ಬಹ

ಬೇಗ ಸಾಗಿತು– ಬಹಳ ಶತಮಾನಗಳ ವರೆಗೇನೋ ಅದು ಪೂರ್ಣತೆಯನ್ನು ಮುಟ್ಟಲಿಲ್ಲ ಮತ್ತು ದಕ್ಷಿಣವು ಹಿಂದೂಸಂಸ್ಕೃತಿಯು, ಹಿಂದು ನೀತಿಯು ಸಾಮ್ರಾಜ್ಯದ ವಿರುದ್ಧ ಹೇಗೆಯೋ ಹಾಗೇ ತನ್ನ ಸ್ವಾತಂತ್ರ್ಯವನ್ನು ಬಹು ಕಾಲ ಉಳಿಸಿಕೊಂಡಿತು. ವಿಜಯನಗರ ರಾಜ್ಯದ ಅಸ್ತಿತ್ವ ಮೊಗಲರ ಉದಯಕ್ಕೂ ಬಹಳ ಉತ್ತರಕಾಲದ ಅಂತರದಲ್ಲಿ ಹೋಗಲಿಲ್ಲ. ಅಕ್ಬರ ಮತ್ತು ಆತನ ಉತ್ತರಾಧಿಕಾರಿಗಳ ಕಾಲದವರೆಗೆ ರಜಪೂತರು ತಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಂಡರು. ಕೇವಲ ಕಟ್ಟಕಡೆಯಲ್ಲಿ ರಜಪೂತ ರಾಜರೇ ಅಂಶತಃ ಮೊಗಲರ ಸೇನಾಧಿಪತಿಗಳೂ ಮಂತ್ರಿಗಳೂ ಆಗಿ ನೆರವಿತ್ತುದರಿಂದ ಮೊಗಲರು ದಕ್ಷಿಣ– ಪೂರ್ವಗಳ ಮೇಲಿನ ತಮ್ಮ ಪ್ರಭಾವವನ್ನು ಪೂರ್ತಿಗೊಳಿಸಲಾದರು. ಇದು ಏಕೆ ಸಾಧ್ಯವಾಯಿತೆಂದರೆ– ಹಿಂದೇ ಹೇಳಿದ ಈ ವಿಷಯವನ್ನು ಎಲ್ಲರೂ ಮರೆಯುತ್ತಾರೆ– ಮುಸಲ್ಮಾನರ ಮೇಲಧಿಕಾರವು ಬಹುಬೇಗ ವಿದೇಶೀಯ ಆಡಳಿತವಲ್ಲವಾಯಿತು. ದೇಶದಲ್ಲಿಯ ಮುಸಲ್ಮಾನರ ಮಹಾರಾಶಿ ಕುಲಗೋತ್ರದಲ್ಲಿ ಭಾರತೀಯರಾಗಿದ್ದರು ಮತ್ತು ಈಗಲೂ ಆಗಿದ್ದಾರೆ; ಅದರಲ್ಲಿ ಎಷ್ಟೋ ಸ್ವಲ್ಪಮಟ್ಟಿಗೆ ಪಠಾಣ, ತುರುಕ್ಕ ಮತ್ತು ಮೊಗಲ ರಕ್ತಮಿಶ್ರವಾಗಿತ್ತು– ವಿದೇಶೀಯ ರಾಜರೂ ರಾಜಸ್ಥಾನೀಯರೂ ಕೂಡ ಒಮ್ಮೆಲೇ ಬಗೆ, ಬಾಳು, ಬದುಕಿನಲ್ಲಿ ಪೂರ ಭಾರತೀಯರೇ ಆಗಿಹೋದರು. ಭಾರತಗೋತ್ರ ನಿಜವಾಗಿ ಕೆಲ ಯೂರೋಪ್ಯ ದೇಶಗಳಲ್ಲಿಯಂತೆ ಬಹಳ ಶತಮಾನಗಳ ವರೆಗೆ ಪರಾಧೀನದಲ್ಲಿ ನಿಸ್ತೇಜ ನಿರ್ವೀರ್ಯ ಮತ್ತು ಪರಾಙ್ಗೀಕಾರದ ಪ್ರವೃತ್ತಿಯುಳ್ಳದಾಗಿ ಉಳಿದಿದ್ದರೆ ಆಗ ಮಾತ್ರ ಅದೊಂದು ಆಜನ್ಮ ದೌರ್ಬಲ್ಯದ ಮಹಾಸಾಕ್ಷಿಯಾಗುತ್ತಿತ್ತು. ಬ್ರಿಟಿಶರದೊಂದೇ ಮೊಟ್ಟಮೊದಲಿನ ನಿಜವಾದ ಅನ್ಯಶಕ್ತಿಯ ಪರಾಧೀನ ಭಾರತಕಂಡದ್ದು; ಅದೊಂದೇ ಭಾರತವನ್ನು ಅದುಮಿ ಆಳಿತು. ಆಗ ನಿಜವಾಗಿಯೂ ಭಾರತದ ಪ್ರಾಚೀನ ನಾಗರಿಕತೆ ರಾಜ್ಯಕ್ಷಾತ್ರವಾಯಿತು, ಹೊಂದಿಕೊಳ್ಳಲಾರದ ಮಧ್ಯಯುಗದ ಧರ್ಮ– ಸಂಸ್ಕೃತಿಗಳ ಭಾರದಡಿಯಲ್ಲಿ ಸಿಕ್ಕಿ ಕ್ಷೀಣವಾಯಿತು– ಆದರೂ ಅದು ಆ ಧರ್ಮ– ಸಂಸ್ಕೃತಿಗಳ ಬಿತ್ತರದಲ್ಲಿ ಬದುಕಿ ಉಳಿಯಿತು; ಅನೇಕ ಮುಖಗಳಿಂದ ಅಪೂರ್ವ ಶಕ್ತಿ ತನ್ನ ಮುದ್ರೆಯನ್ನೊತ್ತಿತು; ಮತ್ತು ಇಂದಿನ ವರೆಗೂ ಸಜೀವವಾಗಿ ಉಳಿದು,

ಕ್ಷೀಣದಶೆಯಲ್ಲೂ ತಲೆಯೆತ್ತಲು ಸಮರ್ಥವೆನಿಸಿ, ಮಾನವ ಸಂಸ್ಕೃತಿಗಳ ಇತಿಹಾಸದಲ್ಲೇ ಬಿರಾಜಿಸುವಂತೆ ತನ್ನ ರಕ್ತ-ಸಮರ್ಥಕಶಕ್ತಿಗಳಿಗೆ ಸಾಕ್ಷಿ ಕೊಟ್ಟಿದೆ. ರಾಜಕೀಯ ಕ್ಷೇತ್ರದಲ್ಲಿ ಮಹಾಶಾಸಕ, ರಾಜನೀತಿಜ್ಞ, ಯೋಧ, ಆಡಳಿತಗಾರರನ್ನು ಅದು ಎಷ್ಟೆಷ್ಟೋ ನಿರ್ಮಿಸುತ್ತ ಬಂದಿದೆ. ಕ್ಷಿಪ್ರವಾದ ಯಲ್ಲಿ ಅದರ ರಾಜಕೀಯ ಸ್ಥಿತಿಯ ಪತನ, ವೈಭವ, ಯೋಗ್ಯತೆಗಳನ್ನು ಎದುರಿಸಿ ನಿಲ್ಲಲು ಬೇಕಾದಷ್ಟು, ತನ್ನ ನೆಲೆ-ನೆಲೆಯಲ್ಲಿ ಸಾಕಷ್ಟು ಸುಸಂಗತ ಅಥವಾ ಶೀಘ್ರ ಆಗಿರಲಿಲ್ಲ; ಆದರೆ ಅದು ಒಮ್ಮೆ ಅಣಿಯಾದಷ್ಟು ಸಮರ್ಥವೂ ಶ್ರಮಸಹಿಷ್ಣುವಾದ ಪ್ರತಿಯೊಂದು ಸಂಧಿಯನ್ನು ನಿರೀಕ್ಷಿಸಿ ನಿಲ್ಲಿಸುವಷ್ಟು ಶಕ್ತವೂ ಆಗಿತ್ತಲ್ಲದೆ ರಾಜಸಂಗದ ನೇತೃತ್ವದಲ್ಲಿ ಸಾಮ್ರಾಜ್ಯ ಕಟ್ಟಲು ತೊಡೆಚಪ್ಪರಿಸಿತು, ವಿಜಯನಗರ ರಾಜ್ಯವನ್ನು ನಿರ್ಮಿಸಿತು, ರಜಪುಟಾನದ ಗುಡ್ಡಗಾಡುಗಳಲ್ಲಿ ಇಸ್ಲಾಮಿನ ವಿರುದ್ಧ ಅನೇಕ ಶತಮಾನಗಳಾವರೆ ತನ್ನತನವನ್ನು ಕಾಯ್ದುಕೊಂಡಿತು ಮತ್ತು ತನ್ನ ಅತ್ಯಂತ ದುರ್ದಶೆಯ ಕಾಲದಲ್ಲೂ ಬಲಿಷ್ಠ ಮೊಗಲರ ಶಕ್ತಿಯ ವಿರುದ್ಧ ಶಿವಾಜಿ ರಾಜ್ಯವನ್ನು ಕಟ್ಟಿ ನಿಲ್ಲಿಸಿತು, ಮರಾಠ ಸಂಯುಕ್ತರಾಜ್ಯವನ್ನೂ ಶೀಖರ ಖಾಲ್ಸಾವನ್ನೂ ರಚಿಸಿತು, ಮೊಗಲರ ಮಹಾ ನಿರ್ಮಿತಿಯ ಮೂಲಕ್ಕೆ ಒರಲೆಹಿಡಿಸಿತು ಹಾಗೂ ಪುನಃ ಸಾಮ್ರಾಜ್ಯರಚನೆಗೆ ಕೊನೆಯ ಪ್ರಯತ್ನವನ್ನು ನಡೆಸಿತು. ಅವನತಿಯು ತಲೆ ಕವಿದಿದ್ದಾಗ, ಒಡಕು-ಗಲಿಬಿಲಿ ತುಂಬಿದ್ದಾಗ, ಕಟ್ಟಕಡೆಯ ಮೃತ್ಯುಪಾಶವೋ ಎಂಬಂತಿದ್ದ ಅಧಃಪಾತದ ಅಂಚಿನಲ್ಲಿದ್ದಾಗ ಕೂಡ ಅದು ರಣಜಿತಸಿಂಗ, ನಾನಾಫಡ್ನವೀಸ, ಮಹಾದಜಿ ಸಿಂಧ್ಯರನ್ನು ಮುನ್ನೀಡಲು ಶಕ್ತವಾಯ್ತು ಮತ್ತು ಹಾಗೆ ಮುನ್ನಿಟ್ಟು ಇಂಗ್ಲಂಡಿನ ವಿಜಯಶಕ್ತಿಯ ಅನಿವಾರ್ಯ ಮುನ್ನಡೆಯನ್ನು ವಿರೋಧಿಸಿತು. ಈ ವಿಷಯಗಳು ಭಾರತದ ಮೇಲೆ ಆರೋಪಿಸಿದ ಸಮಗ್ರ ಕೇಂದ್ರೀಕೃತಿಯ ಸಾಮರ್ಥ್ಯವನ್ನು ಕಂಡು ಕಲ್ಪಿಸಿ ಬಿಂಬಿಸುವ ಶಕ್ತಿಯ ಕೊರತೆಯ ಮಾತಿನ ಭಾರವನ್ನು ಇಳಿಸುತ್ತವೆ, ವಿಘಟನೆಯೇ ಅದರ ಸತತ ಸ್ವಭಾವ ಎಂಬುದನ್ನು ಅಲ್ಲಗಳೆಯುತ್ತವೆ. ಆದರೆ ಆಗಿನ ಸ್ಥಿತಿಗತಿಗಳು ಒಂದು ದುರ್ದೈವ ಸಂಘಟನೆಯೆಂದು ಗ್ರಹಿಸಿಕೊಂಡರೆ, ಅವು ಅಂಥ ಸಂಘಟನೆಯಲ್ಲಿ ಮತ್ತಲ್ಲೂ ಸುಲಭವಾಗಿ ತನ್ನನುಸರಣೆಯ ಮೇರೆಯಂತೆ ಸಾಕಷ್ಟುಮಟ್ಟಿಗೆ ಗಣ್ಯವಾದ

ಅಭಿಲೇಖ ರಚಿಸಿವೆ. ಹಾಗೂ ಭಾರತ ಯಾವಾಗಲೂ ಪರಾಧೀನವಾಗಿತ್ತು ಮತ್ತು ರಾಜಕೀಯವಾಗಿ ಅಶಕ್ತವೆನಿಸಿತ್ತು ಎಂಬ ಒರಟು ಮಾತಿಗಿಂತ ನಿಜ ನಾಗಿಯೂ ಭಿನ್ನರೀತಿಯ ಬಣ್ಣವನ್ನು ಆ ಇಡಿ ಪ್ರಶ್ನೆಗೆಕೊಡುತ್ತವೆ.

ಎರಡು ನಾಗರಿಕತೆಗಳ ನಡುವಣ ಹೋರಾಟ:

ಮುಸಲ್ಮಾನ ವಿಜಯ ತಂದೊಡ್ಡಿದ ಸಮಸ್ಯೆಯೆಂದರೆ ಪರಶಾಸನಕ್ಕ ಡಿಯಾಳಾಗುವುದು ಹಾಗೂ ಆದರಿಂದ ಸ್ವಾತಂತ್ರ್ಯವನ್ನು ಪುನಃ ಪಡೆಯುವ ಶಕ್ತಿ ಇರುವುದು ಅಥವಾ ಇಲ್ಲದಿರುವುದು ಅಲ್ಲ; ಅಲ್ಲಿ ಸಂಭವಿಸಿದ್ದು ಒಂದು ಹಳೆಯ-ದೇಶಿಯ ಹಾಗೂ ಇನ್ನೊಂದು ಮಧ್ಯಯುಗೀನ-ಪರಕೀಯ ನಾಗ ರಿಕತೆಗಳ ನಡುವಣ ಘರ್ಷಣ. ಸಮಸ್ಯೆಯನ್ನು ನಿರುತ್ತರ್ಯ ಗೊಳಿಸಿದ್ದು ಎರಡೂ ನಾಗರಿಕತೆಗಳ ಎರಡು ಭಿನ್ನರೀತಿಯ ಧರ್ಮಗಳಿಗಂಟಿಕೊಂಡ ಜಿಗುಟು. ಇಸ್ಲಾಂ ಸೈನಿಕ ಪ್ರವೃತ್ತಿಯುಳ್ಳದ್ದು, ಆಕ್ರಮಣಕೀಲ; ದೇಶಿ ಧರ್ಮವಾದರೂ ಆಧ್ಯಾತ್ಮಿಕವಾಗಿ ಸಹಿಷ್ಣುವೂ ಪರಿವರ್ತನೀಯ ಶಿಥಿಲತೆ ಯುಳ್ಳದ್ದೂ ಆಗಿತ್ತು. ಆದರೆ ಈ ಎರಡೂ ತಮ್ಮ ತಮ್ಮ ತತ್ವಕ್ಕೆ ಪೂರ್ಣ ತಲೆವಾಗುವ ನಿಷ್ಠೆಯ ಶಿಸ್ತುಳ್ಳವಾಗಿ ಸಾಮಾಜಿಕ ರೂಪ-ರಚನೆಗಳ ದುರ್ಗದ ಹಿಂದೆ ಸುರಕ್ಷಿತವಾಗಿ ನಿಂತವು. ಅದಕ್ಕೆ ಎರಡು ಪರಿಹಾರಗಳನ್ನು ಹೇಳ ಬಹುದು. ಮಹತ್ತರವಾದ ಆಧ್ಯಾತ್ಮಿಕ ತತ್ವ ಹಾಗೂ ಸಂಘಟನೆ ಮತ್ತು ಎರಡು ನಾಗರಿಕತೆಗಳಲ್ಲೂ ರಾಜಿಯನ್ನು ಉಂಟುಮಾಡುವುದು ಅಥವಾ ಒಂದು ರಾಜಕೀಯ ದೇಶಪ್ರೇಮವೆದ್ದು ಧಾರ್ಮಿಕ ಹೋರಾಟವನ್ನು ಮೀರಿನಿಂತು ಎರಡು ಸಮಷ್ಟಿಗಳನ್ನೂ ಒಂದುಗೂಡಿಸುವುದು. ಆ ಯುಗದಲ್ಲಿ ಮೊದಲ ನೆಯದು ಅಸಾಧ್ಯ. ಮುಸಲಮಾನರ ಕಡೆಯಿಂದ ಅಕ್ಬರ ಅಂಥ ಪ್ರಯತ್ನ ನಡೆಸಿದ; ಆದರೆ ಅವನ ಧರ್ಮ ಬೌದ್ಧಿಕವೂ ರಾಜಕೀಯವೂ ಆಗಿತ್ತಲ್ಲವೆ ಆಧ್ಯಾತ್ಮಿಕ ಸೃಷ್ಟಿಯಾಗಿರಲಿಲ್ಲ. ಆದುದರಿಂದ ಎರಡೂ ಸಮಷ್ಟಿಗಳ ಬಹು ಸಂಖ್ಯರ ಬಲಿಷ್ಠ ಧಾರ್ಮಿಕ ಮನದ ಒಪ್ಪಿಗೆಯನ್ನು ಗಳಿಸುವ ಅವಕಾಶ ಅದಕ್ಕಿಲ್ಲವಾಯಿತು. ಹಿಂದುಗಳಕಡೆಯಿಂದ ನಾನಕ ಪ್ರಯತ್ನಿಸಿದ. ಆದರೆ ಸತತ್ವಃ ವಿಶ್ವಜನೀನವಾಗಿದ್ದರೂ ಅವನ ಧರ್ಮ ವ್ಯವಹಾರದಲ್ಲಿ ಬರಿಯೊಂದು ಉಪಜಾತಿಯಾಯಿತು. ಸಾಧಾರಣ ರಾಜಕೀಯ ಉತ್ಸಾಹವನ್ನೂ ಆಸಕ್ತಿ

ಯನ್ನು ಎಬ್ಬಿಸಲೂ ಅಕ್ಬರ ಯತ್ನಿಸಿದ; ಆದರೆ ಆ ಯತ್ನವೂ ವ್ಯರ್ಥವೇ ಆಯಿತು. ಮಧ್ಯ ಏಶಿಯದ ತತ್ವದಂತೆ ಕಟ್ಟಿದ ನಿರಂಕುಶ ಸಾಮ್ರಾಜ್ಯವು ಎರಡೂ ಸಮಷ್ಟಿಗಳಲ್ಲಿಯ ಪ್ರಶಾಸನ ವಿಚಕ್ಷಣತೆಯುಳ್ಳ ದೊಡ್ಡವರನ್ನೂ ರಾಜರನ್ನೂ ರಾಜಸ್ಥಾನೀಯರನ್ನೂ ಏಕೀಕೃತ ಸಾಮ್ರಾಜ್ಯಕ ಇಂಡಿಯದ ನಿರ್ಮಾಣಕ್ಕಾಗಿ ದುಡಿಯಲು ನಿಮಂತ್ರಿಸಲಾರದಾಯಿತು; ಜನದ ಸಚೇತನ ಸಮ್ಮತಿ ಅದಕ್ಕೆ ಬೇಕಾಗಿತ್ತು; ಅದೋ ನಿಷ್ಕ್ರಿಯವಾಗಿಯೇ ಉಳಿಯಿತು–ಏಕೆಂದರೆ, ರಾಜಕೀಯ ಧ್ಯೇಯ ಹಾಗೂ ಸಂಸ್ಥೆಗಳು ಎಚ್ಚತ್ತಿರಲಿಲ್ಲ. ಆ ಮೊಗಲ ಸಾಮ್ರಾಜ್ಯ ರಮ್ಯವಾಗಿತ್ತು, ಬಲಿಷ್ಠವಾಗಿತ್ತು, ಜನೋಪಕಾರಿಯಾಗಿತ್ತು; ಔರಂಗಜೇಬನ ಧರ್ಮಶಾಸ್ತ್ರ ಎಷ್ಟೇ ಇದ್ದರೂ ಧರ್ಮದಲ್ಲಿ ಅಂದಿನ ಎಲ್ಲ ಸಮಕಾಲೀನ ಯೌರೋಪ್ಯ ರಾಜ್ಯ ಅಥವಾ ಸಾಮ್ರಾಜ್ಯಗಳಿಗಿಂತಲೂ ಅತಿ ಹೆಚ್ಚು ಉದಾರವೂ ಸಹಿಷ್ಣುವೂ ಆಗಿತ್ತು. ಅದರ ಆಳಿಕೆಯಲ್ಲಿ ಸೈನಿಕ ಹಾಗೂ ರಾಜಕೀಯ ಶಕ್ತಿಯಲ್ಲಿಯೂ ಆರ್ಥಿಕ ಐಶ್ವರ್ಯದಲ್ಲಿಯೂ ಕಲೆ–ಸಂಸ್ಕೃತಿಗಳ ಉಜ್ವಲತೆಯಲ್ಲಿಯೂ ಇಂಡಿಯ ಉನ್ನತವಾಗಿ ನಿಂತಿತ್ತು. ಅದಕ್ಕೂ ಹಿಂದಿದ್ದ ಸಾಮ್ರಾಜ್ಯಗಳಂತೆಯೇ ಅದು ಇನ್ನೂ ಹೆಚ್ಚು ದುರ್ಧರ ಕಷ್ಟದಲ್ಲಿ ಪರ್ಯವಸಾನಹೊಂದಿತು; ಅದೇ ಮೇರೆಗೆ ಹೊರಗಿನ ದಾಳಿಯಿಲ್ಲದೆ ಬರಿ ಆಂತರಿಕ ವಿಘಟನೆಯಿಂದಲೇ ಹಾಗೆ ಕೊನೆಗಂಡಿತು. ಸೈನಿಕ, ಪ್ರಶಾಸನಿಕ, ಕೇಂದ್ರೀಕೃತ ಸಾಮ್ರಾಜ್ಯವು ಭಾರತದ ಜೀವಂತ ರಾಜಕೀಯ ಐಕ್ಯವನ್ನು ಉಂಟುಮಾಡಲಾರದು. ಪ್ರಾದೇಶಿಕ ಜನಾಂಗಗಳಲ್ಲಿ ಹೊಸಬಾಳು ಮೂಡಿದಂತೆ ತೋರಿದರೂ ಯೌರೋಪ್ಯ ರಾಷ್ಟ್ರಗಳು ತಲೆಹಾಕಿದ್ದರಿಂದ ಆ ಸಂಭವವೂ ಚಿಗುರಿನಲ್ಲೇ ಮುರುಟಿಹೋಯಿತು ಹಾಗೆ ಅದು ಮುರುಟಿಹೋಗಲು ಪೇಷ್ವೆಗಳ ಅಕೃತಕೃತ್ಯತೆ ನಿರ್ಮಿಸಿದ ಅವಕಾಶವನ್ನು ಯುರೋಪಿಯನ್ನರು ಬಳಸಿಕೊಂಡದ್ದೂ ಅನಂತರ ನಿರಾಶಕ್ಷೋಭೆ ಅರಾಜಕತೆ ಮತ್ತು ಕ್ಷಯಗಳು ಸಂಭವಿಸಿದ್ದೂ ಕಾರಣಗಳಾದವು.

ಅಳಿಗಾಲದ ಎರಡು ಉದ್ಧಾರ ಪ್ರಯತ್ನಗಳು :

ಆ ವಿಘಟನೆಯ ಅವಧಿಯಲ್ಲಿ ಎರಡು ಪ್ರಶಂಸನೀಯ ನಿರ್ಮಿತಿಗಳು ರೂಪಗೊಂಡವು. ಆ ರೂಪಣವು ಹಳೆಯ ಪರಿಸ್ಥಿತಿಯಲ್ಲಿ ಹೊಸ

ಬಾಳನ್ನು ರಚಿಸಲು ಅಡಿಗಲ್ಲನ್ನು ಹಾಕುವ ಭಾರತೀಯ ರಾಜಕೀಯ ಮನದ ಕೊನೆಯ ಯತ್ನವಾಗಿತ್ತು. ಆದರೆ ಅದರಲ್ಲಿ ಯಾವ ಒಂದೂ ಸಮಸ್ಯೆಯನ್ನು ಪರಿಹರಿಸುವ ಬಗೆಯದಾಗಿ ಪರಿಣಮಿಸಲಿಲ್ಲ. ಮೊದಲ ನಿರ್ಮಿತಿಯೆಂದರೆ ರಾಮದಾಸರ ಕಲ್ಪನೆಯ ಮೇರೆಗೆ ಎದ್ದ ಮಹಾರಾಷ್ಟ್ರಧರ್ಮ, ಶಿವಾಜಿ ಅದಕ್ಕೆ ರೂಹುಗೊಟ್ಟದ್ದು. ಹಳೆಯ ಬದುಕು ಭಾವನೆಗಳಿಂದು ಇನ್ನೂ ತಿಳಿಯ ಬಹುದಾಗಿದ್ದ ಅಥವಾ ನೆನಪಿನಲ್ಲಿದ್ದ ಸ್ಥಿತಿಯನ್ನು ಪುನರುತ್ಥಾಪಿಸಲು ಅದು ಪ್ರಯತ್ನಿಸಿ ಕೃತಕೃತ್ಯವಾಗದಾಯಿತು. ಆಧ್ಯಾತ್ಮಿಕ ಉತ್ತೇಜನ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಅದರ ಸ್ಥಾಪನೆಗೆ ನೆರವಿತ್ತರೂ ಎಲ್ಲ ಭೂತ ಪುನರುತ್ಥಾಪನದ ಪ್ರಯತ್ನಗಳಂತೆ ಅದೂ ವ್ಯರ್ಥವಾಯಿತು. ಎಷ್ಟೇ ಪ್ರತಿಭೆ ಯಿದ್ದರೂ ಪೇಷ್ವೆಗಳು—ಮೂಲ ಸ್ಥಾಪಕನ ಮುನ್ನೋಟವಿಲ್ಲದವರಾಗಿದ್ದರು ಮತ್ತು ಆ ಕಾರಣದಿಂದ ಬರಿ ಸೈನಿಕ ಹಾಗೂ ರಾಜಕೀಯ ಸಂಯುಕ್ತ ರಾಜ್ಯ ವನ್ನಷ್ಟೇ ಸ್ಥಾಪಿಸಲು ಶಕ್ತರಾದರು. ಅವರ ಸಾಮ್ರಾಜ್ಯ ಸ್ಥಾಪನೆಯ ಪ್ರಯತ ಯಶಸ್ವಿಯಾಗದಿರಲು ಅದು ಪ್ರಾದೇಶಿಕ ದೇಶಪ್ರೇಮದಿಂದ ಸ್ಫೂರ್ತಿ ಪಡೆದ ದ್ದಲ್ಲದೆ, ಆ ಸ್ಫೂರ್ತಿ ತನ್ನ ಇತಿಮಿತಿಗಳ ಹೊರಗೆ ವಿಸ್ತರಿಸಲಾರದಾಗಿ ಏಕೀ ಕೃತ ಇಂಡಿಯದ ಜೀವಂತ ಧ್ಯೇಯವನ್ನು ಮುಟ್ಟಲಾರದಾಯಿತು. ಎರಡನೆಯ ದಾದ ಶೀಖ ಖಾಲ್ಸಾ ಆದರೋ ಆಶ್ಚರ್ಯಕರವಾಗಿ ಅನ್ಯಾದೃಶವೂ ಹೊಸದೂ ಆದ ನಿರ್ಮಿತಿಯಾಗಿತ್ತಲ್ಲದೆ ಅದು ಹಿಮ್ಮೊಗವಾಗಿರದೆ ಮುಮ್ಮೊಗವಾಗಿತ್ತು. ತನ್ನ ದೇವಸತ್ತಾಕ ಶಿಖರದಲ್ಲೂ ಪ್ರಜಾಸತ್ತಾಕ ಸ್ವರೂಪ-ಸತ್ವಗಳಲ್ಲೂ ಅದು ಮೊದಲಿನದಕ್ಕಿಂತ ದೂರವೂ ಅದ್ವಿತೀಯವೂ ಆಗಿತ್ತು; ಅದಕ್ಕೆ ಆಳವಾದ ಆಧ್ಯಾತ್ಮಿಕ ಪ್ರಾರಂಭವೂ ಇತ್ತು. ಅದು ಇಸ್ಲಾಂ ಮತ್ತು ವೇದಾಂತಗಳ ಗಂಭೀರಾಂಶಗಳನ್ನು ಒಂದುಗೂಡಿಸಲು ಯತ್ನಿಸಿತು. ಆದರೇನು? ಅದು ಮಾನವತೆಯ ಮೂರನೆಯ ಇಲ್ಲವೆ ಆಧ್ಯಾತ್ಮಿಕ ಅವಸ್ಥೆಯನ್ನು ಹೊಗುವ ಅಕಾಲಿಕ ಚಳವಳಿಯಾಗಿತ್ತು. ಅದರಿಂದ ಅದು ಒಳಗಿನ ಭಾವನೆಗೂ ಹೊರ ಗಿನ ಬಾಳಿಗೂ ನಡುವೆ ವಾಹಕ-ಮಾಧ್ಯಮವಾದ ಸಂಪನ್ನ ರಚನಾತ್ಮಕ ವಿಚಾರ—ಸಂಸ್ಕೃತಿಗಳನ್ನು ನಿರ್ಮಿಸಲಾರದಾಯಿತು. ಹೀಗೆ ಕುಂಠಿತವೂ ಅಪೂರ್ಣವೂ ಆಗಿ ಪ್ರಾರಂಭಿಸಿದ ಅದು ಪರಿಮಿತವಾದ ಸ್ಥಾನಿಕ ಎಲ್ಲೆಯೊ ಳಗೇ ಅವಸಾನ ಹೊಂದಿತು; ತೀವ್ರತೆಯನ್ನು ಸಾಧಿಸಿದರೂ ಅದಕ್ಕೆ ವಿಸ್ತರಣ

ಶಕ್ತಿಯನ್ನುಗಳಿಸಲಾಗಲಿಲ್ಲ. ಆ ಪ್ರಯತ್ನವನ್ನು ಯಶಸ್ವಿಗೊಳಿಸಲು ಬೇಕಾದ ಪರಿಸ್ಥಿತಿ ಆಗ ಇರಲಿಲ್ಲ.

ಆ ಮೇಲೆ ಕಾವಳ ಕಟ್ಟಿತು; ಎಲ್ಲ ರಾಜಕೀಯ ಆರಂಭ ಹಾಗೂ ನಿರ್ವಾಣಗಳ ತಾತ್ಕಾಲಿಕ ಕೊನೆಗಾಲ ಪ್ರಾಪ್ತವಾಯಿತು. ಪಶ್ಚಿಮದ ಧ್ಯೇಯಗಳನ್ನೂ ಧ್ಯೇಯಸ್ವರೂಗಳನ್ನೂ ದಾಸವಿಧೇಯತೆಯಿಂದ ನಕಲು ಮಾಡುವ ಕಳೆದ ತಲೆಮಾರಿನ ನಿರ್ಜೀವ ಪ್ರಯತ್ನವು ಭಾರತೀಯರ ರಾಜಕೀಯ ಮನ ಮತ್ತು ಪ್ರತಿಭೆಗಳ ನಿಜವಾದ ಕುರುಹಲ್ಲ. ಆದರೆ ಪುನಃ ಗಲಿಬಿಲಿಯ ಹಿಮಪಟಲಗಳಿಲ್ಲವುಗಳ ನಡುವೆ ಇನ್ನೂ ಹೊಸ ಸಂಧ್ಯೆ ಹೊರಸೂಸುವ ಸಾಧ್ಯತೆಯಿದೆ– ಸಂಜೆಯ ಸಂಧ್ಯಾಕಾಲವಲ್ಲ, ಬೆಳಗಿನ ಒಂದು ಯುಗಸಂಧ್ಯೆ. ಪ್ರಾಚೀನ ಭಾರತ ಸತ್ತಿಲ್ಲ ಅಥವಾ ಅದು ತನ್ನ ಕಡೆಯ ರಚನಾತ್ಮಕ ಮಾತನ್ನೂ ಆಡಿ ಮುಗಿಸಿಲ್ಲ; ಅದಿನ್ನೂ ಬದುಕಿದೆ ಮತ್ತು ತನಗಾಗಿಯೂ ಮಾನವ ಜನಾಂಗಗಳಿಗಾಗಿಯೂ ಮಾಡತಕ್ಕ ಕಜ್ಜವಿದೆ. ಆಂಗ್ಲೀಕೃತ ಪೌರಸ್ತ್ಯರನ್ನು, ಪಶ್ಚಿಮದವರ ವಿನಮ್ರ–ವಿಧೇಯ ಶಿಷ್ಯರನ್ನು, ಪಶ್ಚಿಮದ ಜಯಾಪಜಯಗಳ ಚಕ್ರವನ್ನು ನಕಲು ಮಾಡುವವರನ್ನು ನಿರ್ಮಿಸುವುದಲ್ಲ; ಅದು ಎಬ್ಬಿಸಿ ನಿಲ್ಲಿಸಬೇಕಾದುದೆಂದರೆ ಈಗಲೂ ಹಳೆಯದೂ ಅವಿಸ್ಮರಣೀಯವೂ ಆದ ಶಕ್ತಿಯನ್ನು ಬೆಳಿಸಿಕೊಂಡು, ಆ ಶಕ್ತಿ ತನ್ನ ಗಭೀರತಮ ಆತ್ಮವನ್ನು ಪುನಃ ಪಡೆದು, ಬಲದ ಹಾಗೂ ಬೆಳಕಿನ ಸರ್ವೋಚ್ಚ ಶಿಖರದತ್ತ ತಲೆಯೆತ್ತಿ ತನ್ನ ಧರ್ಮದ ಸಂಪೂರ್ಣ ಅರ್ಥವನ್ನೂ ವಿಶಾಲತರ ರೂಪವನ್ನೂ ಕಂಡು ಹಿಡಿಯುವಂತೆ ಎಸಗಬೇಕು.

ಪದಾರ್ಥಕೋಶ

ಅ

ಅತ್ಯಯಪ್ರಸಂಗ	Emergency
ಅತಿಭೌತ ತತ್ವಜ್ಞಾನ	Metaphysics
ಅರ್ಥನೀತಿ	Economics
ಅವಯವಿ	Organism
ಅಧಶ್ಚೇತನೆ	Subconscient
ಅಧಿಷ್ಠೈಸು	Supervise, Superintend
ಅನಿರ್ಬಂಧ, ಸ್ವಾತಂತ್ರ್ಯ ಸ್ವಾಯತ್ತತೆ, ಸ್ವಾಧೀನತೆ	Freedom, liberty, autonomy, independence
ಅನ್ನಮಯ	Physical (Consciousness)
ಅನುಜ್ಞೆ, ಅಜ್ಞಪ್ತಿ	Decree·
ಅಭಿಲೇಖ, ದಾಖಲೆ	Record
ಅಭಿವ್ಯಕ್ತಿ, ಬಾಹ್ಯಪ್ರಕಾಶ	Expression, manifestation
ಅರಸೊತ್ತಿಗೆ, ಶಾಸನ	Rule
ಅವಸಭೆ	Lower Asembly

ಆ

ಆನುವಂಶಿಕ	Hereditary
ಆದರ್ಶ, ಧ್ಯೇಯ	Ideal
ಆದೇಶ	Order; Substitute
ಆಧಾರ, ಪ್ರಾಧಿಕಾರ-ರಿ	Sanction, authority
ಆಪರಾಧಿಕ, ದಂಡನೀಯ	Criminal
ಆರಾಧನೆ	Pursuit

ಉ

ಉದ್ಯಮ, ಉದ್ಯಮವಾದ, ಉದ್ಯಮಪದ್ಧತಿ	Industry, industrialism
ಉಪನಿವೇಶ, ಔಪನಿವೇಶಿಕ	Colony, colonial
ಉಪವೇಶನ	Sitting

ಅಂ

ಅಂಗ, ನಿಕಾಯ, ಶರೀರ	Body
ಅಂಗ, ಅಂಶ	Element, part

ಕ	
ಕಲ್ಪನೆ	Idea
ಕಾರ್ಯಪಾಲಕ-ಲಿಕೆ	Executive; Executive Department
ಕಾಲ್ಪನಿಕ	Imaginary, fictitious
ಕುಲ, ಗೋತ್ರ	Race, clan, tribe
ಕೃತ್ಯ	Function
ಕ್ಷಯ	Decay
ಗ	
ಗಣರಾಜ್ಯ, ಗಣಪ್ರಭುತ್ವ	Republic
ಜ	
ಜನ, ಜನತೆ, ಜನಾಂಗ	People
ಜರಣ	Digestion, decay, assimilation
ಜಾನಪದ ಸಭೆ, ಸಾಮಾನ್ಯಸಭೆ	General Assembly, House of Commons
ಧ	
ಧರ್ಮ, ವಿಧಿ	Religion, duty, law
ಧರ್ಮಾಧಿಕಾರಿ, ನ್ಯಾಯಾಧಿಕಾರಿ	Judge
ನ	
ನಗರಸಭೆ, ನಗರಪಾಲಿಕೆ	Municipality
ನಿಗಮನಿಸು	Conclude
ನಿರಂಕುಶಪ್ರಭುತ್ವ	Autocracy
ನಿಯಂತ್ರಣ	Control
ನಿರ್ವಾಚನ, ಆಯ್ಕೆ	Election
ಪ	
ಪದ್ಧತಿ	System
ಪರಿಮಿತ, ಮರ್ಯಾದಿತ	Limited
ಪರಿಬಂಧಕ	Binding, encircling, restricting
ಪರಿಸೀಮಿತ	Delimited, bounded
ಪಾರಂಪರಿಕ	Traditional
ಪುರೋಹಿತಪ್ರಭುತ್ವ, ಬ್ರಾಹ್ಮ ಅಥವಾ ಮತೀಯ ಪ್ರಭುತ್ವ, ದೇವಸತ್ತೆ	Theocracy

ಪೌರ	Metropolitan
ಪೌರಸ್ತ್ಯ	Oriental
ಪ್ರಜಾಪ್ರಭುತ್ವ, ಪ್ರಜಾಸತ್ತೆ	Democracy
ಪ್ರತ್ಯಾಭೂತಿ	Assurance, guarantee
ಪ್ರತಿಭೆ	Intuition
ಪ್ರತಿನಿಹಿತ	Representing
ಪ್ರಶಾಸನ, ಆಡಳಿತ	Administration
ಪ್ರಾಣಮಯ, ಜೈವಿಕ	Vital
ಮ	
ಮನೋಮಯ, ಮಾನಸಿಕ	Mental
ಮನೋಧರ್ಮ, ಮನೋಭೂಮಿಕೆ	Psychology
ಮನೋವೃತ್ತಿ	Attitude, temperament
ಮಹಾಶಯ	Aspiration
ಮೂಲಪ್ರವೃತ್ತಿ	Instinct
ಯ	
ಯಾಂತ್ರಿಸು, ಯಾಂತ್ರೀಕರಣ	Mechanise, mechanisation
ರ	
ರಾಜನೀತಿ	Politics
ರಾಜಪ್ರಭುತ್ವ	Monarchy
ರಾಜ್ಯ, ರಾಜಕೀಯ	State, political
ರಾಜ್ಯಧರ್ಮ, ರಾಜ್ಯಪದ್ಧತಿ	Polity
ಲ	
ಲಯ	Dissolution; Rhythm
ಲಕ್ಷಣ	Character, characteristic, feature
ವ	
ವಲಸೆಹೋಗು	Migrate
ವಿಧಾನ,ವೈಧಾನಿಕ	Legislation, legislative
ವಿನಿಯಮ	Regulation
ವಿಸಂಧಿ	Hiatus, gap
ವ್ಯಂಜನ, ವ್ಯಂಜಕ, ವಾಹಕ,	Expression, vehicle
ವ್ಯವಸ್ಥೆ	Order, arrangement
ವ್ಯಷ್ಟಿ, ವ್ಯಕ್ತಿ	Individual

ಶ

ಶಕ್ತಿ, ಅಧಿಕಾರ	Power
ಶರ್ತ	Condition
ಶಾಸೀನಿಕಾಯ, ಶಾಸಕನಿಕಾಯ	Governing Body

ಸ

ಸತ್ರ	Session
ಸತ್ವ	Spirit
ಸಂ ನುಯ	Convention
ಸಮಷ್ಟಿ, ಸಮುದಾಯ	Community
ಸಮಕ್ರಮ , ಸಮನ್ವಯ	Co-ordination
ಸಮವಾಯ, ಃ ಸಮವೇತ	Co-operation, Co-operative
ಸಮಾಜನೀತಿ	Sociology
ರ್ವಾಧಿಕಾರ	Dictatorship
ಸ್ವರೂಪ	Form
ಾರೂಪ್ಯ, ಸಮರೂಪ	Uniformity, uniform
ಾರ್ವಭೌಮ, ಪ್ರಭು	Sovereign
ಘ	Guild, union
ಘಟಿತ	Organised, organic
ವಿಧಾನ	Constitution
ಪ್ರಭುತ್ವ ಶಾಸನ, ಸ್ವಯಂಕಾರ	SelfRule
ಸ್ವಯಂಭೂತಿ	Spontaneity

ಹ

ಹಕ್ಕು, ಅಧಿಕಾರ	Right
ಹಬ್ಬ	Element, offshoot

ಶುದ್ಧಿಪತ್ರಿಕೆ

ಪುಟ	ಸಾಲು	ಶುದ್ಧರೂ
೭	೨೪	ಬ್ರಾಹ್ಮಣರ
೧೫	೨೩	ಹಾಗೂ ಅ
೧೬	೯	ರಾಜಶಕ್ತಿ
,,	೨೦	ಧರ್ಮಜ್ಞರ
೨೩	೫	ಅಧಶ್ಚೇತನೆ
೩೫	೨	ನಾಯಕಸು
,,	೪	ಅಂಗಾಂಗಿಭ
೩೯	೧೪	ಚಾತುರ್ವರ್ಣ್ಯ
೪೬	೨೫	ಪ್ರಕಾಶಮಾ
೫೪	೧೨	ಸಮಾಹರಣ
೬೦	೧	(ಚಾತುರ್ವ
೬೨	೨೪	ಅಶಕ್ತಿಯ
೯..	೧೬	
	೯	ಐಕ್ಯಸಾಧನ
	೧೦	ವೈಲಕ್ಷಣ್ಯ
೭೬	೨೪	ಯುಧಿಷ್ಠಿರ
೮೧	೮	ದುಷ್ಟ
೮೨ ೧೬ ಮತ್ತು ೧೭		ತೆಂಕಲುಗಳ
,,	೨೫	ಮಹಾವಿಸ್ತಾ
೮೫	೪	ಟ್ಯೂಟನ್
೮೬	೧೩	ಮುಸಲ್ಮಾ
,,	೧೪	ವರಲ್ಲಿ
೮೭	೧೨	ಶತಮಾನಗ
,,	೧೩	ಶಿವಾಜಿರಾ
,,	೨೦	ಮುಂದಟ್ಟ
೮೮	೧೧	ಆಕ್ರಮಣ
,,	೨೨	ಷ್ಟಿ
	೨೫	ತೆ

ತೇ
ಸಿದ್ದವು
ರಡರಲ್ಲಿ
ು
ಸ,
ಾಜನೀತಿ
ರ್ವಾಧಿಕಾರ
ೂಪ
ೂಪ್ಯ, ಸಮರೂಪ
ರ್ವಭೌಮ, ಪ್ರಭು
ಟಿತ
ಾನ
ಹಾಜನ

ಸುಲಭ ಸಾಹಿತ್ಯ ಪ್ರಕಟಣೆ

ಕುಮಟಾ

ಕೇವಲ

೧೨ ಪುಸ್ತಕಗ

೧೩೦೦ ಪುಟಗಳಷ್ಟು

ಲಲಿತ ಸಾಹಿತ್

ಇಂದೇ ಚಂದಾದಾರರಾಗಿರಿ

ಇಂದೇ ಚಂದಾದಾರರಾಗಿರಿ

ಗಗನಚಂದ್ರ
ಮುಂದೇನು ?
ದೆವ್ವದ ಕಥೆಗಳು

ನಾಡಿಗೇರ

ಅಚ್ಚಿನಲ್ಲಿ

ಅತಿದೂರದ ಜಗತ್ತಿನಲ್ಲಿ

ಕುಮಾರಿ ಸುನೇತ್ರಾ

ದೇವತೆಗಳ ಆಕಾಶವಾಣಿ.

೧೦೦-೧೫೦ ಪುಟಗಳು

ಮಿತ್ರಮಂಡಳದ ಪ್ರಕಟನೆಗಳು

ಶ್ರೀ ಅರವಿಂದ ಮಹರ್ಷಿ.

ಶ್ರೀ ರಮಣ ಮಹರ್ಷಿಗಳು (ಅಚ್ಚಿನ

ಚಂದಾದಾರರಿಗೆ ಅಂಚೆ ವೆಚ್ಚವಿ